ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 8 ಸೋಮವಾರ 2024

ಸಂಪುಟ: 44 | ಸಂಚಿಕೆ: 262 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯದ ರೈತರ ಬೆಳೆ ಕೊಯ್ಲು, ಒಕ್ಕಣೆಗೆ ಅನುಕೂಲವಾಗುವಂತೆ

ಹಾರ್ವೆಸ್ಟರ್ ಹಬ್ ಸ್ಥಾಪನೆ

ಮೈಸೂರು ಜಿಲ್ಲೆಗೆ ಎರಡು ಹಾರ್ವೆಸ್ಟರ್ ಯಂತ್ರ

■ಬಾಪುಲಿಂಗರಾಜ್ ಅರಸ್

ಮೈಸೂರು, ಜ.7–ಭತ್ತ, ರಾಗಿ ಸೇರಿದಂತೆ ಇತರೆ ಬೆಳೆಗಳ ಕೊಯ್ಲು ಹಾಗೂ ಒಕ್ಕಣೆಗಾಗಿ ಇಡೀ ದೇಶದಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ ಸರ್ಕಾರವೇ ಹಾರ್ವೆಸ್ಟರ್ ಹಬ್ ಸ್ಥಾಪನೆ ಮಾಡುತ್ತಿದ್ದು, ಮೈಸೂರು ಜಿಲ್ಲೆಗೆ ಕೋಟ್ಯಾಂತರ ರೂ. ಮೌಲ್ಯದ ಎರಡು ಸುಧಾರಿತ ಹಾರ್ವೆಸ್ಟರ್ ಹೈಟೆಕ್ ಯಂತ್ರ ನೀಡಲಾಗುತ್ತಿದೆ.

ಕೃಷಿ ಚಟುವಟಿಕೆಗಳಿಗೆ ಆಧುನಿಕ ಸ್ಪರ್ಶ ನೀಡಲು ಸರ್ಕಾರ ಸುಧಾರಿತ ಹೈಟೆಕ್ ಯಂತ್ರ ಪರಿಚಯಿಸುತ್ತಿದೆ. ಈ ಮೂಲಕ ರೈತರು ಕೃಷಿಗೆ ಮೇಲೆ ತೊಡಗಿಸುವ ಹೆಚ್ಚಿನ ಬಂಡವಾಳ ತಗ್ಗಿಸಲು ಹಾಗೂ ಅಧಿಕ ಇಳುವರಿ ರೈತರ ಕೈ ಸೇರುವಂತೆ ಮಾಡಲು ಹಾರ್ವೆಸ್ಟರ್ ಯಂತ್ರಗಳನ್ನು ರಾಜ್ಯ ಸರ್ಕಾರ ನೀಡುತ್ತಿದೆ

ಕರ್ನಾಟಕದಾದ್ಯಂತ ಒಟ್ಟು 300 ಹಾರ್ವೆಸ್ಟರ್ ಯಂತ್ರಗಳನ್ನು ಹಂತ ಹಂತವಾಗಿ ಪರಿಚಯಿಸಲು ಸರ್ಕಾರ ನಿರ್ಧರಿಸಿದೆ. ಈಗ 100 ಹಾರ್ವೆಸ್ಟರ್ ಯಂತ್ರಗಳನ್ನು ಮೊದಲ ಹಂತದಲ್ಲಿ ನೀಡಲಾಗುತ್ತಿದ್ದು, ತಲಾ 1 ಯಂತ್ರಕ್ಕೆ 2 ಕೋಟಿ ರೂ.ನಂತೆ ಸರ್ಕಾರ 200 ಕೋಟಿ ವೆಚ್ಚ ಮಾಡುತ್ತಿದೆ. ಭತ್ತ, ರಾಗಿ ಇತರೆ ಬೆಳೆಗಳು ಏಕಕಾಲದಲ್ಲಿ ಕೊಯ್ಲಿಗೆ ಬರಲಿದೆ. ●8ನೇ ಪುಟಕ್ಕೆ



ಫೈಲ್ ಚಿತ್ರ

ತಮಿಳುನಾಡು, ಆಂಧ್ರ ಪ್ರದೇಶ ಸೇರಿದಂತೆ ಇತರೆ ರಾಜ್ಯಗಳಿಂದ ಬರುವ ಖಾಸಗಿಯವರ ಹಾರ್ವೆಸ್ಟರ್ ಯಂತ್ರಗಳು ರೈತರ ಬೇಡಿಕೆ ಮತ್ತು ಅಗತ್ಯಕ್ಕೆ ತಕ್ಕಂತೆ ಕ್ಷಿಪ್ರವಾಗಿ ಕಾರ್ಯನಿರ್ವಹಿಸುವುದಿಲ್ಲ. ಆದರೆ ಈಗ ಕರ್ನಾಟಕ ಸರ್ಕಾರ ಖರೀದಿ ಮಾಡುತ್ತಿರುವ ಹಾರ್ವೆಸ್ಟರ್ ಯಂತ್ರಗಳು ಹೈಟೆಕ್ ಆಗಿದ್ದು, ಅಡ್ವಾನ್ಸ್ ಆಗಿದೆ. ಈ ಯಂತ್ರಗಳು ಖಾಸಗಿಯವರ ಯಂತ್ರಗಳಿಗಿಂತ ಕ್ಷಿಪ್ರಗತಿಯಲ್ಲಿ ಕಾರ್ಯನಿರ್ವಹಿಸಲಿದೆ.

66 ದೇಶದಲ್ಲಿ ಕರ್ನಾಟಕ ಮೊದಲ ರಾಜ್ಯ

ಸರ್ಕಾರವೇ ಹಾರ್ವೆಸ್ಟರ್ ಯಂತ್ರ ಖರೀದಿಸಿ ರೈತರ ಬಳಕೆಗೆ ನೀಡುತ್ತಿರುವ ಭಾರತದ ಮೊದಲ ರಾಜ್ಯ ಕರ್ನಾಟಕವಾಗಿದೆ. ಮೈಸೂರು ಜಿಲ್ಲೆಗೆ ಎರಡು ಯಂತ್ರಗಳಿಗೆ ಬೇಡಿಕೆ ಸಲ್ಲಿಸಿದ್ದು, ಸರ್ಕಾರದಿಂದ ಸಕಾರಾತ್ಮಕ ಸ್ಪಂದನೆ ದೊರಕಿದೆ.

ಹಾರ್ವೆಸ್ಟರ್ ಯಂತ್ರಗಳ ಬಾಡಿಗೆ ಸೇರಿದಂತೆ ಇತರೆ ವಿಚಾರಗಳ ಬಗ್ಗೆ ಸರ್ಕಾರ ಇನ್ನೂ ಮಾರ್ಗಸೂಚಿ ಹೊರಡಿಸಿಲ್ಲ. ಸರ್ಕಾರದ ಆದೇಶದ ಮೇರೆಗೆ ಅದರ ಬಳಕೆಗೆ ಸಂಬಂಧಿಸಿದಂತೆ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

ಅತಿ ಹೆಚ್ಚಾಗಿ ಭತ್ತ ಬೆಳೆಯುವ ಕೆ.ಆರ್.ನಗರ ತಾಲೂಕಿಗೆ ಒಂದು ಹಾರ್ವೆಸ್ಟರ್ ಯಂತ್ರ ನೀಡಲಾಗುವುದು. ಮತ್ತೊಂದು ಯಂತ್ರವನ್ನು ತಿ.ನರಸೀಪುರ, ನಂಜನಗೂಡು ಹಾಗೂ ಮೈಸೂರು ತಾಲೂಕಿಗೆ ನೀಡಲಾಗುವುದು. ಈ ಯಂತ್ರಗಳಿಂದ ರೈತರಿಗೆ ಬಹು ಉಪಯೋಗವಾಗಲಿದೆ. ಕಾರ್ಮಿಕರ ಸಮಸ್ಯೆ ಬರುವುದಿಲ್ಲ, ಸಮಯ ಉಳಿತಾಯವಾಗುತ್ತದೆ.

–ಚಂದ್ರಶೇಖರ್, ಉಪನಿರ್ದೇಶಕ, ಕೃಷಿ ಇಲಾಖೆ, ಮೈಸೂರು ಜಿಲ್ಲೆ

ಕೃಷಿ ಚಟುವಟಿಕೆಗಳಿಗೆ ಆಧುನಿಕ ಸ್ಪರ್ಶ ನೀಡಲು ಸರ್ಕಾರ ಸುಧಾರಿತ ಹೈಟೆಕ್ ಯಂತ್ರ ಪರಿಚಯಿಸುತ್ತಿದೆ. ಹಾರ್ವೆಸ್ಟರ್ ಯಂತ್ರವನ್ನು 1826ರಲ್ಲಿ ಸ್ಕಾಟ್‌ಲ್ಯಾಂಡ್‌ನಲ್ಲಿ ಸಂಶೋಧಕ ರೆವರೆಂಡ್ ಪ್ಯಾಟ್ರಿಕ್ ಬೆಲ್ ರೀಪರ್ ವಿನ್ಯಾಸಗೊಳಿಸಿದರು. ವರ್ಷಗಳು ಕಳೆದಂತೆ ಇಂಜಿನಿಯರ್‌ಗಳ ಸಂಶೋಧನೆಯಿಂದ ಹಾರ್ವೆಸ್ಟರ್ ಯಂತ್ರಗಳು ಹೆಚ್ಚು ತಾಂತ್ರಿಕ ವಿನ್ಯಾಸ ಪಡೆಯುತ್ತಾ ಬಂದಿತು. ಈಗಿನ ಹಾರ್ವೆಸ್ಟರ್ ಯಂತ್ರಗಳು ಸುಧಾರಿತ ಹೈಟೆಕ್ ಯಂತ್ರಗಳಾಗಿವೆ. ಇದರಿಂದ ರೈತರು ಕಡಿಮೆ ದರದಲ್ಲಿ ಹಾರ್ವೆಸ್ಟರ್ ಯಂತ್ರಗಳ ಮೂಲಕ ಕೊಯ್ಲು, ಒಕ್ಕಣೆ ಮಾಡಿಸಬಹುದು.

ಸಹಕಾರಿ ಅಪೆಕ್ಸ್ ಬ್ಯಾಂಕ್‌ಗೆ 439 ಕೋಟಿ ವಂಚನೆ ಆರೋಪ

ಶಾಸಕ ರಮೇಶ್ ಜಾರಕಿಹೊಳಿ ಸೇರಿ ಮೂವರ ವಿರುದ್ಧ ಎಫ್‌ಐಆರ್

ಬೆಂಗಳೂರು, ಜ.7– ಬ್ಯಾಂಕ್ ಸಾಲ ಮರುಪಾವತಿಸದೆ ವಂಚಿಸಿರುವ ಆರೋಪದಡಿ ಮಾಜಿ ಸಚಿವ, ಗೋಕಾಕ್ ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ವಿರುದ್ಧ ನಗರದ ವಿ.ವಿ.ಪುರಂ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿರುವುದು ವರದಿಯಾಗಿದೆ.



ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಹಾಗೂ ಅದರ ಸಮೂಹ ಬ್ಯಾಂಕ್‌ಗಳಿಂದ ಸಾಲ ಪಡೆದು ಪಾವತಿಸದೇ ವಂಚಿಸುವ ಉದ್ದೇಶ ಹೊಂದಿದ್ದಾರೆ ಎಂದು ಆರೋಪಿಸಿ ಬ್ಯಾಂಕ್ ಮ್ಯಾನೇಜರ್ ರಾಜಣ್ಣ ದೂರು ದಾಖಲಿಸಿದ್ದಾರೆ.

ಬೆಳಗಾವಿ ಜಿಲ್ಲೆ ಗೋಕಾಕ್ ಫಾಲ್ಸ್ ರಸ್ತೆಯಲ್ಲಿರುವ ಸೌಭಾಗ್ಯಲಕ್ಷ್ಮಿ ಶುಗರ್ಸ್ ಲಿಮಿಟೆಡ್ ಕಂಪೆನಿಯ ಅಧ್ಯಕ್ಷ ರಮೇಶ್ ಜಾರಕಿಹೊಳಿ ಹಾಗೂ ನಿರ್ದೇಶಕ ವಸಂತ್ ವಿ.ಪಾಟೀಲ್ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶಂಕರ್ ಎ.ಪಾವಡೆ ಅವರು ಕಾರ್ಖಾನೆ ಸ್ಥಾಪನೆ, ವಿಸ್ತರಣೆ ಮತ್ತು ನಿರ್ವಹಣೆಗಾಗಿ ನಗರದ ಚಾಮರಾಜಪೇಟೆಯಲ್ಲಿರುವ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತದಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ್ದರು.

ಬ್ಯಾಂಕ್‌ನ ಷರತ್ತುಗಳನ್ನು ಒಪ್ಪಿ, ಕರ್ನಾಟಕ ಸಹಕಾರಿ ಅಪೆಕ್ಸ್ ಬ್ಯಾಂಕ್ ಮತ್ತು ಅದರ ಸಮೂಹ ಬ್ಯಾಂಕ್‌ಗಳಾದ ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ●8ನೇ ಪುಟಕ್ಕೆ

ಕೊಡಗಿನ ಕುಂದಬೆಟ್ಟದ ತಪ್ಪಲಿನಲ್ಲಿ ಪಾಂಡವರ ಕಾಲದ ಶಿವಲಿಂಗ ಪತ್ತೆ



ಮಡಿಕೇರಿ, ಜ.7– ದಕ್ಷಿಣ ಕೊಡಗಿನ ಕುಂದ ಗ್ರಾಮದ ಬೆಟ್ಟದ ತಪ್ಪಲಿನ ಪ್ರದೇಶದಲ್ಲಿ ಪಾಂಡವರ ಕಾಲದ್ದು ಎನ್ನಲಾದ 4 ಅಡಿ ಎತ್ತರದ ಶಿವಲಿಂಗವೊಂದು ಪತ್ತೆಯಾಗಿದೆ.

ಗ್ರಾಮದ ಕಿಲನ್ ಗಣಪತಿ ಹಾಗೂ ಸಹೋದರ ದರ್ಶನ್ ಅವರ ಕಾಫಿ ತೋಟದಲ್ಲಿ ಬೃಹತ್ ಮರದ ಬುಡದಲ್ಲಿ ಶಿವಲಿಂಗ ಪತ್ತೆಯಾಗಿದೆ. ಸುಮಾರು 800 ವರ್ಷ ಇತಿಹಾಸವುಳ್ಳ ಗುಮ್ಮಟ್ಟಿರ ಕುಟುಂಬದ ಜಾಗದಲ್ಲಿ ಪುರಾತನ ಕಾಲದ ಶಿವಲಿಂಗ ಪತ್ತೆಯಾಗಿದ್ದು, ಕುಟುಂಬಸ್ಥರು ಸಂತೋಷಗೊಂಡಿದ್ದಾರೆ.

ಗೋಳಿಮರದ ಅಡಿಯಲ್ಲಿ ಈ 4 ಅಡಿ ಎತ್ತರದ 3 ಅಡಿ ಅಗಲದ ಪುರಾತನ ಕಾಲದ ಬೃಹತ್ ಶಿವಲಿಂಗ ಪತ್ತೆಯಾಗಿರುವುದರಿಂದ ಇದು ಅಪಾರವಾದ ಶಕ್ತಿಯನ್ನು ಹೊಂದಿರುವುದಾಗಿ ಸ್ಥಳಕ್ಕಾಗಮಿಸಿದ ಹಿರಿಯ ಅರ್ಚಕರು ಹಾಗೂ ಗುಮ್ಮಟ್ಟಿರ ಕುಟುಂಬದ ಹಿರಿಯರು ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಶಿವಲಿಂಗದೊಂದಿಗೆ ತೀರ್ಥನಳ, ಆನೆ ಸ್ತಂಭ, ಕಲ್ಲಿನ ಇಟ್ಟಿಗೆಗಳು, ಸೋಮಸೂತ್ರ, ಪಾಣಿಪೀಠ ಸೇರಿದಂತೆ ಲಿಂಗದ ಕೆಳಗೆ ಹಾಸಿದ್ದ ಚಪ್ಪಡಿಕಲ್ಲುಗಳು ದೊರೆತಿವೆ. ಪ್ರಸಿದ್ಧ ಕುಂದಬೆಟ್ಟದ ಈಶ್ವರ ದೇವಾಲಯದಿಂದ ●8ನೇ ಪುಟಕ್ಕೆ

ಸಾರಿಗೆ ಬಸ್‌ಗಳಲ್ಲಿ 10 ರೂ. ನಾಣ್ಯ ತೆಗೆದುಕೊಳ್ಳಲೇಬೇಕು

ದೂರು ಬಂದರೆ ಇಲಾಖೆಯಿಂದ ಕ್ರಮದ ಎಚ್ಚರಿಕೆ

ಬೆಂಗಳೂರು, ಜ.7–ರಾಜ್ಯದ ಬಸ್ ಕಂಡಕ್ಟರ್‌ಗಳಿಗೆ ಸಾರಿಗೆ ಇಲಾಖೆ ಖಡಕ್ ಸೂಚನೆಯೊಂದನ್ನು ಭಾನುವಾರ ಕೊಟ್ಟಿದೆ. ಇಷ್ಟು ದಿನ 10 ರೂ. ನಾಣ್ಯ ಕೊಟ್ಟರೆ ಕಂಡಕ್ಟರ್‌ಗಳು ತೆಗೆದುಕೊಳ್ಳುತ್ತಿರಲಿಲ್ಲ. ನಾಣ್ಯ ಕೊಟ್ಟಾಗ ಇದು ಹೋಗಲ್ಲ ನೋಟು ಕೊಡಿ ಎಂದು ಹೇಳುತ್ತಿದ್ದರು. ಹೀಗಾಗಿ 10 ರೂ. ನಾಣ್ಯದ ಬಗ್ಗೆ ನಿರ್ಲಕ್ಷ್ಯ ವಹಿಸಿದ ಹಿನ್ನೆಲೆಯಲ್ಲಿ ತಿಳುವಳಿಕೆ ಪತ್ರದ ಮೂಲಕ ಸಾರಿಗೆ ಇಲಾಖೆ ಕಾರ್ಯದರ್ಶಿಯು ಎಲ್ಲಾ ನಿಗಮಗಳಿಗೂ ●8ನೇ ಪುಟಕ್ಕೆ



ಹುಲ್ಲಹಳ್ಳಿ ನಾಡಕಚೇರಿಯಲ್ಲಿ ಕಂಪ್ಯೂಟರ್ ಆಪರೇಟರ್ ಆತ್ಮಹತ್ಯೆ

ನಂಜನಗೂಡು, ಜ.7–ತಾಲೂಕಿನ ಹುಲ್ಲಹಳ್ಳಿ ನಾಡಕಚೇರಿ ಕಂಪ್ಯೂಟರ್ ಆಪರೇಟರ್ ಡೆತ್‌ನೋಟ್ ಬರೆದಿಟ್ಟು ನಾಡಕಚೇರಿ ಒಳಗೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಭಾನುವಾರ ನಡೆದಿದೆ.



ಸಾವಿಗೆ ಉಪ ತಹಸೀಲ್ದಾರ್ ಕಾರಣ ಎಂದು ಡೆತ್‌ನೋಟ್ ಬರೆದಿದ್ದ ನೌಕರ

ತಾಲೂಕಿನ ಹರತಲೆ ಗ್ರಾಮದ ಪರಮೇಶ್(35) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ. ಪರಮೇಶ್ ಕಳೆದ ಹಲವಾರು ವರ್ಷಗಳಿಂದಲೂ ಹುಲ್ಲಹಳ್ಳಿ ನಾಡ ಕಚೇರಿಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡಿಕೊಂಡಿದ್ದರು ಎನ್ನಲಾಗಿದ್ದು, ಭಾನುವಾರ ಮಧ್ಯಾಹ್ನ 4 ಗಂಟೆ ವೇಳೆಯಲ್ಲಿ ಕಚೇರಿಯಲ್ಲಿಯೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿ ಒದ್ದಾಡುತ್ತಿದ್ದರು. ಅಷ್ಟರಲ್ಲಿ ವಿಷಯ ತಿಳಿದು, ಅವರನ್ನು ಹುಲ್ಲಹಳ್ಳಿ ಆಸ್ಪತ್ರೆಗೆ ಕರೆದೊಯ್ದು, ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.



ಆತ್ಮಹತ್ಯೆಗೂ ಮುನ್ನ ಪರಮೇಶ್ ಡೆತ್ ನೋಟ್ ಬರೆದಿದ್ದು, ಅದರಲ್ಲಿ 'ನನಗೆ ಕಳೆದ ಏಪ್ರಿಲ್ ತಿಂಗಳಿಂದ ಸಂಬಳ ಆಗದೆ ಇರುವುದರಿಂದ ಜೀವನ ನಡೆಸುವುದೇ ದುಸ್ತರವಾಗಿದೆ. ಜೊತೆಗೆ ಹುಲ್ಲಹಳ್ಳಿ ನಾಡ ಕಚೇರಿ ಉಪತಹಶೀಲ್ದಾರ್ ಎನ್.ಪಿ.ಶಿವಕುಮಾರ್ ಅವರು ನಾನೊಬ್ಬ ಅಂಗವಿಕಲ ಎಂದು ಗೊತ್ತಿದ್ದರೂ ಸಹ ವೈಯಕ್ತಿಕ ದ್ವೇಷ ಸಾಧಿಸುತ್ತಾ ಮಾನಸಿಕ ಹಿಂಸೆ ನೀಡುತ್ತಿದ್ದರು. ಆದ್ದರಿಂದ ನಾನು ಮನನೊಂದು ಆತ್ಮಹತ್ಯೆಗೆ ಶರಣಾಗುತ್ತಿದ್ದೇನೆ. ನನ್ನ ಸಾವಿಗೆ ಉಪ ತಹಶೀಲ್ದಾರ್ ಎನ್.ಪಿ.ಶಿವಕುಮಾರ್ ಅವರೇ ನೇರ ಕಾರಣ' ಎಂದು ತಿಳಿಸಿದ್ದಾರೆ. ಇದನ್ನು ವಾಟ್ಸಪ್ ಸ್ಟೇಟಸ್‌ನಲ್ಲಿ ಹಾಕಿದ್ದು, ವೈರಲ್ ಆಗಿದೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪ್ರಧಾನಿ ಮೋದಿ ನಿಂದಿಸಿದ ಮೂವರು ಮಾಲ್ಡೀವ್ಸ್ ಸಚಿವರು ಅಮಾನತು

ಮಾಲೇ(ಮಾಲ್ಡೀವ್ಸ್), ಜ.7–ಲಕ್ಷದ್ವೀಪಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರವಾಸೋದ್ಯಮ ಉತ್ತೇಜಿಸಿದ ಬೆನ್ನಲ್ಲೇ ಭಾರತ ಹಾಗೂ ಮೋದಿ ವಿರುದ್ಧ ಮಾಲ್ಡೀವ್ಸ್ ಸಚಿವರು, ಕೆಲ ನಾಯಕರು ಹರಿಹಾಯ್ದಿದ್ದಕ್ಕೆ ಭಾರತದಲ್ಲಿ ಭಾರಿ ಆಕ್ರೋಶ ವ್ಯಕ್ತವಾಗಿತ್ತು.

ಇದರ ಜತೆಗೆ 'ಬಾಯ್ಕಾಟ್ ಮಾಲ್ಡೀವ್ಸ್' ಅಭಿಯಾನ ಕೂಡ ಆರಂಭಗೊಂಡಿತ್ತು. ವಿಶ್ವದ ಇತರ ರಾಷ್ಟ್ರಗಳ ನಾಯಕರು ಮಾಲ್ಡೀವ್ಸ್ ವಿರುದ್ಧ ಅಸಮಾಧಾನ ಹೊರಹಾಕಿದ್ದರು. ಈ ಎಲ್ಲಾ ಬೆಳವಣಿಗೆಗಳಿಂದ ಬೆಚ್ಚಿ ಬಿದ್ದ ಮಾಲ್ಡೀವ್ಸ್ ಸರ್ಕಾರ ಮೋದಿಯವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಸಚಿವರನ್ನು ಸಂಪುಟದಿಂದ ವಜಾ ಮಾಡಿದೆ. ಸರ್ಕಾರದ ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರ ಹೇಳಿಕೆ ಹಾಗೂ ಅಭಿಪ್ರಾಯವನ್ನು ಸರ್ಕಾರ ಒಪ್ಪುವುದಿಲ್ಲ. ಹೀಗಾಗಿ ಈ ಕ್ಷಣದಿಂದಲೇ ಅಂತಹ ಸಚಿವರನ್ನು ವಜಾ ಮಾಡಲಾಗಿದೆ ಎಂದು ಮಾಲ್ಡೀವ್ಸ್ ವಿದೇಶಾಂಗ ಸಚಿವಾಲಯ ಪ್ರಕಟಣೆ ಹೊರಡಿಸಿದೆ. ಸಚಿವರಾದ ಮರಿಯಾಮ್ ಶಿಯುನಾ, ಮಾಲ್ಷಾ ಹಾಗೂ ಹಸನ್ ಜಿಹಾನ್ ಅವರನ್ನು ಸಂಪುಟದಿಂದ ವಜಾ ಮಾಡಲಾಗಿದೆ. ಅಷ್ಟೇ ಅಲ್ಲ, ಇಂತಹ ಹೇಳಿಕೆಯಿಂದ ದ್ವಿಪಕ್ಷೀಯ ಸಂಬಂಧದ ಮೇಲೆ ●8ನೇ ಪುಟಕ್ಕೆ

ಕಾರು–ಸ್ಕೂಟರ್ ಮುಖಾಮುಖಿ ಡಿಕ್ಕಿ: ಇಬ್ಬರು ಶಿಕ್ಷಕಿಯರ ಸಾವು






ನಾಗರತ್ನ   ಮಂಜುಳಾ

ಶ್ರೀರಂಗಪಟ್ಟಣ: ಕಾರು ಮತ್ತು ಸ್ಕೂಟರ್ ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಶಿಕ್ಷಕಿಯರು ಮೃತಪಟ್ಟ ಘಟನೆ ತಾಲೂಕಿನ ಪಾಲಹಳ್ಳಿ ಬಳಿ ಭಾನುವಾರ ಸಂಭವಿಸಿದೆ.

ತಾಲೂಕಿನ ಬಸ್ತೀಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ನಾಗರತ್ನ (50) ಮತ್ತು ಪಿ.ಹೊಸಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಮಂಜುಳಾ (45) ●8ನೇ ಪುಟಕ್ಕೆ

ರಾಜ್ಯದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ

ಹುಬ್ಬಳ್ಳಿ: ರಾಜ್ಯದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ನಿರ್ಮಾಣವಾಗಿದ್ದು, ಕಾಂಗ್ರೆಸ್ ಸರ್ಕಾರ ಜನರಲ್ಲಿ ಭಯ ಹುಟ್ಟಿಸುವ ಕೆಲಸ ಮಾಡುತ್ತಿದೆ. ಏಳೇ ತಿಂಗಳಲ್ಲಿ ಸರ್ಕಾರಕ್ಕೆ ಅಧಿಕಾರದ ಮದ ಏರಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.



ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಇದು ದಬ್ಬಾಳಿಕೆ ಸರ್ಕಾರ. ಮುಖ್ಯಮಂತ್ರಿಗಳು, ಮಂತ್ರಿಗಳ ಭಾಷೆ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಧಕ್ಕೆ ಆಗುತ್ತಿದೆ. ಅನ್ಯಾಯದ ವಿರುದ್ಧ ಹೋರಾಟ ಮಾಡಿದರೆ ಅವರ ವಿರುದ್ಧ ಕೇಸ್ ಹಾಕುತ್ತಿದ್ದಾರೆ. ಈ ಸರ್ಕಾರದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ವಾತಾವರಣ ಇದೆ. ಕರ್ನಾಟಕದಲ್ಲಿ ಜನರಲ್ಲಿ ಭಯ ಹುಟ್ಟಿಸುವ ಪ್ರಯತ್ನ ನಡೆಯುತ್ತಿದೆ. ಅದರಲ್ಲಿ ಶ್ರೀಕಾಂತ್ ಪೂಜಾರಿ ಕೇಸ್ ಒಂದು. ಅವರ ವಿರುದ್ಧ ಯಾವುದೇ ಪ್ರಕರಣ ಇಲ್ಲದಿದ್ದರೂ, ಅವರನ್ನು ಒಳಗಡೆ ಹಾಕಿದರು. ಇದು ಎಮರ್ಜೆನ್ಸಿಯಲ್ಲಿ ಮಾತ್ರ ಸಾಧ್ಯ ಎಂದರು.

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಆಗಬಾರದು ಎನ್ನುವ ಕಾಂಗ್ರೆಸ್ ಕನಸು ಭಗ್ನ ಆಗುತ್ತಿದೆ. ಅದನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ. ಕಾಂಗ್ರೆಸ್ ಆಡಳಿತದ ಎಲ್ಲ ರಾಜ್ಯಗಳಲ್ಲೂ ಹೀಗೆ ಗದ್ದಲ ಆಗುತ್ತಿದೆ ಎಂದರು. ರಾಜ್ಯ ಕಾಂಗ್ರೆಸ್ಸಿಗರ ಅಧಿಕಾರದ ಮದ ಹಾಗೂ ಅಹಂಕಾರದ ವರ್ತನೆಯನ್ನು ಜನ ಬಹಳ ದಿನ ಸಹಿಸುವುದಿಲ್ಲ. ಹೀಗಾಗಿಯೇ ಎಮರ್ಜೆನ್ಸಿ ವಿರುದ್ಧ ಜನ ಸಿಡಿದೆದ್ದು ಬದಲಾವಣೆ ತಂದಿದ್ದು. ಜನ ವಿರೋಧಿ, ಅಭಿವೃದ್ಧಿ ಶೂನ್ಯ, ಆಡಳಿತದ ವೈಫಲ್ಯ ಮುಚ್ಚಿಕೊಳ್ಳಲು ಹೀಗೆ ಮಾಡುತ್ತಿದ್ದಾರೆ. ಈ ಕುರಿತು ಜ.8ರಂದು ಚಿಂತನ ಮಂಥನ ಸಭೆ ನಡೆಯಲಿದ್ದು, ಅಲ್ಲಿ ಈ ಎಲ್ಲ ವಿಷಯಗಳ ಕುರಿತು ಚರ್ಚಿಸುತ್ತೇವೆ ಎಂದರು.

ಸಿದ್ದರಾಮಯ್ಯ, ಡಿಕೆಶಿಯಿಂದ ಜೆಡಿಎಸ್ ಶಾಸಕರಿಗೆ ಆಮಿಷ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ

ಬೆಂಗಳೂರು,ಜ.7–ಜೆಡಿಎಸ್ ಪಕ್ಷವನ್ನು ಮುಗಿಸುವುದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಉದ್ದೇಶವಾಗಿದೆ. ಹೀಗಾಗಿ ನಮ್ಮ ಶಾಸಕರಿಗೆ ಆಮಿಷ ಒಡ್ಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನಿವಾಸಕ್ಕೆ ಕೇಂದ್ರದ ಕೃಷಿ ಹಾಗೂ ಬುಡಕಟ್ಟು ವ್ಯವಹಾರಗಳ ಖಾತೆ ಸಚಿವ ಅರ್ಜುನ್ ಮುಂಡಾ ಭೇಟಿ ನೀಡಿ ಮಾತುಕತೆ ನಡೆಸಿದರು. ಕೇಂದ್ರ ಸಚಿವರನ್ನು ಬೀಳ್ಕೊಟ್ಟ ನಂತರ ಕುಮಾರಸ್ವಾಮಿ ಮಾತನಾಡಿದರು.

ದೇವೇಗೌಡರ ಬಗ್ಗೆ ಸಿಎಂ ಸಿದ್ದರಾಮಯ್ಯ ಮಾತಾಡಿದ್ದಾರೆ. ಮಾತನಾಡಿದವರು ಏನೇನು ಮಾಡಿದ್ದಾರೆ ಎನ್ನುವುದನ್ನು ನೋಡಿಕೊಂಡು ಬಂದಿದ್ದೇನೆ. ಜೆಡಿಎಸ್ ಮುಗಿಸಬೇಕು ಎಂಬುದು ಈ ಇಬ್ಬರು ನಾಯಕರ ಅಜೆಂಡಾ ಆಗಿದೆ. ಈಗಲೂ ಸಹ ಅವರಿವರ ಮನೆ ಬಾಗಿಲು ತಟ್ಟುತ್ತಿದ್ದಾರೆ ಎಂದು ಹೇಳುವ ಮೂಲಕ ಜೆಡಿಎಸ್ ಶಾಸಕರನ್ನು ಸಂಪರ್ಕಿಸುತ್ತಿದ್ದಾರೆ ಎಂದರು. ಕ್ಷೇತ್ರದ ಕೆಲಸಕ್ಕೆ ಹೋದರೆ ನಮ್ಮ ಶಾಸಕರನ್ನು ಕೂರಿಸಿಕೊಂಡು ಜೆಡಿಎಸ್ ಬಿಟ್ಟು ಕಾಂಗ್ರೆಸ್‌ಗೆ ಬನ್ನಿ. ಏನು ಬೇಕೋ ಅದನ್ನು ಮಾಡಿಕೊಡುತ್ತೇವೆ ಎನ್ನುತ್ತಿದ್ದಾರೆ. ಎಷ್ಟು ಕೋಟಿ ಬೇಕೋ ಅಷ್ಟು ಕೊಡುತ್ತೇವೆ, ಪಕ್ಷಕ್ಕೆ ಬನ್ನಿ ಅಂತಾರೆ. ಯಾವ ಕಾರಣಕ್ಕೆ ಇದನ್ನು ಮಾಡುತ್ತೀರಿ. ವಿರೋಧ ಪಕ್ಷವನ್ನು ಉಳಿಸೋಕೆ ಮಾಡುತ್ತಿರೋದಾ? ಜೆಡಿಎಸ್ ಮುಗಿಸಬೇಕು ಅಂತಲೇ ಇವರು ಇದೆಲ್ಲವನ್ನೂ ಮಾಡುತ್ತಿದ್ದಾರೆ ಎಂದರು.



ಯಾವ ಪಕ್ಷದಿಂದ ಬೆಳೆದುಕೊಂಡು ಬಂದರು ಇವರು (ಸಿದ್ದರಾಮಯ್ಯ), ಯಾರ ನಾಯಕತ್ವದಲ್ಲಿ ಈ ಹಂತಕ್ಕೆ ಬಂದರು, ಯಾವುದಕ್ಕೂ ಅವರಿಗೆ ಕೃತಜ್ಞತೆ ಅನ್ನುವುದು ಇಲ್ಲ. ದೇವೇಗೌಡರು ಅವರ ಶತ್ರುಗಳಿಗೂ ಶಾಪ ಹಾಕಿಲ್ಲ. ರಾಜ್ಯದಲ್ಲಿ ನಡೆಯುತ್ತಿರುವ ದಬ್ಬಾಳಿಕೆ, ಅಕ್ರಮಗಳಿಂದ ಜನರೇ ಅವರನ್ನು ಸಮಾಪ್ತಿ ಮಾಡುತ್ತಾರೆ ಎಂದು ದೇವೇಗೌಡರು ಹೇಳಿದ್ದಾರೆ ಅಷ್ಟೆ ಎಂದರು.

ಡಿಕೆ ಶಿವಕುಮಾರ್ ನಮ್ಮ ಕಾಂಗ್ರೆಸ್ 135 ವರ್ಷದ ಪಕ್ಷ ಅಂತಾರೆ. ಗಾಂಧೀಜೀ ಇದ್ದಾಗ ಇತಿಹಾಸ ಬೇರೆ. ಈಗ ಇವರ ಇತಿಹಾಸ ಏನು? ಸ್ವಾತಂತ್ರ್ಯ ತರುವಾಗ ಇತಿಹಾಸ ಬೇರೆ ಇತ್ತು ಆಗ ಮನೆ, ಆಸ್ತಿ ಮಾರಿ ಸ್ವಾತಂತ್ರ್ಯಕ್ಕೆ ಹೋರಾಡಿದ್ದಾರೆ. ಇವರು ಮಾಡುತ್ತಿರುವುದು ಏನು? ಈಸ್ಟ್ ಇಂಡಿಯಾ ಕಂಪನಿ ಮಾಡಿದ ದರೋಡೆಯನ್ನೇ ಇವರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಎಂದರು.

ಲೋಕಸಭೆ ಸ್ಪರ್ಧೆ ಕುರಿತು ಪ್ರತಿಕ್ರಿಯಿಸಿದ ಅವರು, ನಾನು ನಿಲ್ಲುವ ತೀರ್ಮಾನ ಎಲ್ಲೂ ಮಾಡಿಲ್ಲ. ಸ್ನೇಹಿತರು ಬಯಸುತ್ತಿದ್ದಾರೆ. ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ ಅಂತ ಹೇಳುತ್ತಿದ್ದಾರೆ. ಮಾಧ್ಯಮಗಳಲ್ಲಿ ಕೂಡ ವರದಿಗಳು ಬರುತ್ತಿವೆ. ಸಮಯ ಬಂದಾಗ ಹೇಳೋಣ ಎಂದರು.

ಅಗತ್ಯ ಬಿದ್ದರೆ ಸುಮಲತಾ ಅವರನ್ನೂ ಭೇಟಿಯಾಗುತ್ತೇನೆ

66 ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳ ಮುಂದೆ ಒಟ್ಟಾಗಿ ಕೆಲಸ ಮಾಡಬೇಕು ಎನ್ನುವ ಉದ್ದೇಶ ಮಾತ್ರ ಇದೆ. ಅದರ ಬಗ್ಗೆ ಚರ್ಚೆ ಆಗಿದೆ. ಕ್ಷೇತ್ರಗಳ ಬಗ್ಗೆ ಚರ್ಚೆ ಆಗಿಲ್ಲ ಎಂದು ಕುಮಾರಸ್ವಾಮಿ ಹೇಳಿದರು. ಮಂಡ್ಯ ಸಂಸದೆ ಸುಮಲತಾ ಅವರ ಬೆಂಬಲಿಗ ಸಚ್ಚಿದಾನಂದ ಅವರ ಭೇಟಿಯ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸುಮಲತಾ ಅವರು ಬಿಜೆಪಿಯಲ್ಲಿ ಮುಂದುವರಿಯುವುದಾದರೆ ಮಿತ್ರಪಕ್ಷ ಬಿಜೆಪಿ ಪರವಾಗಿ ಅವರನ್ನು ಭೇಟಿ ಮಾಡುತ್ತೇನೆ. ನಾವೇನು ಇಂತಹ ಕ್ಷೇತ್ರದಿಂದಲೇ ಸ್ಪರ್ಧೆ ಮಾಡುತ್ತೇವೆ ಎಂದು ಹೇಳಿದ್ದೇವಾ? ಇಂತಹವರಿಗೆ ತೊಂದರೆ ಕೊಟ್ಟು ನಿಲ್ಲಬೇಕು ಅಂತಾನೂ ಇದ್ದೇವಾ? ಖಂಡಿತಾ ಇಲ್ಲ. ಈ ಬಗ್ಗೆ ಇನ್ನು ಚರ್ಚೆಯೇ ಆಗಿಲ್ಲ. ಇವೆಲ್ಲಾ ಪ್ರಾರಂಭಿಕ ಹಂತದಲ್ಲಿ ಇದೆ. ಬಿಜೆಪಿ– ಜೆಡಿಎಸ್ ನಾಯಕರೆಲ್ಲ ಕೂತು ಸೌಹಾರ್ದಯುತವಾಗಿ ಕೆಲಸ ಮಾಡಲು ಎಲ್ಲರ ಜೊತೆಗೂ ಚರ್ಚೆ ನಡೆಸುತ್ತೇವೆ ಎಂದರು.

ಹಿಟ್ ಅಂಡ್ ರನ್ ಪ್ರಕರಣಕ್ಕೆ ಕಠಿಣ ಶಿಕ್ಷೆ ವಿರುದ್ಧ

ಜ.17ರಿಂದ ಲಾರಿ ಮುಷ್ಕರ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಲಾರಿ ಮಾಲೀಕರ ಒಕ್ಕೂಟ ಅಧ್ಯಕ್ಷ ಬಿ.ಕೋದಂಡರಾಮು ಮಾತನಾಡಿದರು. ಒಕ್ಕೂಟದ ಪದಾಧಿಕಾರಿಗಳಾದ ಅಬ್ದುಲ್ ಖಾದರ್ ಶಾಹಿದ್, ಶ್ರೀನಿವಾಸರಾವ್, ನಾಗಚಂದ್ರ, ವಿಶ್ವನಾಥ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜ.7(ಎಂಟಿವೈ)– ಅಪಘಾತದ ವೇಳೆಯ ಹಿಟ್ ಅಂಡ್ ರನ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಚಾಲಕರಿಗೆ ಹತ್ತು ವರ್ಷ ಕಠಿಣ ಶಿಕ್ಷೆ, ಹತ್ತು ಲಕ್ಷದವರೆಗೆ ದಂಡ ವಿಧಿಸುವ ನೂತನ ಕಾಯ್ದೆ ಹಿಂಪಡೆಯುವಂತೆ ಆಗ್ರಹಿಸಿ ಜ.17ರಿಂದ ಮೈಸೂರು ಜಿಲ್ಲೆಯಲ್ಲಿ ಲಾರಿ ಮುಷ್ಕರ ಆರಂಭಿಸುತ್ತಿರುವುದಾಗಿ ಮೈಸೂರು ಜಿಲ್ಲಾ ಲಾರಿ ಮಾಲೀಕರ ಒಕ್ಕೂಟದ ಅಧ್ಯಕ್ಷ ಬಿ.ಕೋದಂಡರಾಮ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ನಾಗರಿಕ ಸುರಕ್ಷತಾ ಕಾಯ್ದೆ–2023 ವಿಧೇಯಕವು ಸಾರಿಗೆ ಉದ್ಯಮವನ್ನು ಅವಲಂಬಿಸಿರುವ ಕೋಟ್ಯಾಂತರ ಕುಟುಂಬಕ್ಕೆ ಮರಣ ಶಾಸನವಾಗಿ ಪರಿಣಮಿಸಿದೆ. ಈ ಕಾಯ್ದೆಯಿಂದ ಕೇವಲ ಸಾರಿಗೆ ಉದ್ಯಮದಿಂದ ಜೀವನ ಸಾಗಿಸುತ್ತಿರುವ ಕೋಟ್ಯಾಂತರ ವಾಹನ ಚಾಲಕರು, ನಿರ್ವಾಹಕರು ಹಾಗೂ ಮಾಲೀಕರಿಗೆ ದಿಕ್ಕೇ ತೋಚದಂತಾಗಿದೆ. ಅಪಘಾತವನ್ನು ಯಾರೂ ಉದ್ದೇಶಪೂರ್ವಕವಾಗಿ ಮಾಡುವುದಿಲ್ಲ. ಒಂದು ವೇಳೆ ಸಂಭವಿಸಿದಾಗ ಚಾಲಕ ಅಲ್ಲೇ ಇದ್ದಲ್ಲಿ ಸಾರ್ವಜನಿಕರು ಹಲ್ಲೆ ಮಾಡುತ್ತಾರೆ. ಇದರಿಂದಾಗಿ ಆತ ಹೆದರಿ ಅಲ್ಲಿಂದ ಪರಾರಿಯಾಗಿ ಬೇರೊಂದು ಠಾಣೆಗೆ ಹೋಗಬೇಕಾಗುತ್ತದೆ. ಇದನ್ನು ಹಿಟ್ ಅಂಡ್ ರನ್ ಎಂದು ಪರಿಗಣಿಸಿ ಕಠಿಣ ಶಿಕ್ಷೆ ವಿಧಿಸುವುದರಿಂದಾಗಿ ಆತನ ಕುಟುಂಬ ಬೀದಿಗೆ ಬೀಳುತ್ತದೆ. ಜೊತೆಗೆ ಅಷ್ಟು ದುಬಾರಿ ದಂಡ ಪಾವತಿಸುವುದೂ ಆತನಿಗೆ ಅಸಾಧ್ಯವಾಗುತ್ತದೆ ಎಂದರು.

ವಿವಿಧ ಕಾರಣದಿಂದಾಗಿ ಈಗಾಗಲೇ ಹಲವಾರು ಚಾಲಕರು ತಮ್ಮ ವೃತ್ತಿಯಿಂದ ಹಿಂದೆ ಸರಿಯುವುದು ಆರಂಭವಾಗಿದೆ. ಆದ್ದರಿಂದ ಕಾನೂನಿನಲ್ಲಿ ತಿದ್ದುಪಡಿ ತರಬೇಕು ಅಥವಾ ವಾಪಸು ಪಡೆಯಬೇಕೆಂದು ಆಗ್ರಹಿಸಿ ಈ ಲಾರಿಗಳ ಸಂಚಾರ ಬಂದ್ ಮಾಡಲಾಗುತ್ತಿದೆ. ಕೇವಲ ಅಗತ್ಯ ವಸ್ತುಗಳ ಸಾಗಣೆ ಮಾತ್ರ ಇರಲಿದೆ. ಬೇಡಿಕೆ ಈಡೇರುವವರೆಗೂ ಹೋರಾಟ ಮುಂದುವರೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಲಾರಿ ಮಾಲೀಕರ ಒಕ್ಕೂಟದ ಪದಾಧಿಕಾರಿಗಳಾದ ಅಬ್ದುಲ್ ಖಾದರ್ ಶಾಹಿದ್, ಶ್ರೀನಿವಾಸರಾವ್, ನಾಗಚಂದ್ರ, ವಿಶ್ವನಾಥ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಬಸವೇಶ್ವರರ ಅಂಚೆ ಕಾರ್ಡ್ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಸವ ಭಾರತ ಪ್ರತಿಷ್ಠಾನದ ಅಧ್ಯಕ್ಷ ವಿ.ಶಿವರುದ್ರಪ್ಪ ಮಾತನಾಡಿದರು. ಚಿತ್ರದಲ್ಲಿ ಪ್ರತಿಷ್ಠಾನದ ಸದಸ್ಯರಾದ ಅಂಬಳೆ ಎಂ.ಶಿವಾನಂದಸ್ವಾಮಿ, ಎಂ.ಮಹದೇವಸ್ವಾಮಿ, ನಾಗರಾಜ, ಸಿ.ಶಿವರುದ್ರಪ್ಪ ಅವರನ್ನು ಕಾಣಬಹುದು.

ಮೈಸೂರು,ಜ.7(ಎಂಟಿವೈ)– ಮೈಸೂರಿನ ಹೊಸಮಠದ ನಟರಾಜ ಸಭಾಂಗಣದಲ್ಲಿ ಜ.9ರಂದು ಸಂಜೆ 4ಕ್ಕೆ ವಿಶ್ವಗುರು ಬಸವೇಶ್ವರರ ಅಂಚೆ ಕಾರ್ಡ್ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಬಸವ ಭಾರತ ಪ್ರತಿಷ್ಠಾನದ ಅಧ್ಯಕ್ಷ ವಿ.ಶಿವರುದ್ರಪ್ಪ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಸವ ಭಾರತ ಪ್ರತಿಷ್ಠಾನ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಅಂಚೆ ಕಾರ್ಡ್ ಬಿಡುಗಡೆಯೊಂದಿಗೆ, ಬಸವ ತತ್ವ ಪ್ರವಚನಕಾರ ಶ್ರೀ ನಿಜಗುಣಸ್ವಾಮಿ ಅವರನ್ನು ಅಭಿನಂದಿಸಲಾಗುತ್ತಿದೆ. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಗುವುದು. ಅಂಚೆ ಕಾರ್ಡನ್ನು ನಿಜಗುಣಾನಂದ ಸ್ವಾಮೀಜಿ ಮತ್ತು ಹಿರಿಯ ಅಂಚೆ ಅಧೀಕ್ಷಕರಾದ ಏಂಜೆಲ್ ರಾಜ್ ಬಿಡುಗಡೆಗೊಳಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕರಾದ ನಿರಂಜನಕುಮಾರ್, ತೋಂಟದಾರ್ಯ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಸವ ಭಾರತ ಪ್ರತಿಷ್ಠಾನದ ಸದಸ್ಯರಾದ ಅಂಬಳೆ ಎಂ.ಶಿವಾನಂದಸ್ವಾಮಿ, ಎಂ.ಮಹದೇವಸ್ವಾಮಿ, ನಾಗರಾಜ, ಸಿ.ಶಿವರುದ್ರಪ್ಪ ಇನ್ನಿತರರಿದ್ದರು.



ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ನೋಟರಿಗಳ ಸಂಘದ ವತಿಯಿಂದ ಮೈಸೂರು ನ್ಯಾಯಾಲಯದ ಮೈಸೂರು ಬಾರ್ ಅಸೋಸಿಯೇಷನ್ ಸಭಾಂಗಣದಲ್ಲಿ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮೈಸೂರು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾದ ಶ್ರೀಮತಿ ಪ್ರಭಾವತಿ ಎಂ.ಹಿರೇಮಠ್ ಬಿಡುಗಡೆ ಮಾಡಿದರು. ವೇದಿಕೆಯಲ್ಲಿ ಕಾನೂನು ಸೇವಾ ಪ್ರಾಧಿಕಾರದ ಕಾರ್ಯದರ್ಶಿ ನ್ಯಾಯಮೂರ್ತಿ ದಿನೇಶ್, ನೋಟರಿ ಸಂಘದ ಅಧ್ಯಕ್ಷ ಪಿ.ರಮೇಶ್, ಉಪಾಧ್ಯಕ್ಷ ಎಸ್.ನಾಗರಾಜ್, ಕಾರ್ಯದರ್ಶಿ ಬಿ.ಎಸ್.ಪ್ರಶಾಂತ್, ಖಜಾಂಚಿ ಕಿರಣ್ ಅರಸ್, ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಉಮೇಶ್, ಮಾಜಿ ಅಧ್ಯಕ್ಷ ಸುರೇಶ್‌ಬಾಬು ಇತರರು ಉಪಸ್ಥಿತರಿದ್ದರು.



ಕರ್ನಾಟಕ ಇಪ್ಪತ್ತನ್ನಾಲ್ಕು ಮನೆ ತೆಲುಗು ಶೆಟ್ಟರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಬಿಡುಗಡೆ ಮಾಡಿದರು. ಈ ವೇಳೆ ಸಂಘದ ಅಧ್ಯಕ್ಷ ವಿ.ಮಂಜುನಾಥ್, ಕಾರ್ಯದರ್ಶಿ ನಾಗಶೆಟ್ಟಿ, ಸಹ ಕಾರ್ಯದರ್ಶಿ ನಾಗರಾಜ ಶೆಟ್ಟಿ, ಖಜಾಂಚಿ ಶ್ರೀಧರಮೂರ್ತಿ ಉಪಾಧ್ಯಕ್ಷರಾದ ಕೃಷ್ಣಶೆಟ್ಟಿ, ಇಂದ್ರಶೆಟ್ಟಿ, ರಾಮಶೆಟ್ಟಿ, ಅಪ್ಪಾಜಿಶೆಟ್ಟಿ, ಪ್ರಕಾಶ್, ಶ್ರೀನಿವಾಸ್, ಮಹಾದೇವ್, ನಾಗಶೆಟ್ಟಿ ಉಪಸ್ಥಿತರಿದ್ದರು.

ಜ.20, 6ನೇ ತರಗತಿ ನವೋದಯ ಪ್ರವೇಶ ಪರೀಕ್ಷೆ

ಮೈಸೂರು: ಜಿಲ್ಲೆಯ ಜವಾಹರ್ ನವೋದಯ ವಿದ್ಯಾಲಯದಿಂದ 2024–25ನೇ ಸಾಲಿನ 6ನೇ ತರಗತಿಗೆ ಆಯ್ಕೆ ಬಯಸಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪ್ರವೇಶ ಪರೀಕ್ಷೆಯು ಜ.20ರಂದು ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ನಡೆಯಲಿದೆ. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಇಲಾಖೆಯ www.novodaya.gov.inನಿಂದ ಪಡೆಯಬಹುದು. ಮಾಹಿತಿಗೆ ಜವಹಾರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರನ್ನು ಹಾಗೂ ದೂ. ಸಂಖ್ಯೆ:0821–2970040 ಸಂಪರ್ಕಿಸಿ.

ಮೈಸೂರಲ್ಲಿ ಭಾನುವಾರ 26 ಮಂದಿಗೆ ಕೊರೊನಾ



ಮೈಸೂರು,ಜ.7(ಬಿಎಲ್‌ಯು)–ಮೈಸೂರು ಜಿಲ್ಲೆಯಲ್ಲಿ ಭಾನುವಾರ 26 ಮಂದಿಯಲ್ಲಿ ಕೊರೊನಾ ಸೋಂಕು ಪತ್ತೆಯಾಗಿದೆ. ಜಿಲ್ಲೆಯಲ್ಲಿ ಒಟ್ಟು 413 ಮಂದಿಯನ್ನು ಕೊರೊನಾ ಪರೀಕ್ಷೆಗೊಳಪಡಿಸಲಾಗಿದ್ದು, ಇವರಲ್ಲಿ 26 ಮಂದಿಗೆ ಸೋಂಕು ಪತ್ತೆಯಾಗಿದೆ. ಈ ಹಿಂದೆ ಕೊರೊನಾದಿಂದ ಆಸ್ಪತ್ರೆಗೆ ದಾಖಲಾಗಿದ್ದ 36 ಮಂದಿ ಡಿಸ್ಚಾರ್ಜ್ ಆಗಿದ್ದಾರೆ. ಕರ್ನಾಟಕದಲ್ಲಿ ಕೊರೊನಾ ಸೋಂಕಿನ ಲಕ್ಷಣ ಇರುವ 7,205 ಜನರನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಇವರಲ್ಲಿ 328 ಜನರಲ್ಲಿ ಸೋಂಕು ಪತ್ತೆಯಾಗಿದೆ.

ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಪದಾಧಿಕಾರಿಗಳ ಪದಗ್ರಹಣ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಕರ್ನಾಟಕದ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಮಾಜಿ ರಾಷ್ಟ್ರೀಯ ಅಧ್ಯಕ್ಷ ಡಾ.ಸಂತೋಷ್ ಸೋನ್ಸ್ ಉದ್ಘಾಟಿಸಿದರು. ಐಎಪಿ ಕರ್ನಾಟಕದ ಅಧ್ಯಕ್ಷ ಡಾ.ಮೋತಿ, ಕಾರ್ಯದರ್ಶಿ ಡಾ.ಶಶಿಕಿರಣ್, ಖಜಾಂಚಿ ಡಾ.ಶ್ರೀಯಾನ್ ಅಜ್ವಿಜ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಮೈಸೂರು, ಜ.7(ಬಿಎಲ್‌ಯು)– ಕರ್ನಾಟಕ ರಾಜ್ಯದ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಮೈಸೂರಲ್ಲಿ ಭಾನುವಾರ ನಡೆಯಿತು.

ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ (ಐಎಪಿ) ಮಾಜಿ ರಾಷ್ಟ್ರೀಯ ಅಧ್ಯಕ್ಷ ಡಾ.ಸಂತೋಷ್ ಸೋನ್ಸ್ ನೂತನ ಪದಾಧಿಕಾರಿಗಳಿಗೆ ಅಧಿಕಾರ ವಹಿಸಿದರು.

ಈ ವೇಳೆ ಐಎಪಿಯ ಕರ್ನಾಟಕದ ಅಧ್ಯಕ್ಷರಾಗಿ ಡಾ.ಎಸ್.ಎನ್.ಮೋತಿ, ಕಾರ್ಯದರ್ಶಿಯಾಗಿ ಡಾ.ಕೆ.ಬಿ.ಶಶಿಕಿರಣ್ ಹಾಗೂ ಕೋಶಾಧಿಕಾರಿಯಾಗಿ ಡಾ.ಶ್ರೀಯಾನ್ ಅಜ್ವಿಜ್, ಐಎಪಿ ಮೈಸೂರು ಜಿಲ್ಲಾ ಅಧ್ಯಕ್ಷರಾಗಿ ಡಾ.ಎಂ.ಆರ್.ಪ್ರಶಾಂತ್, ಕಾರ್ಯದರ್ಶಿಯಾಗಿ ಡಾ.ಶಂಕರ್ ಪ್ರಸಾದ್ ಹಾಗೂ ಖಜಾಂಚಿಯಾಗಿ ಡಾ.ತೃಪ್ತಿ ಅವರಿಗೆ ಕೂಡ ಅಧಿಕಾರ ವಹಿಸಿಕೊಂಡರು. ಎಂಎಹೆಚ್‌ಎ ಅಧ್ಯಕ್ಷರಾಗಿ ಡಾ.ಯು.ಜಿ.ಶೆಣೈ, ಕಾರ್ಯದರ್ಶಿಯಾಗಿ ಡಾ.ಮಾನಿನಿ ಮುದಗಲ್ ಹಾಗೂ ಖಜಾಂಚಿಯಾಗಿ ಡಾ.ಕಾವ್ಯ ಅವರಿಗೂ ಕೂಡ ಈ ವೇಳೆ ಡಾ.ಸಂತೋಷ್ ಸೋನ್ಸ್ ಅಧಿಕಾರ ವಹಿಸಿದರು.

ಐಎಪಿ ರಾಷ್ಟ್ರೀಯ ಅಧ್ಯಕ್ಷ ಡಾ.ಬಸವರಾಜ್ ಹಾಗೂ ಕರ್ನಾಟಕದ ಅಧ್ಯಕ್ಷ ಡಾ.ಮೋತಿ ಅವರ ಜಂಟಿ ನಾಯಕತ್ವದಲ್ಲಿ ಮಹತ್ವಪೂರ್ಣ ಬದಲಾವಣೆ ನೋಡುವ ಆಶಯವನ್ನು ಈ ವೇಳೆ ಡಾ.ಸಂತೋಷ್ ಸೋನ್ಸ್ ವ್ಯಕ್ತಪಡಿಸಿದರು. ಮಕ್ಕಳ ವೈದ್ಯರ ಸಂಘಗಳು ಕೇವಲ ಸಂಘಟನೆಗೆ ಮಾತ್ರ ಸೀಮಿತವಾಗಿರದೆ, ನವಜಾತ ಶಿಶುಗಳ ಆರೋಗ್ಯ ರಕ್ಷಣೆ ಬಗ್ಗೆಯೂ ಕೂಡ ಕಾಳಜಿ ವಹಿಸುತ್ತದೆ ಎಂದು ಡಾ. ಸಂತೋಷ್ ಸೋನ್ಸ್ ಸ್ಪಷ್ಟಪಡಿಸಿದರು.

ಎರರ್ ಇನ್ ವ್ಯಾಕ್ಸಿನೇಷನ್ ಪ್ರಾಕ್ಟಿಸ್ ಕುರಿತು ಡಾ.ಎಸ್.ಜಿ.ಕಾಶಿ ಮಾತನಾಡಿದರು.

ಐಎಪಿ ಮಾಜಿ ಅಧ್ಯಕ್ಷ ಡಾ.ಶರಣಗೌಡ ಪಾಟೀಲ್, ಎಹೆಚ್‌ಎ ರಾಷ್ಟ್ರೀಯ ಅಧ್ಯಕ್ಷೆ ಡಾ.ಗೀತಾ ಪಾಟೀಲ್, ಎಹೆಚ್‌ಎ ಕರ್ನಾಟಕ ಅಧ್ಯಕ್ಷ ಡಾ.ಕಿಶೋರ್ ಬೈಂದೂರ್, ಡಾ.ಡಿ.ನಾರಾಯಣಪ್ಪ, ಡಾ.ಎಂ.ಆರ್.ಸವಿತಾ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಲಕ್ಷ್ಮಿ ಪ್ರಶಾಂತ್ ಪ್ರಾರ್ಥನೆ ಸಲ್ಲಿಸಿದರು. ಡಾ.ಎಸ್.ಆರ್.ರವೀಶ್ ಸ್ವಾಗತಿಸಿದರು. ಡಾ.ಕೆ.ಬಿ.ಶಶಿಕಿರಣ್ ವಂದನಾರ್ಪಣೆ ಮಾಡಿದರು.

ಅಯೋಧ್ಯೆ ರಾಮಮಂದಿರದ ಮಂತ್ರಾಕ್ಷತೆ ಮೆರವಣಿಗೆ



ಮಹದೇವಪುರ ಬಡಾವಣೆಯಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ವತಿಯಿಂದ ಶ್ರೀ ರಾಮನ ಮೆರವಣಿಗೆ ನಡೆಸಲಾಯಿತು.

ಮೈಸೂರು, ಜ.7(ಜಿಎ)–ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣವಾಗುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ವತಿಯಿಂದ ಮೈಸೂರಿನ ಮಹದೇವಪುರ ಬಡಾವಣೆಯಲ್ಲಿ ಶ್ರೀ ರಾಮನ ಫೋಟೋ, ಕುಂಕುಮ, ಮಂತ್ರಾಕ್ಷತೆ ಮೆರವಣಿಗೆ ಮಾಡಲಾಯಿತು.

ಈ ವೇಳೆ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಕಿರಣ್‌ಕುಮಾರ್ ಮಾತನಾಡಿ, ನಮ್ಮ ಮೈಸೂರಿಗೆ ಹೆಮ್ಮೆಯ ಸಂಗತಿ ಏನೆಂದರೆ, ಮೈಸೂರಿನವರಾದ ಶಿಲ್ಪಿ ಅರುಣ್ ಯೋಗಿರಾಜ್ ಅವರು ಶ್ರೀರಾಮನ ಮೂರ್ತಿಯನ್ನು ಕೆತ್ತಿ ದೇಶದ ಜನರ ಮೆಚ್ಚುಗೆಯನ್ನು ಪಡೆದಿದ್ದಾರೆ. ಇವರ ಮೂರ್ತಿಯೇ ಅಂತಿಮ ಆಗುವ ಸಾಧ್ಯತೆ ಇದ್ದು, ಮೈಸೂರಿನ ಜನರು ನಮ್ಮ ಮೂರ್ತಿಯೇ ಅಲ್ಲಿ ಪ್ರತಿಷ್ಠಾಪನೆಯಾಗಲಿ ಎಂದು ದೇವಸ್ಥಾನಗಳಲ್ಲಿ ಮತ್ತು ಎಲ್ಲಾ ಬಡಾವಣೆಗಳಲ್ಲಿ ಶ್ರೀ ರಾಮನ ಮೆರವಣಿಗೆಯನ್ನು ಮಾಡಿ ಭಕ್ತಿಪೂರ್ವಕವಾಗಿ ಪೂಜೆ ಮಾಡುತ್ತಿದ್ದಾರೆ ಎಂದರು.

ಶ್ರೀ ರಾಮ ಕೇವಲ ಒಂದು ಪಕ್ಷಕ್ಕೆ ಸೀಮಿತವಲ್ಲ, ಧರ್ಮಾತೀತವಾಗಿ, ಜಾತ್ಯತೀತವಾಗಿ ಎಲ್ಲರೂ ಪೂಜೆ ಮಾಡುವಂತಹ ಭಗವಂತನೇ ಶ್ರೀರಾಮ. ಇತ್ತೀಚೆಗೆ ಮೈಸೂರಲ್ಲಿ ನಡೆದ ಹನುಮ ಜಯಂತಿ ಮೆರವಣಿಗೆಯನ್ನು ಎಲ್ಲಾ ಪಕ್ಷದವರು ಪಕ್ಷಭೇದ ಮರೆತು ಒಂದಾಗಿ ಯಶಸ್ವಿ ಮಾಡಿದ್ದಾರೆ. ಅದೇ ರೀತಿ ಶ್ರೀರಾಮನ ಮೆರವಣಿಗೆಯನ್ನು ಯಶಸ್ವಿ ಮಾಡಬೇಕೆಂದು ಮನವಿ ಮಾಡಿದರು. ಈ ವೇಳೆ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಸಮಾಜ ಸೇವಕಿ ಶಾಂತಮ್ಮ, ವಿವೇಕ್, ದೀಪು, ಚೆಲುವರಾಜ್, ಕಿರಣ್, ಮಹದೇಪುರ ನಿವಾಸಿಗಳು ಪಾಲ್ಗೊಂಡಿದ್ದರು.

ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ: ದಿನಾಂಕ ಪ್ರಕಟ

ಮೈಸೂರು,ಜ.7–ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ–2024ಕ್ಕೆ ಸಂಬಂಧಿಸಿದಂತೆ ಭಾರತ ಚುನಾವಣಾ ಆಯೋಗವು ಪರಿಷ್ಕೃತ ವೇಳಾಪಟ್ಟಿಯನ್ನು ಹೊರಡಿಸಿದ್ದು, ಹಕ್ಕು ಮತ್ತು ಆಕ್ಷೇಪಣೆ ಇತ್ಯರ್ಥಪಡಿಸುವ ದಿನಾಂಕವನ್ನು ಜನವರಿ 12ಕ್ಕೆ, ದತ್ತಾಂಶಗಳನ್ನು ಸಂಗ್ರಹಿಸಿ ಮತ್ತು ಪರಿಶೀಲಿಸುವ ದಿನಾಂಕವನ್ನು ಜನವರಿ 17ಕ್ಕೆ ಹಾಗೂ ಅಂತಿಮ ಮತದಾರರ ಪಟ್ಟಿಯನ್ನು ಜನವರಿ 22ಕ್ಕೆ ಪರಿಷ್ಕೃತ ವೇಳಾಪಟ್ಟಿಯಲ್ಲಿ ನಿಗದಿಪಡಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುಂಚನಕಟ್ಟೆ ದನಗಳ ಜಾತ್ರೆಯಲ್ಲಿ ಹೆಚ್‌ಐವಿ, ಏಡ್ಸ್ ಜಾಗೃತಿ



ಮೈಸೂರು, ಜ. 7– ಕೆ.ಆರ್.ನಗರ ತಾಲೂಕು ಚುಂಚನಕಟ್ಟೆಯಲ್ಲಿ ಆಯೋಜಿಸಿರುವ ದನಗಳ ಜಾತ್ರೆಯಲ್ಲಿ ಇಎಸ್‌ಐ ಆಸ್ಪತ್ರೆ ಮತ್ತು ಪಿಕೆಟಿಬಿ ಆಸ್ಪತ್ರೆ, ಐಸಿಟಿಸಿ ವಿಭಾಗದಿಂದ ಹೆಚ್‌ಐವಿ, ಏಡ್ಸ್ ಜಾಗೃತಿ ಕಾರ್ಯಕ್ರಮವನ್ನು ಪೊಲೀಸ್ ಅಧಿಕಾರಿ ಶ್ರೀಮತಿ ಕುಮುದ, ಸಾಲಿಗ್ರಾಮ ತಾಲೂಕು ಮತ್ತು ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ ಕರಪತ್ರ ನೀಡುವ ಮೂಲಕ ಉದ್ಘಾಟಿಸಿದರು.

ಬಳಿಕ ಗೋಪಾಲ್ ಮತ್ತು ಆಪ್ತ ಸಮಾಲೋಚಕ ನಾಗೇಂದ್ರ ಪ್ರಸಾದ್ ಜಾತ್ರೆಗೆ ಬಂದಂತಹ ಜನರಿಗೆ ಹೆಚ್.ಐ.ವಿ/ ಏಡ್ಸ್ ಮೂಲ ಮಾಹಿತಿ, ಸಾಮಾಜಿಕ ಸವಲತ್ತು, ಹೆಚ್.ಐ.ವಿ/ ಏಡ್ಸ್ ನಿಯಂತ್ರಣ ಮತ್ತು ತಡೆ ಕಾಯ್ದೆ 2017, ಕಳಂಕ ತಾರತಮ್ಯ ಕುರಿತು, ಹೆಚ್.ಐ.ವಿ ಚಿಕಿತ್ಸೆಯ ಬಗ್ಗೆ ಎರಡು ಸಾವಿರಕ್ಕೂ ಹೆಚ್ಚು ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಿ ಕರಪತ್ರಗಳನ್ನು ನೀಡಿದರು.

ಹೆಚ್‌ಐ.ವಿ ರಕ್ತ ಪರೀಕ್ಷೆಯನ್ನು ಮಾಡಿಸಿಕೊಳ್ಳುವವರು ಹತ್ತಿರದ ಸರ್ಕಾರಿ ಆಸ್ಪತ್ರೆಗಳಲ್ಲಿರುವ ಐಸಿಟಿಸಿ ಕೇಂದ್ರಗಳಿಗೆ ಭೇಟಿ ನೀಡಿ ಹೆಚ್‌ಐವಿ ಪರೀಕ್ಷೆಯನ್ನು ಮಾಡಿಸಿ ತಮ್ಮ ಹೆಚ್‌ಐವಿ ಸ್ಥಿತಿಗಳನ್ನು ತಿಳಿದುಕೊಳ್ಳಬೇಕು ಎಂದರು. ಈ ವೇಳೆ ಚುಂಚನಕಟ್ಟೆಯ ಅಂಗನವಾಡಿ ಶಿಕ್ಷಕಿ ಶಾಲಿನಿ ಭಾಗವಹಿಸಿದ್ದರು.

ಮತದಾನ ಪ್ರಕ್ರಿಯೆಯಲ್ಲಿ ನಗರ ವಾಸಿಗಳ ನಿರಾಸಕ್ತಿ ವಿಷಯ ಕುರಿತು ಕಿರುಚಿತ್ರಕ್ಕೆ ಆಹ್ವಾನ

ಮೈಸೂರು,ಜ.7–ಕರ್ನಾಟಕ ಸಾರ್ವತ್ರಿಕ ವಿಧಾನಸಭಾ ಚುನಾವಣೆ–2023ರ ಚುನಾವಣೆಯಲ್ಲಿ ಶೇಕಡವಾರು ಮತದಾನ ಪ್ರಮಾಣವು ನಗರ ಪ್ರದೇಶಗಳಲ್ಲಿ ಕಡಿಮೆಯಾಗುತ್ತಿದೆ. ಅದರಿಂದ ಚುನಾವಣಾ ಆಯೋಗವು ಪ್ರಸ್ತುತ ಲೋಕಸಭಾ ಚುನಾವಣೆ–2024 ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ನಗರ ವಾಸಿಗಳ ನಿರಾಸಕ್ತಿಗೆ ಕಾರಣ ಹಾಗೂ ಮತದಾನ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮೈಸೂರು ಜಿಲ್ಲಾ ಪಂಚಾಯತ್ ಮತ್ತು ಮೈಸೂರು ಪಾಲಿಕೆ ಸಹಯೋಗದೊಂದಿಗೆ ಒಂದು ನಿಮಿಷದೊಳಗಿನ ಕಿರುಚಿತ್ರವನ್ನು ಚಿತ್ರೀಕರಿಸಲು ತೀರ್ಮಾನಿಸಿರುತ್ತದೆ. 'ಮತದಾನ ಪ್ರಕ್ರಿಯೆಯಲ್ಲಿ ನಗರ ವಾಸಿಗಳ ನಿರಾಸಕ್ತಿ' ವಿಷಯದ ಕುರಿತು ಕಿರುಚಿತ್ರವನ್ನು ಮತದಾರರ ಸಾಕ್ಷರತಾ ಸಂಘಗಳ ಮುಖೇನ ಎಲ್ಲಾ ಸಾರ್ವಜನಿಕರು ಹಾಗೂ ಕಾಲೇಜುಗಳ ವಿದ್ಯಾರ್ಥಿಗಳು ಮುಕ್ತವಾಗಿ ಭಾಗವಹಿಸಿ, ಜ.10ರೊಳಗಾಗಿ ವಿಡಿಯೋ ಚಿತ್ರೀಕರಿಸಿ ಸಲ್ಲಿಸಬೇಕು. ಉತ್ತಮವಾದ ಕಿರುಚಿತ್ರಗಳಿಗೆ ಪ್ರಥಮ ಬಹುಮಾನ–5000, ದ್ವಿತೀಯ ಬಹುಮಾನ–3000 ಹಾಗೂ ತೃತೀಯ ಬಹುಮಾನ–2000 ರೂ. ನೀಡಲಾಗುತ್ತದೆ ಎಂದು ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಫೆಸ್ಟ್ ಪ್ರಚಾರ ಲೋಗೋದಲ್ಲಿ ಇಂಗ್ಲಿಷ್‌ಗೆ ಪ್ರಾಧಾನ್ಯತೆ

ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು.ಸದಾನಂದಯ್ಯ ಅಸಮಾಧಾನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಪ್ರಕಟಿಸಿರುವ ಕನ್ನಡ ಅಂಕಿ ಆಧಾರಿತ ಕ್ಯಾಲೆಂಡರ್ ಅನ್ನು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು.ಸದಾನಂದಯ್ಯ ಬಿಡುಗಡೆ ಮಾಡಿದರು.

ಮೈಸೂರು, ಜ.7(ಎಂಟಿವೈ)– ಜಿಲ್ಲಾಡಳಿತದ ನಡೆಸಲು ಉದ್ದೇಶಿಸಿರುವ 'ಮೈಸೂರು ಫೆಸ್ಟ್' ಪ್ರಚಾರದ ಲೋಗೋಗಳಲ್ಲಿ ಕನ್ನಡ ಬಳಕೆ ಕಡಿಮೆ ಆಗಿದ್ದು, ಇಂಗ್ಲೀಷ್‌ಗೆ ಪ್ರಾಧಾನ್ಯತೆ ನೀಡಲಾಗಿದೆ. ಇದು ಕನ್ನಡ ಬಳಕೆ ಕುರಿತ ರಾಜ್ಯ ಸರ್ಕಾರದ ನಿಯಮದ ಉಲ್ಲಂಘನೆಯೂ ಆಗಿದ್ದು, ಮರು ಪರಿಶೀಲಿಸುವಂತೆ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಪ್ರಕಟಿಸಿರುವ ಕನ್ನಡ ಅಂಕಿ ಆಧಾರಿತ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಲೋಗೋಗಳಲ್ಲಿ ಇಂಗ್ಲಿಷ್ ಅಂದಾಜು ಶೇ.70ರಷ್ಟು ಹಾಗೂ ಶೇ.30ರಷ್ಟು ಕನ್ನಡ ಬಳಸಲಾಗಿದೆ. ಆದರೆ ನಿಯಮಾನುಸಾರ ಶೇ.60ರಷ್ಟು ಕನ್ನಡ ಬಳಸಬೇಕಾಗಿತ್ತು. ಲೋಗೋ ಸಿದ್ಧಪಡಿಸುವವರಿಗೆ ಈ ಕುರಿತು ಮಾಹಿತಿ ನೀಡಬೇಕಾಗಿತ್ತು ಆದ್ದರಿಂದ ಈಗಲಾದರೂ ಜಿಲ್ಲಾಡಳಿತ ಲೋಪ ಸರಿಪಡಿಸಬೇಕು ಎಂದು ಮನವಿ ಮಾಡಿದರು.


ಮೈಸೂರಿನ ಹಲವು ಬಡಾವಣೆ, ಬೀದಿಗಳಿಗೆ ಇರುವ ಮಾರ್ಗದರ್ಶಿ ಫಲಕಗಳಲ್ಲಿ ಈ ಹಿಂದಿನ ರೀತಿಯ ಮನೆಗಳ ಸಂಖ್ಯೆ ಮಾಹಿತಿ ಕಾಣೆಯಾಗಿದೆ. ಕೇವಲ ಜನಪ್ರತಿನಿಧಿಗಳು, ರಾಜಕಾರಣಿಗಳ ಹೆಸರೇ ಇವೆ. ಆದ್ದರಿಂದ ಈ ಬಗ್ಗೆ ಮೈಸೂರು ನಗರಪಾಲಿಕೆ, ಮುಡಾ ಗಮನಹರಿಸಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ವಹಿಸಿದ್ದರು. ಮಾಜಿ ಅಧ್ಯಕ್ಷ ಚಂದ್ರಶೇಖರ್, ಜಿ. ಪ್ರಕಾಶ್, ಕೆಂಪಣ್ಣ, ಗಣೇಶ್ ನಿಲುವಾಗಿಲು, ಡಾ.ಟಿ.ತ್ಯಾಗರಾಜು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು,ಜ.7–2023–24ನೇ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿಎಚ್.ಡಿ ಅಧ್ಯಯನ ಪ್ರಾರಂಭಿಸಿರುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ) 3(ಎ) ಹಾಗೂ 3(ಬಿ)ಗೆ ಸೇರಿದ ಅರ್ಹ ಅಭ್ಯರ್ಥಿಗಳಿಂದ ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2023–24ನೇ ಸಾಲಿನಲ್ಲಿ ಕರ್ನಾಟಕ ಶಾಸನಬದ್ಧ ವಿಶ್ವವಿದ್ಯಾಲಯಗಳಲ್ಲಿ/ಅಧೀನ ಕ್ಕೊಳಪಡುವ ಸಂಸ್ಥೆಗಳಲ್ಲಿ ಪ್ರಥಮ ವರ್ಷದ ಪಿಎಚ್.ಡಿ ಅಧ್ಯಯನ ಮಾಡುತ್ತಿರುವ ಹೊಸ ಅಭ್ಯರ್ಥಿಗಳು ಮಾತ್ರ ಆಫ್‌ಲೈನ್ ಮೂಲಕ ಜ.10ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ https://bcwd.karnataka.gov.in ಅಥವಾ ಮೊ.ಸಂ: 8050770004 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.1.2024 ಸೋಮವಾರ, ಮಳೆ ನಕ್ಷತ್ರ: ಪೂಷಾ 29.12.2023ರಿಂದ 10.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಅನೂರಾಧ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್:** 2024ನೇ ಕ್ಯಾಲೆಂಡರ್ ಬಿಡುಗಡೆ, ಸಾನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಮುಖ್ಯ ಅತಿಥಿಗಳು: ಶಾಸಕರಾದ ಹೆಚ್.ಎಂ. ಗಣೇಶ್‌ಪ್ರಸಾದ್, ಡಾ. ಡಿ. ತಿಮ್ಮಯ್ಯ, ಚಾಮರಾಜನಗರ ಜಿಲ್ಲಾಧಿಕಾರಿ ಶ್ರೀಮತಿ ಶಿಲ್ಪನಾಗ್, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಮೈಸೂರು ವಿಶ್ವವಿದ್ಯಾಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, 'ಭಾರತ ಸಂವಿಧಾನದ ದೃಷ್ಟಿ ಮತ್ತು ಸಂಸತ್ತಿನ ಕಾರ್ಯವೈಖರಿ' ಕುರಿತು ಬೆಂಗಳೂರು ವಿವಿ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ. ಎಸ್.ವೈ. ಸುರೇಂದ್ರಕುಮಾರ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನ ಪ್ರಾಂಶುಪಾಲ ಡಾ. ರವಿ ಜೆ.ಡಿ. ಸಾಲ್ಡಾನಾ, ಸ್ಥಳ: ಸಂತ ಫಿಲೋಮಿನಾ ಕಾಲೇಜು, ಬನ್ನಿಮಂಟಪ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ (ಬೆಂಗಳೂರು), ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ (ಮೈಸೂರು), ಸಹಕಾರ ಇಲಾಖೆ (ಮೈಸೂರು) :** ಹೆಚ್.ಡಿ. ಕೋಟೆ ಹಾಗೂ ಕೆ.ಆರ್.ನಗರ ತಾಲೂಕಿನ ಚುನಾವಣೆ ನಡೆಯುವ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ವಿಶೇಷ ತರಬೇತಿ, ಉದ್ಘಾಟನೆ: ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಸಿ. ಪ್ರಸಾದ್ ರೆಡ್ಡಿ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಡಾ. ಹೆಚ್.ವಿ. ರಾಜೀವ್, ಸ್ಥಳ: ಕೆಐಸಿಎಂ ಸಭಾಂಗಣ, ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಬೆಳಗ್ಗೆ 11 ಗಂಟೆಗೆ.

■ **ವಿಶ್ವಜ್ಞಾನಿ ಡಾ. ಬಿ.ಆರ್. ಅಂಬೇಡ್ಕರ್ ಜನ ಸೇವಾ ಪ್ರತಿಷ್ಠಾನ:** ಸಾವಿತ್ರಿಬಾಯಿ ಫುಲೆ ಜನ್ಮದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಉದ್ಘಾಟನೆ: ಖ್ಯಾತ ಸಾಹಿತಿ ಬನ್ನೂರು ಕೆ. ರಾಜು, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪ್ರಖ್ಯಾತ ಪಂಡಿತ್ ಕಲ್ಲಾಪುರ ಪವಮಾನಾಚಾರ್ಯ ಅವರಿಂದ ಭಗವದ್ಗೀತೆ 14ನೇ ಅಧ್ಯಾಯ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5ರಿಂದ 6ರವರೆಗೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ (ಮೈಸೂರು) :** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀ ರಾಮ ಮಂದಿರ, ಕಾಂತರಾಜ ರಸ್ತೆ, ಸಂಜೆ 6.15ರಿಂದ.

■ **ಶ್ರೀ ಉತ್ತರಾದಿ ಮಠ ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರ ಆಜ್ಞೆ ಮತ್ತು ಅನುಗ್ರಹದಿಂದ ಹೆಸರಾಂತ ಪ್ರವಚನಕಾರರಾದ ಪಂ. ಶ್ರೀ ಪವಮಾನಾಚಾರ್ಯ ಕಲ್ಲಾಪುರ ಅವರಿಂದ ಶ್ರೀ ಭಗವದ್ಗೀತಾ ಅಭಿಯಾನಾ, ಸ್ಥಳ: ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ– ಶಾಂತಾ ನಾಗರಾಜ್, 6.15 ಗೀತಾರಾಧನ, 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ: ಡಾ.ಹೆಚ್.ವಿ. ನಾಗರಾಜರಾವ್, 6.50 ರೈತರಿಗೆ ಸಲಹೆ, 9.00 ನೆನಪಿನಂಗಳ– ಸಾಹಿತಿ ಡಾ.ಪ್ರಭುಶಂಕರ್ ಅವರೊಂದಿಗೆ ಡಾ.ಜಿ.ಹೆಚ್.ನಾಯಕ್ ಅವರು ನಡೆಸಿದ ಸಂದರ್ಶನ, 10.00 ಹೆಚ್.ಟಿ.ಹರೀಶ್: ಸ್ಯಾಕ್ಸೋಫೋನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಧಾ ಜಯಲಕ್ಷ್ಮಿ, 12.45 ನಮ್ಮ ಆರೋಗ್ಯ: ಗ್ಯಾಸ್ ಗೀಜರ್ ಸಿಂಡ್ರೋಮ್ ಕುರಿತು ಡಾ.ವೇಣುಗೋಪಾಲಕೃಷ್ಣ ಕೆ.ಎಸ್. ಅವರೊಂದಿಗೆ ಮಾತುಕತೆಯಲ್ಲಿ ಭಾಗವಹಿಸುವವರು ಬೇದ್ರೆ ಮಂಜುನಾಥ್, 1.25 ಭಾವಗೀತೆಗಳು–ರಶ್ಮಿ ವಿ. ರಾವ್, 3.00 ಡಿ.ಬಾಲಕೃಷ್ಣ–ವೀಣಾವಾದನ. **ಸಂಜೆ** 4.00 ಮಹಿಳಾರಂಗ: ಚಳಿಗಾಲದಲ್ಲಿ ಶುಷ್ಕ ಚರ್ಮದಿಂದಾಗುವ ಸಮಸ್ಯೆಗಳು ಮತ್ತು ಪರಿಹಾರ, ಭಾಗವಹಿಸುವ ವೈದ್ಯರು–ಆಯುರ್ವೇದ ವೈದ್ಯರಾದ ಡಾ.ಜಿ. ಸನ್ಮತಿ ಪ್ರಸ್ತುತಿ–ಎಂ.ಎಸ್.ಭಾರತಿ, 4.45 ಹಿಂದಿ ಪಾಠ: ಆಯೇಷಾ ಸುಲ್ತಾನ, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು–ಹೊನ್ನು" ನಿಖರ ಹಾಗೂ ಸಂರಕ್ಷಿತ ಬೇಸಾಯ ವಿಧಾನ ಕುರಿತು ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುವವರು ಡಾ.ಜೆ.ಎಸ್.ಅರವಿಂದಕುಮಾರ್ ಹಾಗೂ ಎನ್.ಪ್ರಸನ್ನ, ಪ್ರಸ್ತುತಿ–ಎನ್.ಕೇಶವಮೂರ್ತಿ. **ರಾತ್ರಿ:** 9.30 ಮತ್ತೆ ಕೇಳಿ ಹಾದಿಯಲ್ಲಿ ಕಂಡ ಮುಖ: ಇಳೀ ವಯಸ್ಸಿನಲ್ಲೂ ಸೃಜನಶೀಲರಾಗಿ ಬದುಕುತ್ತಿರುವ ಎ.ವಿ. ಲಲಿತಾಂಬ ಹಾಗೂ ರಾಧಾಕೃಷ್ಣಶೆಟ್ಟಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಅಬ್ದುಲ್ ರಶೀದ್.

ಸಾಹಿತಿಗಳಾದ ಜಿ.ಎ.ಶಿವಲಿಂಗಯ್ಯ, ಡಾ.ಎಸ್.ಎಸ್.ವಿಜಯರಿಗೆ ಸುತ್ತೂರು ಶ್ರೀಗಳಿಂದ

'ಶಕುಂತಲ ಜಯದೇವ ಶರಣ' ಪ್ರಶಸ್ತಿ ಪ್ರದಾನ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ರಾಜೇಂದ್ರ ಭವನದಲ್ಲಿ ಭಾನುವಾರ ಶಕುಂತಲ ಜಯದೇವ ಶರಣ ಪ್ರಶಸ್ತಿಯನ್ನು ಸುತ್ತೂರು ಶ್ರೀಗಳು ಪ್ರದಾನ ಮಾಡಿದರು.

ಮೈಸೂರು,ಜ.7(ಪಿಎಂ)– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ವತಿಯಿಂದ ಭಾನುವಾರ ಶಕುಂತಲ ಜಯದೇವ ಶರಣ ಪ್ರಶಸ್ತಿ–2023 ಅನ್ನು ಸಾಹಿತಿಗಳಾದ ಜಿ.ಎ. ಶಿವಲಿಂಗಯ್ಯ ಮತ್ತು ಡಾ.ಎಸ್.ಎಸ್.ವಿಜಯ (ವಿಜಯಾದೇವಿ) ಅವರಿಗೆ ಪ್ರದಾನ ಮಾಡಲಾಯಿತು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ರಾಜೇಂದ್ರ ಭವನದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಈ ಇಬ್ಬರು ಸಾಹಿತಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಶಕುಂತಲ ಜಯದೇವ ಅವರು ಪರಿಷತ್ತಿನಲ್ಲಿಟ್ಟಿರುವ ದತ್ತಿಯಡಿ ಸಾಹಿತ್ಯ, ಶರಣ ಸಾಹಿತ್ಯ ಹಾಗೂ ಕಲೆಗೆ ಸಲ್ಲಿಸಿರುವ ಸೇವೆ ಗುರುತಿಸಿ ಪ್ರತಿವರ್ಷ ಇಬ್ಬರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ.

ಸಮಾರಂಭ ಉದ್ಘಾಟಿಸಿದ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಎಂದೆಂದಿಗೂ ಮನುಕುಲಕ್ಕೆ ಲೇಸುಂಟು ಮಾಡುವ ತತ್ವವನ್ನು 12ನೇ ಶತಮಾನದ ಶಿವಶರಣರು ನೀಡಿದ್ದು, ಶರಣರು ಹೇಳಿದಂತೆ ದಯೆಯನ್ನು ಮರುಸ್ಥಾಪಿಸದಿದ್ದರೆ ಈ ಭೂಮಿಗೆ ಉಳಿಗಾಲವಿಲ್ಲ. 'ದಯೆಯೇ ಧರ್ಮದ ಮೂಲ' ಎಂದು ಬಸವಣ್ಣನವರು ಹೇಳಿದ್ದು, ಆದರೆ ಇಂದು ಲೋಕದಲ್ಲಿ ದಯೆ ಎಂಬುದು ಕ್ಷೀಣವಾಗುತ್ತಿರುವ ಕಾರಣ ಎಲ್ಲೆಲ್ಲೂ ಹಿಂಸೆಯನ್ನು ಕಾಣುತ್ತಿದ್ದೇವೆ. ಶರಣರು ನಮಗೆ ಅರಿವನ್ನು ನೀಡಿ ಶತಮಾನಗಳೇ ಕಳೆದು ಹೋಗಿವೆ. ಅವರ ಎಚ್ಚರಿಕೆಯ ನುಡಿಗಳನ್ನು ಕಡೆಗಣಿಸಿದ್ದೇ ಆದಲ್ಲಿ ನಮಗೆ ಖಂಡಿತವಾಗಿಯೂ ಉಳಿಗಾಲವಿಲ್ಲ ಎಂದು ಎಚ್ಚರಿಸಿದರು.

ದಾನ ಮತ್ತು ಪರೋಪಕಾರಕ್ಕೆ ಮೂಲ ತತ್ವವನ್ನು ಒದಗಿಸಿದವರು ಶಿವಶರಣರು. ಪ್ರಕೃತಿಯಲ್ಲಿ ಮಿಡಿಯುವ ಜೀವನವನ್ನು ಶರಣರು ಅರ್ಥ ಮಾಡಿಕೊಂಡಿದ್ದರು. ಹಾಗಾಗಿ ಅವರು ಕೆಲವರನ್ನು ತೊರೆದಿದ್ದರು. ಆದರೆ ನಾವು ಪ್ರಕೃತಿಯನ್ನು ಮನಸೋಯಿಚ್ಛೆ ಶೋಷಣೆ ಮಾಡಿ ತೊಂದರೆಗೆ ಒಳಗಾಗುತ್ತಿದ್ದೇವೆ. ಪ್ರಸ್ತುತ ಎದುರಾಗಿರುವ 'ಹವಾಮಾನ ಬದಲಾವಣೆ' ಎಂಬ ಸಂಕಷ್ಟಕ್ಕೆ ಮಾನವ ನಿಸರ್ಗವನ್ನು ತಿರಸ್ಕಾರದಿಂದ ಕಂಡಿದ್ದೇ ಕಾರಣ ಎಂದು ತಿಳಿಸಿದರು.

ಶರಣರ ಚಳುವಳಿಯಲ್ಲಿ ಸೃಷ್ಟಿಯಾದ ಸಾವಿರಾರು ವಚನಗಳಲ್ಲಿ ಕಂಡು ಬರುವುದು ಮಾನವನ ಬದುಕನ್ನು ಉತ್ತಮಗೊಳಿಸುವ ಉಪಾಯವೇ ಆಗಿದೆ. ಇಂದಿನ ಪ್ರಶಸ್ತಿ ಪುರಸ್ಕೃತರಾದ ಶಿವಲಿಂಗಯ್ಯ ಮತ್ತು ಡಾ.ವಿಜಯಾದೇವಿ ಅವರು ಕೇವಲ ತಮ್ಮ ವೃತ್ತಿಗಳನ್ನು ಅನುಸರಿಸಿಲ್ಲ. ಜೊತೆ ಜೊತೆಗೆ ಶರಣ ಚಿಂತನೆಗಳನ್ನು ವಿಶಾಲ ಸಮಾಜದಲ್ಲಿ ಬಿತ್ತಲು ಪ್ರಯತ್ನಿಸಿದ್ದಾರೆ. ಅವರ ಬದುಕಿನ ಸಾರ್ಥಕತೆ ಇರುವುದು ಇಲ್ಲೇ. ನಮ್ಮ ನಡುವೆ ಇಂತಹ ಉದಾತ್ತ ಆದರ್ಶವನ್ನು ಪಾಲಿಸುವ ಮಂದಿ ಇರುವುದು ನಮ್ಮ ಆಶಾವಾದವನ್ನು ಉದ್ದೀಪನಗೊಳಿಸುತ್ತದೆ. ಸುತ್ತೂರು ಗುರು ಪರಂಪರೆ ಲೋಕೋದ್ಧಾರದ ಕೆಲಸಗಳು ನಿರಂತರವಾಗಿ ಮಾಡುತ್ತ ಬಂದಿದ್ದರಿಂದಲೇ ಶಿಕ್ಷಣ ಕ್ಷೇತ್ರದಲ್ಲಿ ಇಂದು ಕ್ರಾಂತಿಕಾರಕ ಬದಲಾವಣೆಯಾಗಿದೆ ಎಂದು ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಸಿ. ಸೋಮಶೇಖರ, ಮೈಸೂರು ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ದತ್ತಿ ದಾಸೋಹಿ ಶಕುಂತಲ ಜಯದೇವ ಮತ್ತಿತರರು ಈ ಸಮಾರಂಭದಲ್ಲಿ ಹಾಜರಿದ್ದರು.

> ಹೊಸದನ್ನು ಕಲಿತುಕೊಳ್ಳಲು ಆಸಕ್ತಿ ಹೊಂದಬೇಕು. ಇದೇ ಕಾರಣಕ್ಕೆ ಅನಿರೀಕ್ಷಿತವಾಗಿ ಒದಗಿಬಂದ ತಾಮ್ರದ ಶಾಸನ ಓದುವ ಅವಕಾಶ ನನಗೆ ಬ್ರಾಹ್ಮಿ ಭಾಷೆ ಕಲಿಯಲು ಪ್ರೇರಣೆ ನೀಡಿತು. ಸದರಿ ಶಾಸನದಲ್ಲಿ ಆನೆ ಲಾಂಛನವಿದ್ದರಿಂದ ಇದು ಗಂಗರಿಗೆ ಸೇರಿದ್ದು ಎಂದು ಗೊತ್ತಾಯಿತು. ಮೂರು ತಿಂಗಳ ಕಾಲ ಅಭ್ಯಾಸ ಮಾಡಿ ಬ್ರಾಹ್ಮಿ ಭಾಷೆ ಕಲಿತೆ.
> -ಜಿ.ಎ.ಶಿವಲಿಂಗಯ್ಯ,
> ಪ್ರಶಸ್ತಿ ಪುರಸ್ಕೃತರು.

'ಅರಣ್ಯ ಕಾಯಕ ಯೋಗಿ' ಪ್ರಶಸ್ತಿ ಪ್ರದಾನ

ಅರಣ್ಯ ಇಲಾಖೆಯಲ್ಲಿ ಸೇವೆ ಶ್ಲಾಘನೀಯ; ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್



ಮೈಸೂರು,ಜ.7(ಪಿಎಂ)–ಜೀವದ ಹಂಗನ್ನು ತೊರೆದು ಅರಣ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುವುದು ಶ್ಲಾಘನೀಯ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಹೇಳಿದರು.

ಮೈಸೂರಿನ ರಮಾಗೋವಿಂದ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್‌ನ ಮೊದಲನೇ ವಾರ್ಷಿಕೋತ್ಸವ ಹಾಗೂ ನಿವೃತ್ತ ಅರಣ್ಯಾಧಿಕಾರಿ ದಿವಂಗತ ಎನ್.ಸುಬ್ರಹ್ಮಣ್ಯ ಸ್ಮರಣಾರ್ಥ 'ಅರಣ್ಯ ಕಾಯಕ ಯೋಗಿ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಅನೇಕ ಸಂಘ ಸಂಸ್ಥೆಗಳು ಹಲವು ವಿಧದ ಪ್ರಶಸ್ತಿಗಳನ್ನು ಕೊಡಮಾಡುತ್ತಿವೆ. ಆದರೆ ಅರಣ್ಯ ಇಲಾಖೆಯಲ್ಲಿನ ಸೇವೆಗಾಗಿ ಕೊಡುತ್ತಿರುವ ಪ್ರಶಸ್ತಿಗಳು ಅಪರೂಪ. ಎನ್.ಸುಬ್ರಹ್ಮಣ್ಯರವರ ಪ್ರಾಮಾಣಿಕ, ಸರಳ–ಸಜ್ಜನಿಕೆ ವ್ಯಕ್ತಿತ್ವ ಸರ್ಕಾರಿ ನೌಕರರಿಗೆ ಮಾದರಿ ಎಂದು ತಿಳಿಸಿದರು.

ಮೈಸೂರು ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಬಸವರಾಜ್ ಮಾತನಾಡಿ, ಕೆಳ ದರ್ಜೆಯ ನೌಕರರ ಉತ್ತಮ ಸೇವೆಯಿಂದಲೇ ಇಲಾಖೆಯ ಕಾರ್ಯಾಚರಣೆಗಳು ಯಶಸ್ಸು ಕಾಣುತ್ತಿರುವುದಾಗಿದೆ ಎಂದು ಹೇಳಿದರು.

ಇದೇ ವೇಳೆ ಕೊಳ್ಳೇಗಾಲದ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ವಾಹನ ಚಾಲಕ ಕೆ.ರಾಮು, ಕೌದಳ್ಳಿಯ ಉಪ ವಲಯ ಅರಣ್ಯಾಧಿಕಾರಿ ಹೆಚ್.ರಾಮು ಹಾಗೂ ನಿವೃತ್ತ ಉಪ ವಲಯ ಅರಣ್ಯಾಧಿಕಾರಿ ವಿ.ಮಂಜುನಾಥ್ ಅವರಿಗೆ ಅರಣ್ಯ ಕಾಯಕ ಯೋಗಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅಲ್ಲದೆ, ದಿವಂಗತ ಎನ್.ಸುಬ್ರಹ್ಮಣ್ಯ ಅವರ ಕುರಿತ ಸಾಕ್ಷ್ಯಚಿತ್ರದ ತುಣುಕನ್ನು ಪ್ರದರ್ಶಿಸಲಾಯಿತು. ಸಮಾಜ ಸೇವಕರಾದ ಡಾ.ಕೆ.ರಘುರಾಂ ವಾಜಪೇಯಿ, ಡಾ.ಜಿ.ಜೆ.ವಿಶ್ವನಾಥ್, ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕ ಕಾರ್ಯದರ್ಶಿ ಗಾಯತ್ರಿ ಸುಂದರೇಶ್, ಅಧ್ಯಕ್ಷ ಹೆಚ್.ಆರ್.ಸುಂದರೇಶನ್ ಮತ್ತಿತರರು ಹಾಜರಿದ್ದರು.

ಪದವೀಧರರಿಗೆ ಹಣ ಕೊಡುವ ಬದಲು ಉದ್ಯೋಗ ನೀಡಿ

ವಾಟಾಳ್ ನಾಗರಾಜ್ ಒತ್ತಾಯ



ಮೈಸೂರಿನ ಹಾರ್ಡಿಂಗ್ ವೃತ್ತದ ಬಳಿ ವಾಟಾಳ್ ನಾಗರಾಜ್ ನೇತೃತ್ವದ ಪ್ರತಿಭಟನೆ ನಡೆಯಿತು

ಮೈಸೂರು, ಜ.7(ಜಿಎ)–ಪದವೀಧರರಿಗೆ ಹಣದ ಬದಲು ಉದ್ಯೋಗ ಕೊಟ್ಟು ಭದ್ರತೆ ಒದಗಿಸಿ. ಅವರನ್ನು ಕಡೆಗಣಿಸಬೇಡಿ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಒತ್ತಾಯಿಸಿದರು.

ಉದ್ಯೋಗಕ್ಕಾಗಿ ಹಿಂದಿ ಹೇರಿಕೆ ವಿರೋಧ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿರುದ್ಧ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಹಾರ್ಡಿಂಗ್ ವೃತ್ತದ ಬಳಿ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯ ಸರಕಾರ ಪದವೀಧರರಿಗೆ 3 ಸಾವಿರ ರೂ., ಡಿಪ್ಲೊಮಾ ಆದವರಿಗೆ 1500 ರೂ., ಕೊಡುವುದು ಬೇಡ. ಅವರಿಗೆ ಉದ್ಯೋಗ ಕಲ್ಪಿಸಿ ಕೊಡಿ. ಉದ್ಯೋಗವಿದ್ದರೆ ಬದುಕಲು ಸಾಧ್ಯ. ಕೇಂದ್ರ ಸರಕಾರ ಉದ್ಯೋಗ ನೀಡಲು ರಾಜ್ಯದಲ್ಲಿ ಹಿಂದಿ ಹೇರುವುದು, ಬ್ಯಾಂಕುಗಳಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡಬೇಕು, ಕನ್ನಡದಲ್ಲೇ ಬ್ಯಾಂಕುಗಳ ಪರೀಕ್ಷೆ ನಡೆಸಬೇಕು. ಕನ್ನಡದಲ್ಲೇ ರೈಲ್ವೆ ಪರೀಕ್ಷೆ ಕಡ್ಡಾಯವಾಗಿ ಆಗಲೇಬೇಕು ಎಂದು ಆಗ್ರಹಿಸಿದರು.

ಪ್ರತಿ ವರ್ಷ ಎಷ್ಟು ಪದವೀಧರರು ಹೊರ ಬರುತ್ತಾರೆ ಎಂದು ಲೆಕ್ಕಾಚಾರ ಮಾಡಿ ಅವರಿಗೆ ಉದ್ಯೋಗ ಕಲ್ಪಿಸಿ ಕೊಡಬೇಕು. ಅದಕ್ಕೆ ಒಬ್ಬರು ಸಂಪುಟ ದರ್ಜೆ ಸಚಿವರು ಇರಬೇಕು ಎಂದರು.

ಕರವೇ ನಾರಾಯಣಗೌಡ ಅವರನ್ನು ಬಂಧಿಸಿರುವುದು ಸರಿಯಲ್ಲ, ಕನ್ನಡಿಗರ ಹಾಗೂ ಕನ್ನಡದ ಪರ ಹೋರಾಟ ಮಾಡುವವರನ್ನು ಸರ್ಕಾರಗಳು, ಹೆದರಿಸುವ ಬದಲು, ರಾಜ್ಯದಲ್ಲಿ ಕನ್ನಡ ಸ್ಥಿತಿ ಏನಾಗಿದೆ ಎಂಬುವುದನ್ನು ನೋಡಬೇಕಿದೆ. ಕನ್ನಡದಲ್ಲಿ ನಾಮಫಲಕವನ್ನು ಹಾಕದಿದ್ದರೆ ನಾವೇ ಹೊಡೆದಾಕುತ್ತೇವೆ, ಕಿತ್ತು ಹಾಕುತ್ತೇವೆ ಎಂದು ಎಚ್ಚರಿಸಿದರು.

ಶಿಕ್ಷಕರು ಮತ್ತು ಉಪನ್ಯಾಸಕರ ವರ್ಗಾವಣೆ ಬಗ್ಗೆ ಸರ್ಕಾರದ ಧೋರಣೆ ಬದಲಾವಣೆಯಾಗಬೇಕು. ವರ್ಗಾವಣೆಯಲ್ಲಿ ಗಂಡ ಎಲ್ಲಿ ಕೆಲಸ ಮಾಡುತ್ತಾರೆ, ಅಲ್ಲಿ ಪತ್ನಿಗೆ ಅವಕಾಶ ಮಾಡಿಕೊಡಬೇಕು. ಅತಿಥಿ ಉಪನ್ಯಾಸಕರನ್ನು ಖಾಯಂ ಮಾಡಬೇಕು ಎಂದು ಒತ್ತಾಯಿಸಿದರು.

ನಮ್ಮ ರಾಜ್ಯದಲ್ಲಿರುವ ಮಲ್ಟಿ ನ್ಯಾಷನಲ್ ಕಂಪನಿಗಳು ಉತ್ತರ ಭಾರತದವರಿಗೆ, ತಮಿಳುನಾಡು, ಕೇರಳ ರಾಜ್ಯದವರಿಗೆ ಉದ್ಯೋಗ ನೀಡುತ್ತಿವೆ. ಆದ್ದರಿಂದ ಕನ್ನಡಿಗರಿಗೆ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ನೀಡಲು ಮುಂದಾಗಬೇಕು. ಇಲ್ಲವಾದರೆ ಉಗ್ರಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ರಾಜ್ಯದ ಎಲ್ಲಾ ಕಾಲೇಜುಗಳು ಜೆಡಿಎಸ್, ಕಾಂಗ್ರೆಸ್, ಬಿಜೆಪಿ ರಾಜಕಾರಣಿಗಳು ಹಾಗೂ ಮಠಾಧೀಶರ ಕೈಗಳಲ್ಲಿ ಇವೆ. ರಾಜ್ಯದ ಕಾಲೇಜುಗಳಲ್ಲಿ ಇರುವ ಸೀಟುಗಳನ್ನು ಹೊರಗಡೆಯಿಂದ ಬರುವವರಿಗೆ ನೀಡುತ್ತಿದ್ದಾರೆ. ನಮ್ಮ ರಾಜ್ಯದವರಿಗೆ ನೀಡುತ್ತಿಲ್ಲ. ಸೀಟು ಪಡೆಯಲು ಕೋಟಿ ಕೋಟಿ ಹಣವನ್ನು ನೀಡಬೇಕು. ಇಷ್ಟೊಂದು ಹಣವನ್ನು ಎಲ್ಲಿಂದ ತರಬೇಕು ಎಂದು ಪ್ರಶ್ನಿಸಿದರು. ಪ್ರತಿಭಟನೆಯಲ್ಲಿ ಕನ್ನಡಪರ ಹೋರಾಟಗಾರರಾದ ಶಿವಶಂಕರ್, ತಾಯೂರು ವಿಠಲಮೂರ್ತಿ, ಪಾರ್ಥಸಾರಥಿ ಮತ್ತಿತರರು ಪಾಲ್ಗೊಂಡಿದ್ದರು.

ಇತ್ತೀಚಿನ ದಿನಗಳಲ್ಲಿ ಕೃಷಿ ಮಾಡುವವರ ಸಂಖ್ಯೆ ಕ್ಷೀಣಿಸುತ್ತಿದೆ

ಶಾಸಕ ಪಿ.ಎಂ. ನರೇಂದ್ರ ಸ್ವಾಮಿ ವಿಷಾದ



ಮೈಸೂರಿನ ಕಲಾಮಂದಿರದಲ್ಲಿ ವಿಶ್ವೇಶ್ವರಯ್ಯ ಡೆವಲಪ್‌ಮೆಂಟ್ ಆರ್ಗನೈಸೇಷನ್ ಹಾಗೂ ಮೈಕ್ರೋಬಿ ಫೌಂಡೇಷನ್ ಸಹಯೋಗದಲ್ಲಿ ಭಾನುವಾರ ನಡೆದ 'ಸುಗ್ಗಿ ಸಂಭ್ರಮ' ಕಾರ್ಯಕ್ರಮದಲ್ಲಿ ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಂಡ್ಯ ಜಿಲ್ಲೆಯ ಹರಳಹಳ್ಳಿ ಗ್ರಾಮದ ಟಿ.ಪಿ.ಹೊಂಬೇಗೌಡ ಅವರಿಗೆ ಕೃಷಿ ದ್ರೋಣಾಚಾರ್ಯ ಪ್ರಶಸ್ತಿ, ಕೆ.ಆರ್.ನಗರ ತಾಲೂಕಿನ ಕಾಳೇನಹಳ್ಳಿ ಗ್ರಾಮದ ಪುಟ್ಟಸ್ವಾಮಿ ಗೌಡ ಹಾಗೂ ದೇವಿರಮ್ಮ ದಂಪತಿಗಳಿಗೆ ಕೃಷಿ ಭೀಷ್ಮಾಚಾರ್ಯ ಮತ್ತು ತಿ.ನರಸೀಪುರ ತಾಲೂಕಿನ ತುಂಬ್ಲ ಗ್ರಾಮದ ಅಭಿಲಾಷ್ ಅವರಿಗೆ ಕೃಷಿ ಏಕಲವ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು,ಜ.7(ಎಂಟಿವೈ)– ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಉದ್ಯೋಗ ಬಯಸುವವರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಕೃಷಿ ಮಾಡುವವರ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ವಿಷಾದಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ವಿಶ್ವೇಶ್ವರಯ್ಯ ಡೆವಲಪ್‌ಮೆಂಟ್ ಆರ್ಗನೈಸೇಷನ್ ಹಾಗೂ ಮೈಕ್ರೋಬಿ ಫೌಂಡೇಷನ್ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ಸುಗ್ಗಿ ಸಂಭ್ರಮ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವಿದ್ಯಾವಂತ ಯುವಕರು ಸರ್ಕಾರಿ ಉದ್ಯೋಗ ಬಯಸುವುದು ಸಹಜ. ಹೀಗಾಗಿ ಕೃಷಿ ಕ್ಷೇತ್ರದಲ್ಲಿ ತೊಡಗಿಕೊಳ್ಳುವ ಯುವಕರ ಸಂಖ್ಯೆ ಕ್ಷೀಣಿಸುತ್ತಿದೆ. ಈ ನಿಟ್ಟಿನಲ್ಲಿ ಕೃಷಿ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಬೇಕಾಗಿದೆ. ಕೃಷಿಯತ್ತ ಯುವಕರನ್ನು ಸೆಳೆಯುವ ಅಗತ್ಯವಿದೆ. ಸಾಧಕ ಕೃಷಿಕರನ್ನು ಗೌರವಿಸಬೇಕು. ಹೊಸ ಪೀಳಿಗೆಯ ಯುವ ರೈತರನ್ನು ಕೃಷಿ ಕ್ಷೇತ್ರಕ್ಕೆ ಆಕರ್ಷಿಸಬೇಕು ಎಂದರು.

ಇದಕ್ಕೂ ಮುನ್ನ ಆಕಾಶವಾಣಿ ಕೃಷಿರಂಗ ಕಾರ್ಯಕ್ರಮದ ನಿರ್ವಾಹಕ ಎನ್.ಕೇಶವಮೂರ್ತಿ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ನಾವು ಪರ್ವಕಾಲದಲ್ಲಿದ್ದೇವೆ. ಪೋಷಕರಿಗೆ ಇದ್ದ ಕೃಷಿ ಭೂಮಿ ಮಕ್ಕಳಿಗೆ ಹಸ್ತಾಂತರಗೊಂಡಾಗ ಹಂಚಿಕೆಯಾಗುತ್ತಿದೆ. ಇದರ ನಡುವೆ ಕಾರ್ಪೋರೇಟ್ ಅಗ್ರಿಕಲ್ಚರ್ ವ್ಯವಸ್ಥೆ ಕಾಲಿಡದಂತೆ ನೋಡಿಕೊಳ್ಳಬೇಕಾದ ಸವಾಲು ನಮ್ಮ ಮುಂದೆ ಇದೆ. ಕಾರ್ಪೋರೇಟ್ ಅಗ್ರಿಕಲ್ಚರ್ ವ್ಯವಸ್ಥೆ ಕಾಲಿಟ್ಟರೆ, ಗ್ರಾಹಕರಿಗೆ ಬೇಕಾದ ಕೃಷಿ ಉತ್ಪನ್ನಗಳು ಕೈಗೆಟುಕುವ ಬೆಲೆಯಲ್ಲಿ ಸಿಗುವುದಿಲ್ಲ. ದುಡ್ಡಿನಿಂದಲೇ ಕೃಷಿ ಕ್ಷೇತ್ರವನ್ನು ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲ. ಒಂದು ವೇಳೆ ದುಡ್ಡಿನ ಹಿಡಿತಕ್ಕೆ ಒಳಗಾದರೆ ಅಭಿವೃದ್ಧಿ ಪಿರಮಿಡ್ ಬುಡಮೇಲಾಗುತ್ತದೆ. ಆಗ ಇನ್ನಷ್ಟು ಅಪಾಯಕಾರಿ ಬೆಳವಣಿಗೆ ನಡೆಯುತ್ತದೆ ಎಂದು ಎಚ್ಚರಿಸಿದರು.

ಸಮಾಜವನ್ನು ಮುನ್ನಡೆಸುವ ವೃತ್ತಿ ವ್ಯವಸಾಯ. ನೇಗಿಲು ಗಟ್ಟಿಯಾಗಿರುವವರೆಗೂ ದೇಶ ಸುಸ್ಥಿರವಾಗಿರುತ್ತದೆ. ಇಲ್ಲವಾದರೆ ಅಸ್ಥಿರವಾಗಲಿದೆ. ಕೃಷಿ ಮಾಡುತ್ತಿರುವವರು ಕೃಷಿಯಿಂದ ವಿಮುಖರಾಗದಂತೆ ನೋಡಿಕೊಳ್ಳಬೇಕಾಗಿದೆ. ಹೆಣ್ಣು ಮಕ್ಕಳು ರೈತರನ್ನು ವಿವಾಹವಾಗಲು ಒಪ್ಪುತ್ತಿಲ್ಲ. ಈ ಕಾರಣದಿಂದ ವಿದ್ಯಾವಂತರು ಕೃಷಿ ಕ್ಷೇತ್ರ ಮುನ್ನಡೆಸುತ್ತಿಲ್ಲ. ಪರಿಸ್ಥಿತಿ ಹೀಗೆ ಮುಂದುವರೆದರೆ ಸಮಸ್ಯೆ ಉಲ್ಬಣಗೊಳ್ಳುತ್ತದೆ. ಹೀಗಾಗಿ ಅವರನ್ನು ಕೃಷಿಯತ್ತ ಸೆಳೆಯುವ ಮತ್ತು ಶಾಲಾ–ಮಕ್ಕಳಿಗೆ ಕೃಷಿ ಚಟುವಟಿಕೆಗಳ ಕುರಿತು ಮನವರಿಕೆ ಮಾಡಿಸುವ ಕೆಲಸವಾಗಬೇಕು ಎಂದು ತಿಳಿಸಿದರು.

ಪುರಸ್ಕಾರ: ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಹರಳಹಳ್ಳಿ ಗ್ರಾಮದ ಟಿ.ಪಿ.ಹೊಂಬೇಗೌಡ ಅವರಿಗೆ 'ಕೃಷಿ ದ್ರೋಣಾಚಾರ್ಯ' ಪ್ರಶಸ್ತಿ, ಕೆ.ಆರ್.ನಗರ ತಾಲೂಕಿನ ಕಾಳೇನಹಳ್ಳಿ ಗ್ರಾಮದ ಪುಟ್ಟಸ್ವಾಮಿ ಗೌಡ ಹಾಗೂ ದೇವಿರಮ್ಮ ದಂಪತಿಗಳಿಗೆ 'ಕೃಷಿ ಭೀಷ್ಮಾಚಾರ್ಯ' ಮತ್ತು ತಿ.ನರಸೀಪುರ ತಾಲೂಕಿನ ತುಂಬ್ಲ ಗ್ರಾಮದ ಅಭಿಲಾಷ್ ಅವರಿಗೆ 'ಕೃಷಿ ಏಕಲವ್ಯ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೊತೆಗೆ 21 ಸಾಧಕ ಕೃಷಿಕರಿಗೆ 'ಕೃಷಿ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಇದಕ್ಕೂ ಮುನ್ನ ಮಂಡ್ಯ ಜಿಲ್ಲೆಯ ಸುನೀಲ್ ಮತ್ತು ರಕ್ಷಿತ್ ತಂಡದವರು ವೇದಿಕೆಯಲ್ಲಿ ಪೂಜಾ ಕುಣಿತ ಪ್ರದರ್ಶಿಸಿ ಗಮನ ಸೆಳೆದರು. ಕಾರ್ಯಕ್ರಮದ ಅಂಗವಾಗಿ ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮಾಜಿ ಶಾಸಕ ಮನೋಹರ್ ಮಸ್ಕಿ, ಶಾಸಕ ಟಿ.ಎಸ್.ಶ್ರೀವತ್ಸ, ಸಾವಯವ ತಜ್ಞ ಡಾ.ಕೆ.ಆರ್.ಹುಲ್ಲುನಾಚೇಗೌಡ, ಮೈಸೂರು ಅಂಬಾರಿ ಸಂಸ್ಥೆಯ ಮುಖ್ಯಸ್ಥೆ ಸತ್ಯಶ್ರೀ ಬಿ.ಶ್ಯಾಮ್, ಧನ್ಯಶ್ರೀ ಡೆವಲಪರ್ಸ್‌ನ ಸಿ.ಶಂಕರ, ಜೆಎಸ್‌ಎಸ್‌ಎಸ್‌ಟಿಯು ಅಸೋಸಿಯೇಟ್ ಡೀನ್ ಡಾ.ರತ್ನಕರ್ ದೇವರು ಇನ್ನಿತರರು ಉಪಸ್ಥಿತರಿದ್ದರು.

ನೆಲದ ಸಂಸ್ಕೃತಿ ಉಳಿವಿಗೆ ಸಂಘಟಿತರಾಗಬೇಕು

ಅಯೋಧ್ಯೆ ಶ್ರೀರಾಮ ಮಂದಿರ ನಮ್ಮ ಹೆಮ್ಮೆ ; ಚಿತ್ರನಟಿ ತಾರಾ ಅನುರಾಧ



ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಿದ್ಧಾರ್ಥ ನಗರದ ವಾಸವಿ ಮಹಿಳಾ ಸಮಾಜದ ಬೆಳ್ಳಿ ಹಬ್ಬದ ಸಂಭ್ರಮಾಚರಣೆಯನ್ನು ಉದ್ಘಾಟಿಸಲಾಯಿತು.

ಮೈಸೂರು,ಜ.7(ಪಿಎಂ)– ಭಾರತೀಯ ಸಂಸ್ಕೃತಿಯ ಪುನರುಜ್ಜೀವನಕ್ಕೆ ಮಹಿಳಾ ಸಮುದಾಯ ಮುಂದಾಗಬೇಕು. ರಾಮಜನ್ಮ ಭೂಮಿ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಿಸಿರುವುದು ನಮ್ಮ ಹೆಮ್ಮೆ. ಧರ್ಮ, ದೇಶ, ನಮ್ಮ ನೆಲದ ಸಂಸ್ಕೃತಿ ಉಳಿವಿಗೆ ನಾವೆಲ್ಲರೂ ಸಂಘಟಿತರಾಗಬೇಕು ಎಂದು ಚಿತ್ರನಟಿ ತಾರಾ ಅನುರಾಧ ಹೇಳಿದರು.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಿದ್ಧಾರ್ಥನಗರದ ವಾಸವಿ ಮಹಿಳಾ ಸಮಾಜದ ಬೆಳ್ಳಿಹಬ್ಬದ ಸಂಭ್ರಮಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಆಧುನಿಕತೆಯ ಭರಾಟೆಯಲ್ಲಿ ಮಹಿಳೆಯರು ಕಳೆದುಹೋಗದೇ ಭಾರತೀಯ ಸಂಸ್ಕೃತಿ ಪುನರುಜ್ಜೀವನಕ್ಕೆ ಮುಂದಾಗಬೇಕು. ಆರ್ಯವೈಶ್ಯ ಸಮಾಜದ ಮಹಿಳೆಯರು ಭಾರತೀಯ ಸಂಸ್ಕೃತಿ ಉಳಿಸಿ ಬೆಳೆಸುವಲ್ಲಿ ಮುಂಚೂಣಿಯಲ್ಲಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಆಂಧ್ರ, ತೆಲಂಗಾಣದಲ್ಲೇ ಆರ್ಯವೈಶ್ಯರು ಹೆಚ್ಚಿದ್ದಾರೆ. ಕುಲಕಸುಬು ವ್ಯಾಪಾರವಾದರೂ ಈ ಸಮುದಾಯದ ಪೂಜೆ, ಸಂಪ್ರದಾಯ, ಧಾರ್ಮಿಕ ಆಚರಣೆಗೆ ಮಾದರಿಯಾಗಿದೆ. ಅಂತೆಯೇ ಸಮುದಾಯ ಮುಂದುವರೆಯಬೇಕು ಎಂದು ತಿಳಿಸಿದರು.

ಕುಟುಂಬದ ಎಲ್ಲಾ ಸದಸ್ಯರು ಒಟ್ಟಿಗೆ ಬಾಳುವುದು ಸಾಮರಸ್ಯದ ಸಂಕೇತ. ಆ ಸಂಭ್ರಮ ಈಗ ಸಿಗುತ್ತಿಲ್ಲ. ಮಕ್ಕಳು ವಿದೇಶದಲ್ಲಿದ್ದರೆ, ಭಾರತದಲ್ಲಿ ಪೋಷಕರು ಬದುಕುವಂತಹ ಸನ್ನಿವೇಶ ಹೆಚ್ಚಾಗುತ್ತಿದ್ದು, ಇದು ಬೇಸರದ ಸಂಗತಿ. ಕುಟುಂಬ ಸದಸ್ಯರು ಒಂದೆಡೆ ಬಾಳಲು ಆದ್ಯತೆ ನೀಡಬೇಕು. ಇದರಿಂದ ಕುಟುಂಬದಲ್ಲಿ ಸಮೃದ್ಧಿ ಮತ್ತು ಸಂತಸ ನೆಲೆಸಲಿದೆ. ಹಿಂದೆ ಅತ್ತೆ–ಸೊಸೆ ನಡುವೆ ಸಾಮರಸ್ಯ ಇರುತ್ತಿತ್ತು. ಅದು ಈಗ ಕಾಣಸಿಗುತ್ತಿಲ್ಲ. ಇದಕ್ಕೆ ಕಾರಣವೇನು ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದು ಹೇಳಿದರು.

ಇದೇ ವೇಳೆ 10 ಮಂದಿ ವಿಶೇಷಚೇತನರಿಗೆ ಕೃತಕ ಕಾಲುಗಳನ್ನು ವಿತರಣೆ ಮಾಡಲಾಯಿತು. ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದ ಅಧ್ಯಕ್ಷ ಎಸ್.ಕೆ.ದಿನೇಶ್ ಸಮಾರಂಭ ಉದ್ಘಾಟಿಸಿದರು. ಶ್ರೀ ಕನ್ಯಕಾಪರಮೇಶ್ವರಿ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಹೆಚ್.ಎಂ.ಸಂದೀಪ್, ವಾಸವಿ ಮಹಿಳಾ ಸಮಾಜದ ಅಧ್ಯಕ್ಷೆ ಲಕ್ಷ್ಮಿ ದಿನೇಶ್, ಸಂಸ್ಥಾಪಕ ಅಧ್ಯಕ್ಷೆ ಕಾಂತ ಸುಭಾಷ್, ಕಾರ್ಯದರ್ಶಿ ರಾಧ ಗೋಪಿನಾಥ್, ಉಪಾಧ್ಯಕ್ಷೆ ಪ್ರತಿಭಾ ಶಾಂತಾರಾಂ, ಖಜಾಂಚಿ ಸಿ.ಎಸ್.ಅನಿತಾ ಮತ್ತಿತರರು ಹಾಜರಿದ್ದರು.

5ನೇ ಬಾರಿಗೆ ಬಾಂಗ್ಲಾ ಪ್ರಧಾನಿಯಾಗಿ ಶೇಖ್ ಹಸೀನಾ ಆಯ್ಕೆ



ಢಾಕಾ: ಬಾಂಗ್ಲಾದೇಶದ ಪ್ರಧಾನಿಯಾಗಿ ಅವಾಮಿ ಲೀಗ್ ಮುಖ್ಯಸ್ಥೆ ಶೇಖ್ ಹಸೀನಾ ಅವರು ಐದನೇ ಬಾರಿಗೆ ಆಯ್ಕೆ ಆಗಲಿದ್ದಾರೆ.

ಬಾಂಗ್ಲಾದೇಶದ ಲೋಕಸಭೆ ಚುನಾವಣೆಯಲ್ಲಿ ಅವಾಮಿ ಲೀಗ್ ಅಧ್ಯಕ್ಷೆ ಮತ್ತು ಪ್ರಧಾನಿ ಶೇಖ್ ಹಸೀನಾ ಅವರು ಗೋಪಾಲ್‌ಗಂಜ್–3 (ತುಂಗಿಪಾರಾ–ಕೋಟ್ಲಿಪಾರಾ) ದಾಖಲೆ ಸಂಖ್ಯೆಯ ಮತಗಳಿಂದ ಗೆದ್ದಿದ್ದಾರೆ.

ಶೇಖ್ ಹಸೀನಾ ಅವರು ಢಾಕಾ ಆಡಳಿತ ವಿಭಾಗದ ಅಡಿಯಲ್ಲಿ ಗೋಪಾಲ್‌ಗಂಜ್ ಜಿಲ್ಲೆಯ ಗೋಪಾಲ್‌ಗಂಜ್–3 ಸ್ಥಾನಕ್ಕೆ ಅಭ್ಯರ್ಥಿಯಾಗಿ ನಿಂತರು. ಗೋಪಾಲಗಂಜ್ ಹಸೀನಾ ಅವರ ಜನ್ಮಸ್ಥಳ. 1991ರಿಂದ ಹಸೀನಾ ಈ ಕೇಂದ್ರದಿಂದ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ. ಆದರೆ, ಈ ಬಾರಿ ಪಡೆದ ಮತಗಳು ಕಳೆದ ಆರು ಬಾರಿಯ ದಾಖಲೆಯನ್ನು ಮುರಿದಿವೆ. ಸಾರ್ವತ್ರಿಕ ಚುನಾವಣೆಗಳಲ್ಲಿ ನಿರ್ಣಾಯಕ ವಿಜಯದ ಹೊರತಾಗಿಯೂ, ಚುನಾವಣಾ ಪ್ರಕ್ರಿಯೆಯು ವಿರಳ ಹಿಂಸಾಚಾರ ಮತ್ತು ಪ್ರಾಥಮಿಕ ವಿರೋಧ ಪಕ್ಷವಾದ ಬಾಂಗ್ಲಾದೇಶ ನ್ಯಾಶನಲಿಸ್ಟ್ ಪಾರ್ಟಿ ಬಹಿಷ್ಕಾರ ಸೇರಿದಂತೆ ಸವಾಲುಗಳನ್ನು ಎದುರಿಸಿತು. ಅವರು 1986 ರಿಂದ ಎಂಟನೇ ಬಾರಿಗೆ ಗೋಪಾಲಗಂಜ್–3 ಸ್ಥಾನದಿಂದ ಚುನಾವಣೆಯಲ್ಲಿ ಗೆದ್ದಿದ್ದಾರೆ.

ಅಯೋಧ್ಯೆಯ ಕಳಶ ಜಮ್ಮು–ಕಾಶ್ಮೀರದಲ್ಲಿ ಪ್ರತಿಷ್ಠಾಪನೆ

ಶ್ರೀನಗರ, ಜ.7– ಅಯೋಧ್ಯೆಯಿಂದ ತಂದ ಕಳಶವನ್ನು ಜಮ್ಮು ಮತ್ತು ಕಾಶ್ಮೀರದ ಅನಂತ್‌ನಾಗ್ ಜಿಲ್ಲೆಯ ಪ್ರಸಿದ್ಧ ಸೂರ್ಯ ದೇವಾಲಯದ ಆವರಣದಲ್ಲಿರುವ ರಾಮಮಂದಿರದಲ್ಲಿ ಭಾನುವಾರ ಪ್ರತಿಷ್ಠಾಪಿಸಲಾಯಿತು. ಉತ್ತರ ಪ್ರದೇಶ ಮತ್ತು ತಮಿಳುನಾಡು ಭಕ್ತರ ಸಮ್ಮುಖದಲ್ಲಿ ಸ್ಥಳೀಯರು ಕಳಶವನ್ನು ಪ್ರತಿಷ್ಠಾಪಿಸಿದರು. ಈ ವೇಳೆ ವಿಶೇಷ ಪೂಜೆ ಸಲ್ಲಿಸಲಾಯಿತು. ಕಾಶ್ಮೀರದಲ್ಲಿ ಶಾಂತಿ ಮತ್ತು ಸೌಹಾರ್ದ ನೆಲೆಸಲಿ ಎಂದು ಪ್ರಾರ್ಥಿಸುವ ಈ ದೇಶ ಜನರಿಗೆ ನಾವು ಕೃತಜ್ಞತೆ ಸಲ್ಲಿಸುತ್ತೇವೆ ಎಂದು ಸ್ಥಳೀಯ ಭಕ್ತರೊಬ್ಬರು ತಿಳಿಸಿದರು.

ಯಶಸ್ಸು ಸಿದ್ಧಿಸುವವರೆಗೂ ಛಲ ಬಿಡಬಾರದು

ವಿದುಷಿ ಡಾ.ತುಳಸಿ ರಾಮಚಂದ್ರ ಸಲಹೆ





ಮೈಸೂರಿನ ಗಾನಭಾರತಿ ರಮಾಗೋವಿಂದ ಕಲಾ ವೇದಿಕೆಯಲ್ಲಿ ಭಾನುವಾರ 'ನಾಟ್ಯ ಮಾರ್ಗಂ' ಉದ್ಘಾಟನಾ ಕಾರ್ಯಕ್ರಮದಲ್ಲಿ ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್‌ನ ಪ್ರೊ.ಕೆ.ರಾಮಮೂರ್ತಿ ರಾವ್, ನೃತ್ಯಾಲಯ ಟ್ರಸ್ಟ್ ಅಧ್ಯಕ್ಷೆ ವಿದುಷಿ ಡಾ.ತುಳಸಿ ರಾಮಚಂದ್ರ ನಾಟ್ಯಾಂಜಲಿ ಸಂಸ್ಥೆಯ ನಿರ್ದೇಶಕಿ ವಿದುಷಿ ಬಾನ ಶಾಸ್ತ್ರಿ ರಾಮನಾಥ್, ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರದ ಸಂಸ್ಥಾಪಕರಾದ ಡಾ.ವಸುಂಧರಾ ದೊರೆಸ್ವಾಮಿ ಉಪಸ್ಥಿತರಿದ್ದರು. ಯುಎಸ್‌ಎ ಕಲಾವಿದರ ನೃತ್ಯ ಪ್ರದರ್ಶನವನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜ.7(ಎಸ್‌ಬಿಡಿ)– ಯಶಸ್ಸು ಸಿದ್ಧಿಸುವವರೆಗೂ ಛಲ ಬಿಡದೆ ಪ್ರಯತ್ನ ಮುಂದುವರೆಸಬೇಕು ಎಂದು ಮೈಸೂರಿನ ನೃತ್ಯಾಲಯ ಟ್ರಸ್ಟ್ ಅಧ್ಯಕ್ಷೆ ವಿದುಷಿ ಡಾ.ತುಳಸಿ ರಾಮಚಂದ್ರ ಅವರು ಕಲಾವಿದರಿಗೆ ಸಲಹೆ ನೀಡಿದರು.

ಮೈಸೂರಿನ ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ(ವಿಪಿಎಸಿ) ಹಾಗೂ ಯುಎಸ್‌ಎಯ ನಾಟ್ಯಾಂಜಲಿ ಸಂಸ್ಥೆಯ ಸಹಯೋಗದಲ್ಲಿ ನಗರದ ಗಾನಭಾರತಿ ರಮಾಗೋವಿಂದ ಕಲಾ ವೇದಿಕೆಯಲ್ಲಿ ಭಾನುವಾರ ಆಯೋಜಿಸಿದ್ದ 'ನಾಟ್ಯ ಮಾರ್ಗಂ' ಯುಎಸ್‌ಎ ಪ್ರತಿಭಾನ್ವಿತ ಕಲಾವಿದರ ನೃತ್ಯ ಅಭಿವ್ಯಕ್ತಿಗಳು (ಭರತನಾಟ್ಯ) ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗುರುಗಳು ಮಾರ್ಗದರ್ಶನ ನೀಡಿ, ಎಷ್ಟೇ ಅಭ್ಯಾಸ ಮಾಡಿಸಿದರೂ ವೇದಿಕೆಯಲ್ಲಿನ ಪ್ರದರ್ಶನ ಆ ಕಲಾವಿದನ ಶ್ರದ್ಧೆ, ಪರಿಶ್ರಮವನ್ನು ಅವಲಂಬಿಸಿರುತ್ತದೆ. ಯಶಸ್ಸು ಎಲ್ಲಾ ಕಲಾವಿದರಿಗೂ ಬಹುಬೇಗ ಸಿದ್ಧಿಸುವುದಿಲ್ಲ. ಆದರೆ ವಿಫಲವಾಗಿದ್ದಕ್ಕೆ ಚಿಂತಿಸದೆ ಪ್ರಯತ್ನ ಮುಂದುವರೆಸಬೇಕು. ಯಶಸ್ಸು ಸಿದ್ಧಿಸುವವರೆಗೂ ಛಲ ಬಿಡಬಾರದು. ಹಾಗೆಯೇ ಒಮ್ಮೆ ಯಶಸ್ಸು ಸಿಕ್ಕಿದಾಕ್ಷಣ ಎಲ್ಲವನ್ನೂ ಸಾಧಿಸಿದ ಭಾವನೆ ಹೊಂದಬಾರದು. ಶ್ರದ್ಧಾಭಕ್ತಿಯಿಂದ ಕಲಾಸೇವೆ ಮುಂದುವರೆಸಬೇಕು ಎಂದು ಕಿವಿಮಾತು ಹೇಳಿದರು.

ಕಲಾವಿದರಿಗೆ ಪ್ರತಿಯೊಂದು ಪ್ರದರ್ಶನವೂ ಪರೀಕ್ಷೆ ಇದ್ದಂತೆ. ಪ್ರತೀ ವೇದಿಕೆಯೂ ಅವರಲ್ಲಿ ಅಡಗಿರುವ ಕಲೆಗೆ ಒರೆಗಲ್ಲು. ಕಲೆಯ ಅನುಭವ, ಸಂಸ್ಕಾರ, ಅದರ ಹಿಂದಿರುವ ಕಲಾವಿದರ ಪರಿಶ್ರಮ ಎಲ್ಲವೂ ಪ್ರದರ್ಶನದಲ್ಲಿ ಅಡಗಿರುತ್ತದೆ. ಹಾಗಾಗಿ ಕಲಾಸಕ್ತರು ಪೂರ್ಣ ಪ್ರಮಾಣದಲ್ಲಿ ಕಲಾ ಪ್ರದರ್ಶನವನ್ನು ಆಸ್ವಾದಿಸಿದರೆ ಎಲ್ಲರ ಪರಿಶ್ರಮಕ್ಕೆ ನಿಜವಾದ ಫಲ ಸಿಕ್ಕಂತಾಗುತ್ತದೆ ಎಂದು ಅಭಿಪ್ರಾಯಿಸಿದರು.

ಆರೋಗ್ಯಕ್ಕೆ ಕಲೆ ನೆರವು: ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್‌ನ ಪ್ರೊ.ಕೆ.ರಾಮಮೂರ್ತಿ ರಾವ್ ಮಾತನಾಡಿ, ಕಲೆಯಿಂದಲೇ ಆನಂದ, ಹೆಚ್ಚೆಚ್ಚು ಕಲೆ ಆಸ್ವಾದಿಸುವುದರಿಂದ ಆರೋಗ್ಯವಂತರಾಗಿ ಹೆಚ್ಚು ಕಾಲ ಜೀವಿಸಬಹುದು. ಡಾ.ವಸುಂಧರಾ ದೊರೆಸ್ವಾಮಿಯವರು ವಿಶ್ವ ಪರ್ಯಟನೆಯೊಂದಿಗೆ ಕಲಾ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮಂತೆ ಕಲಾ ಸೇವೆ ಸಲ್ಲಿಸುವವರನ್ನು ಗುರುತಿಸಿ ಅವರನ್ನು ಮೈಸೂರಿಗೆ ಪರಿಚಯಿಸುವ ಕಾರ್ಯವನ್ನೂ ಮಾಡಿಕೊಂಡು ಬಂದಿದ್ದಾರೆ. ಗುರುಗಳು ಕೇವಲ ಪಾಠ ಹೇಳಿದರೆ ಸಾಲದು. ಸ್ವತಃ ಪ್ರದರ್ಶನ ನೀಡಬೇಕೆಂಬ ಅರಿವು ಮೂಡಿಸುತ್ತಿದ್ದಾರೆ ಎಂದು ಬಣ್ಣಿಸಿದರು.

ಯುಎಸ್‌ಎ ಆಸ್ಟಿನ್–ಸ್ಯಾನ್ ಆಂಟೀನಿಯೊ ಟೆಕ್ಸಾಸ್‌ನಲ್ಲಿರುವ ನಾಟ್ಯಾಂಜಲಿ ಸಂಸ್ಥೆಯ ನಿರ್ದೇಶಕಿ ವಿದುಷಿ ಬಾನ ಶಾಸ್ತ್ರಿ ರಾಮನಾಥ್ ಹಾಗೂ ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರದ ಸಂಸ್ಥಾಪಕರಾದ ಡಾ.ವಸುಂಧರಾ ದೊರೆಸ್ವಾಮಿ ಮಾತನಾಡಿದರು.

ನಂತರ ವಿದುಷಿ ಡಾ.ಪಿ.ರಮಾ ಅವರ ಗಾಯನ, ಜನಾರ್ಧನ್ ಹಾಗೂ ಜಯ ರಾವ್ ಅವರ ವಾದ್ಯ ಸಹಕಾರದೊಂದಿಗೆ ವಿದುಷಿ ಬಾನ ಶಾಸ್ತ್ರಿ ರಾಮನಾಥ್ ಅವರ ಶಿಷ್ಯರಾದ ವಿದುಷಿಗಳಾದ ಅನುಪ್ರಿಯಾ ಜೋಸ್, ಶೃತಿ ಸುಬ್ರಮಣಿಯನ್ ಹಾಗೂ ತಪಸ್ವಿನಿ ಪರಾಳ್ಕರ್ ಮನಮೋಹಕ ನೃತ್ಯ ಪ್ರಸ್ತುತಿಯೊಂದಿಗೆ ನೆರೆದಿದ್ದವರ ಮನಸೂರೆಗೊಂಡರು.

ನಕ್ಕರೆ ಅದೇ ಸ್ವರ್ಗ

ಸಂತು : ಮಾಸ್ಕ್ ಹಾಕೊಂಡು ದೇವಸ್ಥಾನಕ್ಕೆ ಹೋಗಿ ಬಂದಾಗಿನಿಂದ ಒಂದೇ ಚಿಂತೆ
ಗುಂಡು: ಏನಂತ ಚಿಂತೆ?
ಸಂತು : ದೇವರಿಗೆ ನಾನು ಬಂದಿದ್ದೆ ಅಂತ ಗೊತ್ತಾಯಿತೋ ಇಲ್ವೋ?

ಮೈಸೂರು ಮಿತ್ರ

ಸೋಮವಾರ, 8 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

"ಗೆಲ್ಲುವವರೆಗೂ ಸೋಲುಗಳನ್ನೇ ಸಾಧನೆ ಎಂದು ತಿಳಿದು ಮುನ್ನಡೆಯಿರಿ!"

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { "ಕೊಚ್ಚೆ ಮೇಲೆ ಕಲ್ಲು ಹಾಕಿದ ಹಾಗೆ"

ನಿಮ್ಮ ಪತ್ರಗಳು

ವಿವಿಧ ರೂಪಗಳಲ್ಲಿ ಪದೇ ಪದೆ ಕಾಣಿಸಿಕೊಳ್ಳುತ್ತಿರುವ ಕೋವಿಡ್–19

ಮಾನ್ಯರೇ,

ಆಹಾರ ಮಾಲಿನ್ಯ, ಯುವಿ ಕಿರಣ, ವಿಕಿರಣಕ್ಕೆ ಒಡ್ಡಿಕೊಳ್ಳುವಿಕೆ, ಇತ್ಯಾದಿ ಮತ್ತು ಔಷಧಿಗಳ ಪರಿಣಾಮವಾಗಿ ಭಿನ್ನ ಕೋವಿಡ್–19 ವೈರಸ್ ತಳಿಗಳು ಹೊರಹೊಮ್ಮುವಿಕೆ ಕುರಿತಾಗಿ ಕೆಲವು ಲೇಖನಗಳನ್ನು ಬರೆದಿದ್ದೇವೆ. ಇದು ಕತ್ತಲೆಯಲ್ಲಿ ತತ್ತರಿಸುತ್ತಿರುವ ಭಾವವನ್ನು ಮುಂದಿಡುತ್ತದೆ. ವೈರಾಲಜಿಯಲ್ಲಿ ಪರಿಣತಿ ಹೊಂದಿರುವ ವೈದ್ಯರು ಕೋವಿಡ್–19 ವೈರಸ್ ರೂಪಾಂತರಗಳಿಗೆ ನಿಖರ ಕಾರಣಗಳು ಮತ್ತು ಗುಣಲಕ್ಷಣ ಗಳನ್ನು ಕಂಡು ಹಿಡಿಯಲು ಸರ್ಕಾರಿ ಅನುದಾನಿತ ಸಂಶೋಧನೆಯಲ್ಲಿ ಸಕ್ರಿಯ ರಾಗಿರಬೇಕು. ಕೋವಿಡ್–19 ನಿರಂತರ ಬೆದರಿಕೆಯನ್ನು ಒಡ್ಡುತ್ತಿದೆ.

ಕೋವಿಡ್–19 ವೈರಾಣು ಅಪಾಯಕಾರಿ. ಆದುದರಿಂದ ಅದರೊಡನೆ ವ್ಯವಹರಿಸುವಾಗ ರಿಮೋಟ್ ಕಾರ್ಯವಿಧಾನಗಳನ್ನು ಬಳಸುವುದು ಸೂಕ್ತ. ಕೋವಿಡ್–19 ವೈರಸ್ ಸ್ವಾಭಾವಿಕವಲ್ಲ ಎಂದು ತೋರುತ್ತಿರುವುದರಿಂದ, ದೀರ್ಘ ಕಾಲದ ಪ್ರತಿಜೀವಕ ಚಿಕಿತ್ಸೆಯು ಕೊರೊನಾವನ್ನು ವೈರಾಣು ಉಂಟು ಮಾಡಿರಬಹುದು. ಮುಂಬೈನಲ್ಲಿರುವ ಭಾಭಾ ಪರಮಾಣು ಸಂಶೋಧನಾ ಕೇಂದ್ರದ ರೇಡಿಯೊ ಕೆಮಿಕಲ್ ಪ್ರಯೋಗಾಲಯಗಳಲ್ಲಿ ವಿದಳನ ಉತ್ಪನ್ನಗಳಿಂದ ಐಸೊಟೋಪ್‌ಗಳನ್ನು ಬೇರ್ಪಡಿಸಲು ರಿಮೋಟ್ ಹ್ಯಾಂಡ್ಲಿಂಗ್ ತಂತ್ರಗಳನ್ನು ಬಳಸುವ ತಂತ್ರಜ್ಞಾನವನ್ನು ಕೋವಿಡ್ ಸಂಶೋಧನೆಯಲ್ಲಿ ಅನ್ವಯಿಸಬಹುದು.

ವಿವಿಧ ಪರಿಸರಗಳಲ್ಲಿ ಕೋವಿಡ್ ಹೇಗೆ ವರ್ತಿಸುತ್ತದೆ ಮತ್ತು ವಿವಿಧ ಔಷಧಿಗಳು ಮತ್ತು ಆಹಾರಗಳೊಂದಿಗೆ ರೋಗಿಗಳಿಗೆ ಹೇಗೆ ಚಿಕಿತ್ಸೆ ನೀಡಬೇಕು ಎಂಬುದರ ಕುರಿತು ವೈದ್ಯರಿಗೆ ಸಂಪೂರ್ಣ ಮಾಹಿತಿಯ ಅಗತ್ಯವಿದೆ. ಸಂಪೂರ್ಣ ನಿರ್ಮೂಲನೆಗಾಗಿ, ರೂಪಾಂತರಿತ ವೈರಸ್ ಸೃಷ್ಟಿಗೆ ಕಾರಣವಾಗುವ ಸರಣಿ ಕ್ರಿಯೆಯನ್ನು ಮುರಿಯಬೇಕು. ವಿವಿಧ ಪ್ರಕಾರಗಳಿಗೆ ಕಾರಣವಾಗುವ ರೂಪಾಂತರಗಳನ್ನು ತಡೆಯಲು ಲಸಿಕೆಗಳಿಗೆ ಸಾಧ್ಯವಾಗುತ್ತಿಲ್ಲ.

ಪ್ರಸ್ತುತ ಕೋವಿಡ್ ರೂಪಾಂತರವು ಗಂಭೀರ ಆರೋಗ್ಯ ಸಮಸ್ಯೆಯನ್ನುಂಟು ಮಾಡುವುದಿಲ್ಲ ಎಂದು ಭಾವಿಸಲಾಗಿದ್ದರೂ, ಅದರ ಸಂಭಾವ್ಯ ಅಪಾಯವು ನಿಖರವಾಗಿ ತಿಳಿದಿಲ್ಲ. ಉದಾಹರಣೆಗೆ, ಕೋವಿಡ್–19 ಸೋಂಕಿಗೆ ಒಳಗಾದ ಜನರು ಹೃದಯಾಘಾತಕ್ಕೀಡಾಗುವ ಸಂಭವನೀಯತೆ ಹೆಚ್ಚು ಎಂದು ಸಮೀಕ್ಷೆಯೊಂದು ತಿಳಿಸಿದೆ. ರಾಸಾಯನಿಕ ಔಷಧಿಗಳ ಬಳಕೆಯಿಲ್ಲದೆ ಮಾನವ ದೇಹವು ಹೊಂದಿಕೊಳ್ಳುವ ಮತ್ತು ಸಹಿಸಿಕೊಳ್ಳಬಲ್ಲ ಸಾಮಾನ್ಯ ನೈಸರ್ಗಿಕ ವೈರಸ್ ಆಗಿ ಕೋವಿಡ್–19 ವೈರಸ್ ಅನ್ನು ಹೇಗೆ ಪರಿವರ್ತಿಸಬಹುದು ಎಂಬುದನ್ನು ನಿರ್ಧರಿಸಲು ಹೆಚ್ಚಿನ ಸಂಶೋಧನೆಯನ್ನು ನಡೆಸುವುದು ಅಗತ್ಯವಾಗಬಹುದು.

– ಡಾ. ಎಂ.ಸಿ. ಸುಬ್ಬರಾಮು, ವಿಶ್ರಾಂತ ಪರಿಸರ ವಿಜ್ಞಾನಿ, ಬಿಎಆರ್‌ಸಿ, ಮುಂಬೈ
subbaramu chowdeshwariah@gmail.com
– ಡಾ. ಸಿ. ನಿಂಗಪ್ಪ
ಸಂಶೋಧನಾ ವಿಜ್ಞಾನಿ, ವಿದ್ಯಾ ವಿಕಾಸ್, ಮೈಸೂರು–570 028
Email: ningappacvviet@gmail.com

ಮೈಸೂರು–ಚಾಮರಾಜನಗರ ರೈಲುಗಳಲ್ಲಿ ಮಹಿಳೆಯರಿಗೆ ಸೂಕ್ತ ಭದ್ರತೆ ಕಲ್ಪಿಸಿ

ಮಾನ್ಯರೆ,

ರಾಜ್ಯದ ಮೈಸೂರು–ಚಾಮರಾಜನಗರ ಜಿಲ್ಲೆಯ ಜನತೆಗೆ ಸಾರಿಗೆ ಕ್ಷೇತ್ರಗಳಲ್ಲಿ ಒಂದಾಗಿರುವ ಭಾರತೀಯ ರೈಲ್ವೆ ಸಹ ಒಂದಾಗಿದ್ದು, ಈ ಮಾರ್ಗದಲ್ಲಿ ಪ್ರತಿನಿತ್ಯ ಓಡಾಡುವ ಕೂಲಿ ಕಾರ್ಮಿಕರು, ಮಕ್ಕಳು, ವಿದ್ಯಾರ್ಥಿಗಳು, ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು, ನೌಕರರು, ವೈದ್ಯಕೀಯ ಅಧಿಕಾರಿಗಳು, ಇನ್ನಿತರ ಸಾರ್ವಜನಿಕರಿಗೆ ಅನುಕೂಲವಾಗುತ್ತಿದೆ. ಮುಂಜಾನೆಯ ಸಮಯ ಮತ್ತು ಮಧ್ಯಾಹ್ನ ಮೈಸೂರು–ಚಾಮರಾಜನಗರ ಮಾರ್ಗವಾಗಿ ಚಲಿಸುವ ರೈಲಿನಲ್ಲಿ ಮಹಿಳಾ ಪ್ರಯಾಣಿಕರಿಗೆ ರೈಲ್ವೆ ನಿಲ್ದಾಣದಿಂದ, ಕವಲಂದೆ ಮತ್ತು ಬದನಗುಪ್ಪೆ ರೈಲ್ವೆ ನಿಲ್ದಾಣದವರೆಗೂ ಪ್ರಯಾಣ ಮಾಡುವುದು ಕಷ್ಟಕರವಾಗಿದೆ. ಕೆಲವು ಪುಂಡರು ವಿವಿಧ ರೈಲ್ವೆ ಬೋಗಿಗೆ ಹತ್ತಿ ಏಕಾಂಗಿಯಾಗಿ ಕುಳಿತ ಪ್ರಯಾಣ ಮಾಡುವ ಮಹಿಳೆಯರ, ಹುಡುಗಿಯರ, ಮೈ–ಕೈ ಮುಟ್ಟಿ ಪರಾರಿಯಾಗುತ್ತಿದ್ದಾರೆ. ಇದರಿಂದ ಬೇಸತ್ತು, ಮಹಿಳಾ ಪ್ರಯಾಣಿಕರಿಗೆ ಭಯಭೀತಿ ಸೃಷ್ಟಿಯಾಗಿ ಈ ಮಾರ್ಗದಲ್ಲಿ ಪ್ರಯಾಣ ಮಾಡುವುದಕ್ಕೆ ಹಿಂಜರಿಯುತ್ತಿದ್ದಾರೆ. ಕೂಡಲೇ ಈ ವಿಷಯವನ್ನು ಈ ರೈಲು ಮಾರ್ಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೈರುತ್ಯ ರೈಲ್ವೆ ವಲಯದ ಅಧಿಕಾರಿಗಳು ಮತ್ತು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು, ರೈಲ್ವೆ ಪೊಲೀಸರು, ರಾಜ್ಯ ಪೊಲೀಸರು ಸೂಕ್ಷ್ಮವಾಗಿ ಪರಿಗಣಿಸಿ, ಈ ಮಾರ್ಗವಾಗಿ ಸಂಚರಿಸುವ ರೈಲು ಮಾರ್ಗದಲ್ಲಿ ಮಹಿಳಾ ಪ್ರಯಾಣಿಕರಿಗೂ ಸೇರಿ, ಪ್ರಯಾಣ ಮಾಡುವ ಎಲ್ಲರಿಗೂ ಸೂಕ್ತ ಭದ್ರತೆ ಒದಗಿಸಲು ಮುಂದಾಗಬೇಕು.

– ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಕೇಂದ್ರ ಆರೋಗ್ಯ ಸಚಿವಾಲಯದ ಮಾರ್ಗಸೂಚಿ ಸ್ವಾಗತಾರ್ಹ

ಮಾನ್ಯರೆ,

ಕೇಂದ್ರ ಆರೋಗ್ಯ ಸಚಿವಾಲಯ ಇತ್ತೀಚೆಗೆ ಬಿಡುಗಡೆ ಮಾಡಿರುವ ಮಾರ್ಗ ಸೂಚಿಯಂತೆ, ಯಾವುದೇ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳು, ಸಣ್ಣಪುಟ್ಟ ಚಿಕಿತ್ಸೆಗಳಿಗೆಲ್ಲಾ ರೋಗಿಯನ್ನು ಬಲವಂತವಾಗಿ ತುರ್ತು ಚಿಕಿತ್ಸಾ ಘಟಕಕ್ಕೆ (ಐಸಿಯು) ದಾಖಲು ಮಾಡುವಂತಿಲ್ಲ ಎಂದು ಈ ಹೊಸ ನಿಯಮ ಜಾರಿಗೆ ತಂದಿರುವುದು ಸ್ವಾಗತಾರ್ಹ ವಿಷಯ.

ಕೆಲವು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳು ತುರ್ತು ಚಿಕಿತ್ಸಾ ಘಟಕಗಳನ್ನು (ಐಸಿಯು) ತೆರೆದು ದುಡ್ಡು ಮಾಡುವ ಕೇಂದ್ರಗಳನ್ನಾಗಿಸಿಕೊಂಡಿವೆ. ರೋಗಿಯ ಚಿಕಿತ್ಸೆಗೆ ಐಸಿಯುನ ಅವಶ್ಯಕತೆ ಇರಲಿ, ಬಿಡಲಿ, ರೋಗಿಯನ್ನು ಐಸಿಯುಗೆ ಸೇರುವಂತೆ ಮಾಡಿ, ಸಾಮಾನ್ಯ ವಾರ್ಡ್‌ಗಿಂತ ನಾಲ್ಕರಿಂದ ಐದು ಪಟ್ಟು ಹೆಚ್ಚು ಹಣ ಕೀಳುವ ಹಗಲು ದರೋಡೆ ಕೇಂದ್ರಗಳಾಗಿವೆ.

ಇನ್ನು, ರೋಗಿಯ ಹೆಸರಿನಲ್ಲಿ ಯಾವುದಾದರೂ ಕಂಪನಿಯ ಮೆಡಿಕಲ್ ಇನ್ಸೂರೆನ್ಸ್ ಇದ್ದರಂತು, ಗರಿಷ್ಠ ಎಷ್ಟು ಹಣ ವಸೂಲಿ ಮಾಡಬಹುದೋ? ಅಷ್ಟನ್ನೂ ವಸೂಲಿ ಮಾಡಲೂ ರೋಗಿ ಆರೋಗ್ಯವಾಗಿದ್ದರೂ, ಇನ್ನೊಂದೆರಡು ದಿನಗಳ ಕಾಲ ಐಸಿಯುನಲ್ಲಿರುವಂತೆ ಮಾಡಿ, ಹಣ ಮಾಡುವ ಉದ್ದೇಶವೂ ಇದೆ. ಈಗ ಕೇಂದ್ರ ಆರೋಗ್ಯ ಸಚಿವಾಲಯದ ಹೊಸ ನಿಯಮ ಮತ್ತು ಮಾರ್ಗಸೂಚಿಗಳು ಸಾರ್ವಜನಿಕರಿಗೆ ಸ್ವಲ್ಪ ಮಟ್ಟಿಗಾದರೂ ಅನುಕೂಲವಾಗಬಹುದು.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಈ ನಮ್ಮವರು ಎಂದರೆ ಯಾರು?



"ನಮ್ಮವರು ಎಂದರೆ ನಮ್ಮ ಏಳಿಗೆ ಬಯಸುವವರು, ನಮ್ಮ ಸೋಲಿಗೆ, ನೋವಿಗೆ ಸಾಂತ್ವನ ಹೇಳುವವರು, ನಮ್ಮ ಗೆಲುವನ್ನು ಸಂಭ್ರಮಿಸುವವರು, ಕಷ್ಟಕ್ಕೆ ನೆರವಾಗುವವರು ಅಲ್ಲವೇ? ಆದರೆ ನಮ್ಮವರು ಎನಿಸಿಕೊಂಡ ರಕ್ತ ಸಂಬಂಧಿಗಳಲ್ಲಿಯೇ ಅನೇಕರು 'ಉಪ್ಪು ತಿಂದ ಮನೆಗೆ ಎರಡು ಬಗೆದರು' ಹಾಗೂ 'ಉಂಡ ಮನೆಯ ಜಂತಿ ಎಣಿಸುವವರು' ಎಂಬ ಗಾದೆ ಮಾತಿನಂತೆ ನಮ್ಮಿಂದ ನೆರವು ಪಡೆದಿದ್ದರೂ ಸಹ ನಮ್ಮ ಏಳಿಗೆ ಬದಲು ಅವನತಿಯನ್ನು ಬಯಸುತ್ತಾರೆ, ನಮ್ಮ ಸೋಲು ಹಾಗೂ ನೋವನ್ನು ಸಂಭ್ರಮಿಸುತ್ತಾರೆ, ನಮ್ಮ ಗೆಲುವಿಗೆ ಈರ್ಷೆ ಪಡುತ್ತಾರೆ, ಕಷ್ಟ ಬಂದಾಗ ದೂರ ನಿಂತು ಹೇಗೆ ನಿಭಾಯಿಸಿಯಾರು? ಎಂದು ನೋಡುತ್ತಿರುತ್ತಾರೆ. ಒಬ್ಬರ ಕಷ್ಟದ ಬದುಕನ್ನು ಅವರು ದೊಂಬರಾಟ ನೋಡುವ ಮಾದರಿಯಲ್ಲಿ ನೋಡುತ್ತಿರುತ್ತಾರೆ. ಸಹಾಯಹಸ್ತ ಚಾಚುವುದಿರಲಿ, ಬಂಧುಬಳಗಗಳ ಗುಂಪಿನಲ್ಲಿ ಒಬ್ಬರ ಕಷ್ಟದ ವಿಚಾರವನ್ನು ಚರ್ಚೆಯ ವಿಚಾರ ಮಾಡಿಕೊಂಡು ಅವರ ಕುಟುಂಬಕ್ಕೆ ಮಸಿ ಬಳಿಯುವ ಕೆಲಸ ಮಾಡಿಬಿಡುತ್ತಾರೆ.

ನಮ್ಮವರು ಅಂದರೆ.....? ಈ ಪ್ರಶ್ನೆ ವಿಚಿತ್ರ ಎನಿಸಿದರೂ ನಿತ್ಯದ ಬದುಕಿನಲ್ಲಿ ಅನೇಕ ಬಾರಿ ಅನೇಕರಿಗೆ ಎದುರಾಗುತ್ತಲೇ ಇರುವ ಪ್ರಶ್ನೆ ಇದು. ವಿದೇಶದಲ್ಲಿ ಇದ್ದರೆ ನಮ್ಮ ದೇಶದವರು ನಮ್ಮವರಾಗುತ್ತಾರೆ, ಬೇರೆ ರಾಜ್ಯದಲ್ಲಿ ಇದ್ದರೆ ನಮ್ಮ ರಾಜ್ಯದವರು ನಮ್ಮವರೆನಿಸುತ್ತಾರೆ, ಬೇರೆ ಜಿಲ್ಲೆಯಲ್ಲಿದ್ದರೆ ನಮ್ಮ ಜಿಲ್ಲೆಯವರು ನಮ್ಮವರಾಗಿ ಕಾಣುತ್ತಾರೆ, ಬೇರೆ ತಾಲೂಕಿನಲ್ಲಿ ನಮ್ಮವರು ಸಿಕ್ಕರೆ ಅವರು ನಮ್ಮವರು, ಬೇರೆ ಊರಿನಲ್ಲಿ ನಮ್ಮವರು ಸಿಕ್ಕರೆ ನಮ್ಮವರೆನಿಸುತ್ತಾರೆ, ನಮ್ಮ ಊರಿನಲ್ಲಿ ನಮ್ಮ ಮನೆಯವರು ನಮ್ಮವರಾಗಿರುತ್ತಾರೆ. ಇಲ್ಲಿ ನಮ್ಮವರು ಎನಿಸಿಕೊಳ್ಳಲು ರಕ್ತ ಸಂಬಂಧಿಗಳೇ ಆಗಬೇಕಿಲ್ಲ ನಮ್ಮ ಹಿತಬಯಸುವವರು, ಕಷ್ಟಕ್ಕೆ ಹೆಗಲು ನೀಡುವವರು, ಸಂತೋಷವನ್ನು ಹಂಚಿ ಸಂಭ್ರಮಿಸುವವರು ನಮ್ಮವರಾಗುತ್ತಾರೆ. ಆದರೆ ಇಂಗ್ಲಿಷ್‌ನಲ್ಲಿ ಒಂದು ಮಾತಿದೆ 'Blood is thicker than Water' ಎಂದು, ಅಂದರೆ ರಕ್ತವು ನೀರಿಗಿಂತ ಗಟ್ಟಿಯಾಗಿರುತ್ತದೆ ಎಂದರ್ಥ. ಏನೇ ಆದರೂ ರಕ್ತ ಸಂಬಂಧವೇ ನಿಜವಾದ ಸಂಬಂಧ, ಬೇರೆಲ್ಲವೂ ಆ ಕ್ಷಣಕ್ಕೆ ಮಾನ್ಯತೆ ಗಳಿಸುವಂತವುಗಳು ಎಂಬುದು ಹಲವರ ಅಂಬೋಣ.

ನಮ್ಮವರು ಎಂದರೆ ನಮ್ಮ ಏಳಿಗೆ ಬಯಸುವವರು, ನಮ್ಮ ಸೋಲಿಗೆ, ನೋವಿಗೆ ಸಾಂತ್ವನ ಹೇಳುವವರು, ನಮ್ಮ ಗೆಲುವನ್ನು ಸಂಭ್ರಮಿಸುವವರು, ಕಷ್ಟಕ್ಕೆ ನೆರವಾಗುವವರು. ಆದರೆ ನಮ್ಮವರು ಎನಿಸಿಕೊಂಡ ರಕ್ತ ಸಂಬಂಧಿಗಳಲ್ಲಿಯೇ ಅನೇಕರು 'ಉಪ್ಪು ತಿಂದ ಮನೆಗೆ ಎರಡು ಬಗೆದರು' ಹಾಗೂ 'ಉಂಡ ಮನೆಯ ಜಂತಿ ಎಣಿಸುವವರು' ಎಂಬ ಗಾದೆ ಮಾತಿನಂತೆ ನಮ್ಮಿಂದ ನೆರವು ಪಡೆದಿದ್ದರೂ ಸಹ ನಮ್ಮ ಏಳಿಗೆ ಬದಲು ಅವನತಿಯನ್ನು ಬಯಸುತ್ತಾರೆ, ನಮ್ಮ ಸೋಲು ಹಾಗೂ ನೋವನ್ನು ಸಂಭ್ರಮಿಸುತ್ತಾರೆ, ನಮ್ಮ ಗೆಲುವಿಗೆ ಈರ್ಷೆ ಪಡುತ್ತಾರೆ, ಕಷ್ಟ ಬಂದಾಗ ದೂರ ನಿಂತು ಹೇಗೆ ನಿಭಾಯಿಸಿಯಾನು? ಎಂದು ನೋಡುತ್ತಿರುತ್ತಾರೆ. ಒಬ್ಬರ ಕಷ್ಟದ ಬದುಕನ್ನು ಅವರು ದೊಂಬರಾಟ ನೋಡುವ ಮಾದರಿಯಲ್ಲಿ ನೋಡುತ್ತಿರುತ್ತಾರೆ. ಸಹಾಯಹಸ್ತ ಚಾಚುವುದಿರಲಿ, ಬಂಧುಬಳಗಗಳ ಗುಂಪಿನಲ್ಲಿ ಒಬ್ಬರ ಕಷ್ಟದ ವಿಚಾರವನ್ನು ಚರ್ಚೆಯ ವಿಚಾರ ಮಾಡಿಕೊಂಡು ಅವರ ಕುಟುಂಬಕ್ಕೆ ಮಸಿ ಬಳಿಯುವ ಕೆಲಸ ಮಾಡಿಬಿಡುತ್ತಾರೆ. ಎಷ್ಟೋ ಬಾರಿ ನಮ್ಮ ಸಂಬಂಧಿಗಳೇ ಅಲ್ಲದವರು ಕಷ್ಟಕ್ಕೆ ನೆರವಾಗುತ್ತಾರೆ. ಅದಕ್ಕೆ ಪ್ರತಿಯಾಗಿ ಏನನ್ನೂ ನಿರೀಕ್ಷಿಸುವುದಿಲ್ಲ. ಅನೇಕ ಸ್ನೇಹಿತರು ಆಪತ್ಬಾಂಧವರಾಗಿ ಬಂದಿರುತ್ತಾರೆ. ನೋವು ನಲಿವುಗಳನ್ನು ಹಂಚಿಕೊಂಡಿರುತ್ತಾರೆ. ಅವರನ್ನೇ ನಾವು ನಮ್ಮವರು ಅಂದುಕೊಳ್ಳಬೇಕಷ್ಟೆ. ನೆರೆಹೊರೆಯವರು ನಮಗೆ ಹೊರೆಯಾಗದೆ ನಮ್ಮ ಹೊರೆ ಇಳಿಸುವ ಕೆಲಸ ಮಾಡಿರುತ್ತಾರೆ. ಅವರು ನಮ್ಮವರೇ ಅಲ್ಲವೇ?

ಇಂದಿನ ಪ್ರಪಂಚ ವ್ಯವಹಾರಿಕ ಪ್ರಪಂಚ. ಸಂಬಂಧಗಳನ್ನು ಸಹ ಲಾಭನಷ್ಟಗಳ ದೃಷ್ಟಿಕೋನದಲ್ಲಿ ನೋಡುವ ಮನೋಭಾವ ಹೆಚ್ಚಾಗಿರುವುದು ದುರದೃಷ್ಟಕರ. ಲಾಭದ ದೃಷ್ಟಿಯಲ್ಲಿ ಏರ್ಪಟ್ಟ ಸಂಬಂಧಗಳಿಗೆ ಆಯುಷ್ಯ ಕಡಿಮೆ ಇರುತ್ತದೆ. ಗುಣ, ಹೃದಯವಂತಿಕೆ, ನೈತಿಕತೆ, ಜ್ಞಾನ.... ಇತ್ಯಾದಿಗಳು ಸಂಬಂಧಗಳು ಗಟ್ಟಿಯಾಗ ಬೇಕಾಗಿರುವ ಸಂಗತಿಗಳಾಗುವ ಬದಲು ಹಣ, ಕೀರ್ತಿ, ಸಂಪತ್ತು... ಇವುಗಳು ಸಂಬಂಧಗಳನ್ನು ಬೆಸೆಯುವ ಅಂಶಗಳಾಗುತ್ತಿರುವುದು ವಿಪರ್ಯಾಸ. ಮದುವೆಯಂತಹ ಕಾರ್ಯಗಳು ಇಂದು ಬಹು ಸಂಕೀರ್ಣವಾಗಿದೆ. ಹಿಂದೆ ಮದುವೆಯಾಗುವುದು ಸುಲಭವಾಗಿತ್ತು, ವಿಚ್ಛೇದನ ಪಡೆಯುವುದು ಕಷ್ಟವಾಗಿತ್ತು. ಇಂದು ಮದುವೆಯಾಗುವುದು ಅಷ್ಟು ಸುಲಭದ ಮಾತಲ್ಲ, ಆದರೆ ವಿಚ್ಛೇದನ ಪಡೆಯುವುದು ಬಲು ಸುಲಭದ ಸಂಗತಿಯಾಗಿದೆ. ಇಲ್ಲಿ ನಮ್ಮವರು, ಅವರನ್ನು ಸಹಿಸಿಕೊಳ್ಳಬೇಕು, ಸಹಕಾರ ಮನೋಭಾವದಿಂದ ಇರಬೇಕು ಎಂಬ ಮಾತೇ ಇಲ್ಲ. ಹೊಂದಾಣಿಕೆ ಎಂಬುದೇ ದೊಡ್ಡ ಸಮಸ್ಯೆಯಾಗಿದೆ. ಅನ್ಯರ ಜೊತೆ ಇರಲಿ ನಮ್ಮವರ ಜೊತೆ ಇಂದು ಹೊಂದಾಣಿಕೆ ಏರ್ಪಡುವುದು ಕಷ್ಟವಾಗಿದೆ. ಕ್ಷುಲ್ಲಕ ಕಾರಣಗಳಿಗೆ ಇಂದು ವಿಚ್ಛೇದನಗಳು ಆಗುತ್ತಿವೆ. ನಮ್ಮವರು ಎನಿಸಿಕೊಂಡವರೇ ಬದ್ಧ ವೈರಿಗಳಂತೆ ಬಡಿದಾಡಿಕೊಳ್ಳುತ್ತಿರುವುದನ್ನು ಕಾಣಬಹುದು.

ಇಂದು ಪತಿಪತ್ನಿ ನಡುವೆ ವಿಚ್ಛೇದನ ಪಡೆಯಲು ಕಾನೂನಿನಲ್ಲಿ ಅವಕಾಶವಿದೆ. ಹೆತ್ತವರಿಂದ ವಿಚ್ಛೇದನ ಪಡೆಯಲು ಕಾನೂನಿನಲ್ಲಿ ಅವಕಾಶವಿದ್ದರೆ ಇಂದು ನ್ಯಾಯಾಲಯದಲ್ಲಿ ಅಸಂಖ್ಯಾತ ಅರ್ಜಿಗಳನ್ನು ಸಲ್ಲಿಕೆಯಾಗುತ್ತಿತ್ತೋ ಏನೋ?. ನಮ್ಮವರ ನಡೆನುಡಿ ಸಹಿಸಿಕೊಳ್ಳುವಷ್ಟು ಸಹಿಷ್ಣುತೆ ಇಲ್ಲದಾಗಿರುವುದು ಅಚ್ಚರಿಯ ಸಂಗತಿ. 'ಹುಟ್ಟುತ್ತಾ ಅಣ್ಣತಮ್ಮ, ಬೆಳೆಯುತ್ತಾ ದಾಯಾದಿ' ಎಂಬ ಗಾದೆ ಮಾತಿನಂತೆ ಸಣ್ಣ ಸಣ್ಣ ವಿಚಾರಗಳಿಗೆ ರಕ್ತ ಹಂಚಿಕೊಂಡು ಹುಟ್ಟಿದವರು ರಕ್ತ ಕಾರುವಂತೆ ಜಗಳವಾಡಿಕೊಂಡಿರುವುದನ್ನು ಕಂಡಿದ್ದೇವೆ. ನಮ್ಮವರೇ ನಮಗೆ ಶತ್ರುಗಳಾಗುವುದಕ್ಕಿಂತ ದೊಡ್ಡ ಶಿಕ್ಷೆ ಮತ್ತೊಂದಿಲ್ಲ. ಶತ್ರುಗಳ ಜೊತೆ ಹೊಡೆದಾಡಿ ಗೆಲ್ಲಬಹುದೇನೋ? ಆದರೆ ನಮ್ಮೊಟ್ಟಿಗೆ ಇದ್ದು ನಮ್ಮವರು ಎಂದು ಕರೆಯಿಸಿಕೊಂಡು ಕತ್ತಿ ಮಸೆಯುವ ಹಿತಶತ್ರುಗಳ ಜೊತೆ ಹೊಡೆದಾಡುವುದು ಕಷ್ಟದ ಸಂಗತಿಯೇ ಸರಿ.

ಅನೇಕ ರಕ್ತ ಸಂಬಂಧಗಳು ಎಷ್ಟೋ ಬಾರಿ ಖುಷಿ ಕೊಡುವುದಕ್ಕಿಂತ ದುಃಖ ಕೊಡುವುದೇ ಹೆಚ್ಚಾಗಿರುತ್ತದೆ. ಸುಖಕ್ಕೆ ಬಂದವರು ಕಷ್ಟಕ್ಕೆ ಮುಂದೆ ಬರುವುದಿಲ್ಲ ಎಂಬ ದೂರಿದೆ. ಅವರು ಸಂತೋಷ ನೀಡಿ ಆನಂದಭಾಷ್ಪ ತರುವ ಬದಲು ನೋವು ನೀಡಿ ಕಣ್ಣೀರು ತರಿಸುತ್ತಾರೆ ಎನ್ನುತ್ತಾರೆ. ಆದರೂ ರಕ್ತ ಸಂಬಂಧ ಅಷ್ಟು ಸುಲಭವಾಗಿ ಕಡಿದುಕೊಳ್ಳಲು ಸಾಧ್ಯವಿಲ್ಲ ಎನ್ನುತ್ತಾರೆ. ಅಡುಗೆಗೆ ಬಳಸುವ ಈರುಳ್ಳಿಯು ಪ್ರತಿಬಾರಿ ಕತ್ತರಿಸುವಾಗಲೂ ಕಣ್ಣೀರು ತರಿಸುತ್ತಲೇ ಇರುತ್ತದೆ, ಅಂದ ಮಾತ್ರಕ್ಕೆ ನಾವು ಈರುಳ್ಳಿ ತರುವುದನ್ನು ಬಿಡುವುದಿಲ್ಲ, ಅದನ್ನು ಕತ್ತರಿಸುವುದನ್ನು ಬಿಡುವುದಿಲ್ಲ, ಅದನ್ನು ತಿನ್ನುವುದನ್ನು ಬಿಡುವುದಿಲ್ಲ. ಹಾಗೆಯೇ ರಕ್ತ ಸಂಬಂಧಗಳು ಅಷ್ಟೇ. ಅವರು ಎಷ್ಟೇ ಕಣ್ಣೀರು ತರಿಸಿದರೂ ಅವರನ್ನು ದೂರ ಮಾಡುವ ಮಾತೇ ಇಲ್ಲ. ಅವರಿಗೆ ನಾವು ಅಗತ್ಯವಿಲ್ಲದಿದ್ದರೂ, ಅವರು ನಮಗೆ ಯಾವುದೋ ಕಾರಣಕ್ಕೆ ಅಗತ್ಯವಾಗಿಬಿಡುತ್ತಾರೆ.

ಉದಾಹರಣೆಗೆ ಮನೆಯಲ್ಲಿ ತಂದೆಯು ಯಜಮಾನ ಎನಿಸಿಕೊಳ್ಳುತ್ತಾನೆ. ಅವನು ಬೇಜವಾಬ್ದಾರಿ ಮನುಷ್ಯನಾಗಿದ್ದು, ದುಡಿದು ತರಲು ಆಗದೆ ಸೋಂಬೇರಿಯಾಗಿದ್ದು, ತಾಯಿಯ ಪರಿಶ್ರಮದಿಂದ ಮನೆಯ ಮಕ್ಕಳು ಕಷ್ಟಪಟ್ಟು ಓದಿ ಕೆಲಸ ಗಿಟ್ಟಿಸಿರುತ್ತಾರೆ. ತಂದೆಯಾದವನು ದಂಡಪಿಂಡ, ಕುಡುಕ, ಸಮಾಜದಲ್ಲಿ ಅವನಿಂದ ಕುಟುಂಬಕ್ಕೆ ಒಳ್ಳೆಯ ಹೆಸರಿಲ್ಲ ಹೀಗೆ ಅವನ ಬಗ್ಗೆ ದೂರುಗಳ ಸುರಿಮಳೆಯೇ ಇರುತ್ತದೆ. ಆದರೆ ಆ ಮನೆಯ ಹೆಣ್ಣುಮಗಳಿಗೆ ಮದುವೆ ಮಾಡಬೇಕಾದರೆ ಆ ದಂಡಪಿಂಡನ ಅಗತ್ಯ ಬಿದ್ದೇ ಬೀಳುತ್ತದೆ. ಅವನು ಸತ್ತು ಹೋಗಿದ್ದರೆ ಬೇರೆ ಮಾತು, ಬದುಕಿದ್ದರೆ ಮಾತ್ರ ಅವನು ಬಿಸಿತುಪ್ಪವಾಗಿ ಪರಿಣಮಿಸುತ್ತಾನೆ. ಅವನು ಅಯೋಗ್ಯನಾದರೂ ಅವನನ್ನು ಬಿಟ್ಟು ಯಾವ ಕಾರ್ಯವನ್ನು ಮಾಡಲು ಆಗುವುದಿಲ್ಲ, ಅಂತಹ ಪರಿಸ್ಥಿತಿ ನಿರ್ಮಾಣವಾಗಿಬಿಡುತ್ತದೆ. ರಕ್ತ ಸಂಬಂಧ ಎಂದರೆ ಅಷ್ಟು ಮಹತ್ವದ ಸಂಗತಿಯಾಗಿಬಿಡುವ ಸಾಧ್ಯತೆ ಇರುತ್ತದೆ.

'ಚಿನ್ನದ ಸೂಜಿ ಎಂದು ಕಣ್ಣಿಗೆ ಚುಚ್ಚಿಕೊಳ್ಳಲು ಆಗುತ್ತಾ ?' ಎಂಬ ಗಾದೆ ಮಾತು ಬಹಳ ಜನಪ್ರಿಯವಾಗಿದೆ. ಇದು ಬಹಳ ಅರ್ಥಗರ್ಭಿತವಾಗಿದ್ದರೂ ಅನೇಕರು ಕಣ್ಣಿಗೆ ಚುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತಲೇ ಇರುತ್ತಾರೆ. ನಮ್ಮವರು ಎನ್ನುವ ಕಾರಣಕ್ಕೆ ಹಲವರನ್ನು ಸಹಿಸಿಕೊಳ್ಳುವ ಸನ್ನಿವೇಶ ಉಂಟಾಗಬಹುದು. ನಮ್ಮವರು ಎನಿಸಿಕೊಂಡವರಿಗೂ ನೇರವಾಗಿ ನಮ್ಮ ಅಭಿಪ್ರಾಯವನ್ನು ಹೇಳಿಬಿಡಬೇಕು. ಅಯ್ಯೋ ಹೇಳಿದರೆ ಏನು ಅಂದುಕೊಂಡಾರು ಎಂದು ಭಾವಿಸಿ ಎಷ್ಟೋ ಸಂಬಂಧಗಳನ್ನು ಕಷ್ಟವಾದರೂ ಸಹಿಸಿಕೊಳ್ಳುವ ಅನಿವಾರ್ಯತೆ ಸೃಷ್ಟಿ ಮಾಡಿಕೊಳ್ಳಬಾರದು, ಅಲ್ಲವೇ?

'ಹತ್ತಿರ ಇರೋರೆಲ್ಲಾ ಹತ್ತಿರದವರಲ್ಲ, ದೂರ ಇರೋರೆಲ್ಲಾ ದೂರದವರಲ್ಲ' ಎಂಬ ಮಾತೊಂದಿದೆ. ಹತ್ತಿರ ಇದ್ದ ಮಾತ್ರಕ್ಕೆ ಅವರು ನಿಮ್ಮನ್ನು ಅರ್ಥಮಾಡಿಕೊಳ್ಳುತ್ತಾರೆ ಎಂಬುದು ತಪ್ಪು ಅಭಿಪ್ರಾಯ. 'ಹತ್ತಿರವಿದ್ದು ದೂರ ನಿಲ್ಲುವೆವು ನಮ್ಮ ಅಹಂಮ್ಮಿನ ಕೋಟೆಯಲಿ' ಎಂದು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು ಹೇಳುವಂತೆ ಹತ್ತಿರದಲ್ಲಿ ಇದ್ದರೂ ಕಣ್ಣಿಗೆ ಕಾಣದ ದೊಡ್ಡ ಗೋಡೆಗಳು ಅಥವಾ ದೊಡ್ಡ ಕಂದಕಗಳ ನಿರ್ಮಾಣವೇ ಆಗಿಹೋಗಿರುತ್ತದೆ. ನೋಡುವುದಕ್ಕೆ ಹತ್ತಿರದಲ್ಲಿ ಇದ್ದವರಂತೆ ಕಂಡವರು ಮಾನಸಿಕವಾಗಿ ಮತ್ತೆಲ್ಲಿಯೋ ಇರುತ್ತಾರೆ.

ಇಂದು ನಮ್ಮವರು ಎಂದರೆ ಅವರಿಂದ ಅನೇಕ ಸಂಗತಿಗಳನ್ನು ನಿರೀಕ್ಷಿಸುವ ಮನೋಭಾವ ಉಂಟಾಗಿದೆ. ಮೊದಲು ಅದನ್ನು ಬಿಡಬೇಕು. ನಿರೀಕ್ಷೆ ಇದ್ದ ಕಡೆ ನಿರಾಸೆಯೂ ಇದ್ದೇ ಇರುತ್ತದೆ. ಹಾಗೆಯೇ ಸ್ವಾರ್ಥ ಮನೋಭಾವವನ್ನು ಬಿಡಬೇಕು. ನಮ್ಮವರ ಸಂಬಂಧಗಳು ಗಟ್ಟಿಯಾಗಿ ಉಳಿಯಲು ಕೆಲವು ನಿಬಂಧನೆಗಳನ್ನು ನಾವೇ ವಿಧಿಸಿಕೊಳ್ಳಬೇಕು. ಅವರವರ ಬದುಕು ಅವರವರಿಗೆ ಇದ್ದೇ ಇರುತ್ತದೆ. ಅತಿಯಾದ ನೆರವಿನ ನಿರೀಕ್ಷೆ ಇಟ್ಟುಕೊಳ್ಳುವುದು ತಪ್ಪು. ತಿಳುವಳಿಕೆ ಇದ್ದವರು ಸಹಾಯಕ್ಕೆ ಬಂದೇ ಬರುತ್ತಾರೆ. ಬಲವಂತದ ಸಂಬಂಧಗಳಿಂದ ದೂರ ಉಳಿಯಬೇಕು. ನಮ್ಮವರು ಎನಿಸಿಕೊಳ್ಳುವ ಸಂಬಂಧಗಳಲ್ಲಿ ಬಡವ ಶ್ರೀಮಂತ ಎಂಬ ಭೇದ ಇರಬಾರದು. ಅದು ಅನೇಕ ಸಮಸ್ಯೆಗಳನ್ನು ತಂದೊಡ್ಡುತ್ತದೆ.

ಎಲ್ಲರಿಂದ ಎಲ್ಲವನ್ನೂ ಬಯಸುವುದು ತಪ್ಪು. ಎಲ್ಲರನ್ನೂ ನಮ್ಮವರು ಎಂದು ಭಾವಿಸಿಕೊಳ್ಳುವುದು ತಪ್ಪು. ರೈಲಿನ ಪಯಣದಲ್ಲಿ ಪ್ರತಿ ನಿಲ್ದಾಣದಲ್ಲೂ ಕೆಲವರು ಇಳಿಯುತ್ತಾರೆ, ಕೆಲವರು ಹತ್ತುತ್ತಾರೆ. ನಮ್ಮ ಬೋಗಿಯಲ್ಲಿ ನಮ್ಮ ಎದುರು, ಅಕ್ಕಪಕ್ಕ ಇರುವವರನ್ನು ನಾವು ಪ್ರಯಾಣ ಮಾಡುವ ತನಕ ನಮ್ಮವರು ಎಂಬ ಭಾವದಿಂದ ನೋಡುತ್ತೇವೆ. ಅದೇ ರೀತಿ ಬದುಕೆಂಬ ಪಯಣದಲ್ಲಿ ಅಲ್ಲಲ್ಲಿ ಕೆಲವರು ನಮ್ಮ ಬದುಕಿಗೆ ಬರುತ್ತಾರೆ, ಅಲ್ಲಲ್ಲಿ ಮತ್ತೆ ಕೆಲವರು ನಮ್ಮ ಬದುಕಿನಿಂದ ಹೊರನಡೆಯುತ್ತಾರೆ. ಯಾವುದಕ್ಕೂ ಅತಿಯಾಗಿ ಹಿಗ್ಗದೆ, ಕುಗ್ಗದೆ ಬದುಕು ಎಂದರೆ ಹೀಗೆ ಎಂದು ಭಾವಿಸಿಕೊಂಡು ನಡೆದುಬಿಟ್ಟರೆ ಬದುಕೊಂದು ಸುಂದರ ಪಯಣವಾಗಿ ಗೋಚರಿಸುತ್ತದೆ. ಇಲ್ಲಸಲ್ಲದ ಸಂಗತಿಗಳನ್ನು ಬಯಸುತ್ತಾ ಕುಳಿತರೆ ಇಡೀ ಬದುಕಿನ ಪಯಣ ಯಾತನಮಯವಾಗಿರುತ್ತದೆ. ಅಂದುಕೊಂಡರೆ ಎಲ್ಲರೂ ನಮ್ಮವರೆ, ಇಲ್ಲವಾದರೆ ನಮ್ಮವರೇ ಪರಕೀಯರಂತೆ ಕಾಣುತ್ತಾರೆ. ಏನಂತೀರಿ?

ಪದ ತಾಂಬೂಲ : ಹತ್ತಿರ ಇರುವವರೆಲ್ಲಾ ನಮ್ಮವರಲ್ಲ, ದೂರ ಇರುವವರೆಲ್ಲಾ ಅನ್ಯರಲ್ಲ.

ಮಹಾರಾಣಿ ವಾಣಿಜ್ಯ, ನಿರ್ವಹಣಾ ಕಾಲೇಜು ಆವರಣದಲ್ಲಿ ಸಾವಿರ ಗಿಡಗಳನ್ನು ನೆಡುವ ಕಾರ್ಯಕ್ಕೆ ಚಾಲನೆ

ಬೆಂಗಳೂರಿನ ಇಂಚರ ಚಾರಿಟಬಲ್ ಟ್ರಸ್ಟ್‌ನಿಂದ 'ನಮಗಾಗಿ ಪರಿಸರ' ಕಾರ್ಯಕ್ರಮ



ಮೈಸೂರು, ಜ.7– ನಗರದ ಪಡುವಾರಹಳ್ಳಿ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಆವರಣದಲ್ಲಿ ಒಂದು ಸಾವಿರ ಗಿಡಗಳನ್ನು ನೆಡುವ ಕಾರ್ಯಕ್ಕೆ ಚಾಲನೆ ದೊರೆಯಿತು.

ಬೆಂಗಳೂರಿನ ಇಂಚರ ಚಾರಿಟಬಲ್ ಟ್ರಸ್ಟ್ ನಮಗಾಗಿ ಪರಿಸರ– ಶೀರ್ಷಿಕೆಯಡಿ ಈ ಕಾಲೇಜು ಹಾಗೂ ಪಕ್ಕದ ವಿದ್ಯಾರ್ಥಿನಿಲಯದ ಆವರಣದಲ್ಲಿ ಒಂದು ಸಾವಿರ ಸಸಿಗಳನ್ನು ನೆಡಲಿದೆ.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಇಂಕ್ಚರ್ ಟೆಕ್ನಾಲಜೀಸ್ ಸಿಇಒ ಹಾಗೂ ಇಂಚರ ಚಾರಿಟಬಲ್ ಟ್ರಸ್ಟಿನ ಸಂಸ್ಥಾಪಕ ಸಚಿವನ್ ವರ್ಮ ಮಾತನಾಡಿ, ಪರಿಸರ ಕಾಪಾಡುವ ಉದ್ದೇಶದಿಂದ ಟ್ರಸ್ಟ್ ರಾಜ್ಯದ ವಿವಿಧೆಡೆ ಒಂದು ಲಕ್ಷ ಗಿಡಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಂಡಿದೆ. ಮೈಸೂರಿನ ಈ ಕಾಲೇಜಿನಲ್ಲೂ ಕೂಡ ಒಂದು ಸಾವಿರ ಗಿಡಗಳನ್ನು ನೆಡಲಾಗುವುದು ಎಂದರು.

ನಾಲ್ಕು ಸಾವಿರ ವಿದ್ಯಾರ್ಥಿನಿಯರಿರುವ ಈ ಕಾಲೇಜಿನಲ್ಲಿ ಪ್ರತಿ ನಾಲ್ವರು ಒಂದು ಗಿಡವನ್ನು ಪೋಷಿಸಿ, ಬೆಳೆಸಬೇಕು ಎಂದು ಅವರು ಮನವಿ ಮಾಡಿದರು.

ಮರಗಿಡಗಳಿಂದ ನಮಗೆ ಶುದ್ಧ ಗಾಳಿ, ಹಣ್ಣು, ಹೂವು ಜೊತೆಗೆ ಪೆಟ್ರೋಲ್, ಡೀಸೆಲ್ ಸೇರಿದಂತೆ ಹಲವಾರು ಉಪಯೋಗಗಳಿವೆ. ಆದ್ದರಿಂದ ಪ್ರತಿಯೊಬ್ಬರು ಕೂಡ ಪರಿಸರ ಉಳಿಸಿ, ಬೆಳೆಸಬೇಕು ಎಂದು ಅವರು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಪ್ರೊ.ಸೋಮಣ್ಣ ಮಾತನಾಡಿ, ಸಮುದಾಯ ಸಾಮಾಜಿಕ ಹೊಣೆಗಾರಿಕೆಯಡಿ ಈಗಾಗಲೇ ಹಲವು ಗಿಡಗಳನ್ನು ನೆಡಲಾಗಿದೆ. ಈಗ ಇಂಚರ ಟ್ರಸ್ಟ್ ನೆಡುತ್ತಿರುವ ಒಂದು ಸಾವಿರ ಗಿಡಗಳನ್ನು ಪೋಷಿಸಿ, ಉತ್ತಮ ಪರಿಸರ ನಿರ್ಮಿಸಲು ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು.

ವಿಶೇಷ ಆಹ್ವಾನಿತರಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸಾಲುಮರದ ತಿಮ್ಮಕ್ಕ, ಸುಕ್ರಿಬೊಮ್ಮನಗೌಡ ಅವರಂತೆ ಎಲ್ಲರೂ ಮರಗಿಡಗಳನ್ನು ನೆಟ್ಟು, ಪೋಷಿಸಬೇಕು. ಇದಲ್ಲದೇ ಮೈಸೂರಿನ ಕೆ. ಆರ್. ಗುರುಕಾರ್, ಕರಿಘಟ್ಟದ ರಮೇಶ್, ಚಾಮರಾಜನಗರದ ವೆಂಕಟೇಶ್ ಅವರಂತೆ ನಾವು ಕೂಡ ಪರಿಸರ ಉಳಿಸುವ ಕಾರ್ಯದಲ್ಲಿ ಕೈಲಾದ ಸಹಾಯ ಮಾಡಬೇಕು ಎಂದರು.

ಇಂಚರ ಚಾರಿಟಬಲ್ ಟ್ರಸ್ಟಿನ ವ್ಯವಸ್ಥಾಪಕ ಟ್ರಸ್ಟಿ ಸೌಮ್ಯಾ ಮೂನಿ ಸ್ವಾಗತಿಸಿದರು. ಸ್ಟೇಟ್ ಕೋ–ಆರ್ಡಿನೇಟರ್ ಕೆ.ಸಿ. ರಮ್ಯಾ ನಿರೂಪಿಸಿದರು. ಕಾಲೇಜಿನ ಐಕ್ಯುಎಸಿ ಸಂಚಾಲಕ ಡಾ.ವಿ. ಮಂಜುನಾಥ್, ಹಾಸ್ಟೆಲ್ ಸಮಿತಿ ಸಂಚಾಲಕಿ ಎಚ್.ಎಸ್. ಧನಲಕ್ಷ್ಮಿ, ಎನ್‌ಸಿಸಿ ಅಧಿಕಾರಿ ಡಾ.ಎಂ.ಸಿ. ಶಿವಕುಮಾರ್, ಎನ್‌ಎಸ್‌ಎಸ್ ಅಧಿಕಾರಿ ಡಾ.ಶ್ರುತಿ, ಪತ್ರಾಂಕಿತ ವ್ಯವಸ್ಥಾಪಕ ಬಸವರಾಜು, ಅಧೀಕ್ಷಕಿ ಹಾಗೂ ನಿಲಯಪಾಲಕಿ ಎಚ್.ಟಿ. ರೇಖಾ ಮೊದಲಾದವರು ಇದ್ದರು.



ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರು ಯೋಗ ಗುರು ಶ್ರೀ ರಾಮ್‌ದೇವ್ ಗುರೂಜಿ ಅವರನ್ನು ಭೇಟಿಯಾಗಿ, ಆಶೀರ್ವಾದ ಪಡೆದರು.

ನಾಳೆ ಭರತನಾಟ್ಯ ನೃತ್ಯ ರೂಪಕ

ಮೈಸೂರು, ಜ.7– ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ಮೈಸೂರು ದಸರಾ ವಸ್ತುಪ್ರದರ್ಶನದ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ಜ.9ರಂದು ಸಂಜೆ 6ಕ್ಕೆ ಬೆಂಗಳೂರಿನ ಐಕ್ಯಂ ಡ್ಯಾನ್ಸ್ ಅಕಾಡೆಮಿ ವತಿಯಿಂದ ಭರತನಾಟ್ಯ ನೃತ್ಯರೂಪಕ ಆಯೋಜಿಸಲಾಗಿದೆ.

ವಿದೂಷಿ ಅನಘ ಪ್ರಕಾಶ್ ನೇತೃತ್ವದಲ್ಲಿ ರಾಹುಲ್ ಆಚಾರಿ, ಎಲ್.ಅನುಷ, ಸಾತ್ವಿಗ ಸುರೇಶ್, ಅನ್ವೇಶ ಆನಂದ್, ರಿಚಾ ದುಬೆ, ಭೂಮಿಕಾ ಸತೀಶ್ ಕುಮಾರ್ ನೃತ್ಯರೂಪಕ ಪ್ರಸ್ತುತಪಡಿಸಲಿದ್ದಾರೆ. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಜಿ. ಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ನಂದಕುಮಾರ್, ವೆಂಕಟೇಶ್, ಶ್ರೀನಿಧಿ, ಅಜಯ್ ಶಾಸ್ತ್ರಿ ಮತ್ತಿತರರು ಭಾಗವಹಿಸಲಿದ್ದಾರೆ.


ಟೈಲರಿಂಗ್ ತರಬೇತಿಗೆ ಅರ್ಜಿ ಆಹ್ವಾನ

ಮಂಡ್ಯ, ಜ.7– ಉಡುಪು ತರಬೇತಿ ಮತ್ತು ವಿನ್ಯಾಸ ಕೇಂದ್ರ ಸಂಸ್ಥೆ ಭಾರತ ಸರ್ಕಾರದ ಜವಳಿ ಮಂತ್ರಾಲಯ ಹಾಗೂ ಜಿಪಂ ಇವರ ಸಹಯೋಗದೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದು ಜಿಲ್ಲೆಯ ಗ್ರಾಮೀಣ ಮತ್ತು ನಗರದ ನಿರುದ್ಯೋಗ ಯುವಕ/ಯುವತಿಯರಿಗೆ ಉಚಿತ ಸ್ವಯಂ ಉದ್ಯೋಗಿ ಟೈಲರ್ ತರಬೇತಿ ನೀಡಲಾಗು ತ್ತಿದ್ದು, ಪ್ರಸ್ತುತ ದಿನಗಳಲ್ಲಿ ಓಬಿಸಿ ಕಾರ್ಪೋರೇಷನ್ ಮತ್ತು ಡಿ.ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆಯಿಂದ ಪ್ರಾಯೋಜಿಸಿರುವ ಮೂರು ತಿಂಗಳ ತರಬೇತಿಗಾಗಿ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವವರು 18 ರಿಂದ 35 ವರ್ಷ ಮೀರಿರಬಾರದು ಮತ್ತು ಓಬಿಸಿ ಜಾತಿಗೆ ಸೇರಿದವರಾಗಿರಬೇಕು. 5ನೇ ತರಗತಿ ಪಾಸ್ ಆಗಿರಬೇಕು ಹಾಗೂ ವಾರ್ಷಿಕ ವರಮಾನ 50 ಸಾವಿರ ರೂ. ಮೀರಿರ ಬಾರದು. ಮಾಹಿತಿಗಾಗಿ ಉಡುಪು ತರಬೇತಿ ಮತ್ತು ವಿನ್ಯಾಸ ಕೇಂದ್ರವನ್ನು ಸಂಪರ್ಕಿಸಬಹುದಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಇಂದು ಮಾಧ್ಯಮಗಳು ಕೂಗುಮಾರಿಗಳಾಗುತ್ತಿವೆ

ಕವಯತ್ರಿ ಪ್ರೊ.ಚ.ಸರ್ವಮಂಗಳ ವಿಷಾದ



ಮಾನಸಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಧರಣಿದೇವಿ ಮಾಲಗತ್ತಿ ಅವರು ಲೇಖಕ ನಾ.ದಿವಾಕರ ಅವರ 'ನಿರೀಕ್ಷೆ ಭರವಸೆ ಆಶಯ' ಕೃತಿಯನ್ನು ಬಿಡುಗಡೆ ಮಾಡಿದರು.

ಮೈಸೂರು,ಜ.7(ಎಂಟಿವೈ)– ಇಂದು ಮಾಧ್ಯಮಗಳು ಕೂಗುಮಾರಿಗಳಾಗಿವೆ ಎಂದು ಕವಯತ್ರಿ ಪ್ರೊ.ಚ.ಸರ್ವಮಂಗಳ ವಿಷಾದ ವ್ಯಕ್ತಪಡಿಸಿದರು.

ಮಾನಸಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ರೂಪ ಪ್ರಕಾಶನ, ಅಂಗಳ ಸಾಹಿತ್ಯ ಬಳಗ, ಬಾರುಕೋಲು ಬಳಗ, ಮೈಸೂರು ವಿವಿ ಸಂಶೋಧಕರ ಸಂಘ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ನಾ.ದಿವಾಕರ ಅವರ ನಿರೀಕ್ಷೆ ಭರವಸೆ ಆಶಯ ಕೃತಿ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಾಧ್ಯಮಗಳು ಕೂಗುಮಾರಿಗಳಾಗಿವೆ. ಒಂದು ಮಾತಿನಲ್ಲಿ ಮುಗಿಸುವ ಬದಲು 20ಮಾತುಗಳನ್ನು ಬೆಳೆಸುತ್ತಿದ್ದಾರೆ. ಘಟನೆ ಬಗ್ಗೆ ವಿವರಿಸುವುದಷ್ಟೇ ತನ್ನ ಕೆಲಸವೆಂಬುದನ್ನು ಮರೆತು ತಕ್ಕಡಿ ಹಿಡಿಯುತ್ತಿದ್ದಾರೆ. ಯಾರಿಗಾಗಿ ಈ ಅಬ್ಬರ ಎಂದು ಪ್ರಶ್ನಿಸಿದರು.

ಮಂದಿರಗಳು ಆಪತ್ ಕಾಲದಲ್ಲಿ ರಕ್ಷಣೆ ನೀಡುವಂತಿರಬೇಕು. ಪ್ರವಾಹ ಬಂದಾಗ ಊರು ಕೊಚ್ಚಿಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ದೇಗುಲಗಳು ಉಪಯೋಗಕ್ಕೆ ಬರುವಂತೆ ಇರಬೇಕು. ಆದರೆ, ಅಯೋಧ್ಯೆ ರಾಮಮಂದಿರದ ಚಿತ್ರಗಳನ್ನು ನೋಡಿದರೆ 75 ವರ್ಷ ಮೇಲ್ಪಟ್ಟವರು ಹಾಗೂ ವಿಶೇಷ ಚೇತನರು ಮೆಟ್ಟಿಲು ಮೂಲಕ ಒಳ ಹೋಗಲು ಕಷ್ಟವಾಗುವಂತಿದೆ ಎಂದು ಅಭಿಪ್ರಾಯಿಸಿದರು.

ಕುವೆಂಪು ನಿರಂಕುಶ ಮತಿಗಳಾಗಿ ಎಂದು ಕರೆಕೊಟ್ಟರು. ಹಾಗಾಗಿ ನಾವು ಯಾರೊಬ್ಬರ ಭಕ್ತರಾಗಬೇಕಿಲ್ಲ. ಆರಾಧನೆಯನ್ನೂ ಮಾಡಬೇಕಿಲ್ಲ. ವಸ್ತುನಿಷ್ಠವಾಗಿ ವಾಸ್ತವವನ್ನು ಹೇಳುವಂತಾಗಬೇಕು. ಒಮ್ಮೊಮ್ಮೆ ಮೌನವೂ ನಮ್ಮ ಪ್ರತಿಭಟನೆಯಾಗಬೇಕು ಎಂದರು.

ನಾ.ದಿವಾಕರ್ ಅವರ ಎಲ್ಲ ಲೇಖನಗಳು ವರ್ತಮಾನದ ಆಗುಹೋಗುಗಳ ಮೇಲೆ ಬೆಳಕು ಚೆಲ್ಲುತ್ತವೆ. ತಕ್ಷಣದ ಪ್ರತಿಕ್ರಿಯೆಗಳು ಸುಡು ವಾಸ್ತವದಿಂದ ಕೂಡಿವೆ ಎಂದು ಇದೇ ವೇಳೆ ಮೆಚ್ಚುಗೆ ವ್ಯಕ್ತಪಡಿಸಿದರು.

ಪತ್ರಕರ್ತ ಟಿ. ಗುರುರಾಜ್ ಕೃತಿ ಕುರಿತು ಮಾತನಾಡಿ, ನಾ.ದಿವಾಕರ ಅವರ ಕೃತಿಯೂ ಸಮಕಾಲೀನ ಚರಿತ್ರೆಯ ದಾಖಲೀಕರಣ. ಸಮಾಜದ ಒಳಿತಿಗಾಗಿ ಮುಗ್ಧ ಲೇಖಕನ ಸದಾಶಯವನ್ನು ಈ ಕೃತಿಯಲ್ಲಿ ಕಾಣಬಹುದು. ಅಧಿಕಾರದಲ್ಲಿದ್ದಾಗ ಬಿಜೆಪಿ ಜಾತಿ ಧರ್ಮ ಪಂಥ ಕೋಮುವಾಗಿ ವಿಂಗಡಿಸಿತು. ಚುನಾವಣೆಯಲ್ಲಿ ಗೆಲ್ಲಲು ಕಾಂಗ್ರೆಸ್ ಏನೇನು ಮಾಡಿತು? ಅಧಿಕಾರಕ್ಕೆ ಬಂದ ನಂತರ ನುಡಿದಂತೆ ನಡೆಯುತ್ತಿದ್ದೆಯೇ ಎಂಬುದನ್ನು ಜನ ವಿಮರ್ಶೆ ಮಾಡಬೇಕೆಂದು ಲೇಖನಗಳು ಒತ್ತಾಯಿಸುತ್ತವೆ ಎಂದು ಹೇಳಿದರು.

ಲೇಖಕ ನಾ.ದಿವಾಕರ್ ಮಾತನಾಡಿ, 2023ರ ಕರ್ನಾಟಕ ವಿಧಾನಸಭಾ ಚುನಾವಣೆ ಮಹತ್ವದ್ದಾಗಿತ್ತು. ಪ್ರಜಾಪ್ರಭುತ್ವ ಗೆಲ್ಲುವುದರೊಂದಿಗೆ ಅಧಿಕಾರದ ಪೀಠದಲ್ಲಿ ಬದಲಾವಣೆ ಕಾಣಬೇಕೆಂದು ಬಯಸಿದ ದಿನಗಳಲ್ಲಿ ಬರೆದ ಲೇಖನಗಳನ್ನು ಒಳಗೊಂಡಿರುವ ಪುಸ್ತಕ ಪ್ರಕಟಿಸಿರುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಧರಣಿದೇವಿ ಮಾಲಗತ್ತಿ ಕೃತಿ ಬಿಡುಗಡೆ ಮಾಡಿದರು. ರೂಪ ಪ್ರಕಾಶನದ ಯು.ಎಸ್.ಮಹೇಶ್, ಮೈಸೂರು ವಿವಿ ಸಂಶೋಧಕರ ಸಂಘದ ಅಧ್ಯಕ್ಷ ಮಹ ದೇವಸ್ವಾಮಿ ಇದ್ದರು. ಡಾ.ಟಿ.ಪದ್ಮಶ್ರೀ ನಿರೂಪಿಸಿದರು.


ಕಾಂಗ್ರೆಸ್ ಮಾಜಿ ಶಾಸಕನ ರಾಸಲೀಲೆ ವಿಡಿಯೋ ವೈರಲ್; ಪಕ್ಷದಿಂದ ಅಮಾನತು

ಜೈಪುರ, ಜ.7– ಮಹಿಳೆಯೊಂದಿಗೆ ಅನುಚಿತವಾಗಿ ವರ್ತಿಸಿದ ವೀಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ಹಿನ್ನೆಲೆಯಲ್ಲಿ ಮಾಜಿ ಶಾಸಕ ಮೇವಾರಾಂ ಜೈನ್ ಅವರನ್ನು ರಾಜಸ್ಥಾನ ಕಾಂಗ್ರೆಸ್ ಅಮಾನತು ಮಾಡಿದೆ. ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಗೋವಿಂದ್ ಸಿಂಗ್ ದೋತಸ್ರಾ ಶನಿವಾರ ತಡರಾತ್ರಿ ಅಮಾನತು ಮಾಡಿ ಆದೇಶಿಸಿದ್ದಾರೆ.

ಮೇವಾರಾಂ ಅವರ ಅನೈತಿಕ ನಡತೆ ಕಾಂಗ್ರೆಸ್‌ನ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುತ್ತದೆ ಎಂದು ಅವರು ಬರೆದುಕೊಂಡಿದ್ದಾರೆ. ಮಹಿಳೆಯು ಆತನ ವಿರುದ್ಧ ಸಾಮೂಹಿಕ ಅತ್ಯಾಚಾರ ಪ್ರಕರಣ ದಾಖಲಿಸಿದ ದಿನಗಳ ನಂತರ ಜನವರಿ 5ರಂದು ಮಾಜಿ ಶಾಸಕನ ಅಶ್ಲೀಲ ವೀಡಿಯೊಗಳು ಸಾಮಾಜಿಕ ಮಾಧ್ಯಮ ದಲ್ಲಿ ವೈರಲ್ ಆಗಿದ್ದವು.

ಡಿಸೆಂಬರ್ 20 ರಂದು ಜೋಧ್‌ಪುರದಲ್ಲಿ ಮೇವಾರಂ ವಿರುದ್ಧ ಮಹಿಳೆ ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ದಾಖಲಿಸಿದ್ದರು. ಮೇವಾರಂ ಶಾಸಕರಾಗಿದ್ದಾಗ ಅವರು ತಮ್ಮ ಪ್ರಭಾವದಿಂದ ಯಾವುದೇ ಕ್ರಮ ಕೈಗೊಳ್ಳದಂತೆ ನೋಡಿಕೊಂಡಿದ್ದರು, ಅಲ್ಲದೇ ತನ್ನ ವಿರುದ್ಧ ಲೈಂಗಿಕ ಚಟುವಟಿಕೆ ಆರೋಪ ಹೊರಿಸಿ ಬಂಧಿಸಲಾಗಿತ್ತು ಎಂದು ಮಹಿಳೆ ಆರೋಪಿಸಿದ್ದಾರೆ.


ಇದೀಗ ಕಳೆದ ಎರಡು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ಅಶ್ಲೀಲ ವಿಡಿಯೋಗಳು ಹರಿದಾಡುತ್ತಿದ್ದು, ಇದು ಬಾರ್ಮರ್ ಮಾಜಿ ಶಾಸಕ ಮೇವಾರಂ ಅವರದ್ದು ಎಂದು ಹೇಳಲಾಗುತ್ತಿದೆ. ಇದರ ಬೆನ್ನಲ್ಲೇ ಕಾಂಗ್ರೆಸ್ ಮೇವಾರಂ ಅಮಾನತು ಮಾಡಿದೆ.



ಅಯೋಧ್ಯೆ ಶ್ರೀರಾಮ ಮಂದಿರದ ಮಂತ್ರಾಕ್ಷತೆಯನ್ನು ಆರ್‌ಎಸ್‌ಎಸ್ ಕಾರ್ಯಕರ್ತರು ಮೈಸೂರಿನ ಗಣೇಶ ನಗರದ ಮನೆ–ಮನೆಗೆ ವಿತರಿಸಿದರು. ಈ ವೇಳೆ ಸ್ವಯಂ ಸೇವಕರಾದ ಮಹದೇವು, ಮಂಜುನಾಥ್ ಸಿಂಗ್, ಸಂದೀಪ್, ರವಿ, ನಾಗೇಂದ್ರ, ಸಿದ್ದರಾಜು ಇನ್ನಿತರರಿದ್ದರು.

ರಾಜ್ಯದಲ್ಲಿ ಭಾನುವಾರ 329 ಮಂದಿಗೆ ಕೊರೊನಾ ಪಾಸಿಟಿವ್

ಬೆಂಗಳೂರು, ಜ.7–ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಭಾನುವಾರ 329 ಮಂದಿಗೆ ಕೊರೋನಾ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 1,181ಕ್ಕೆ ಏರಿಕೆಯಾಗಿದೆ.



ರಾಜ್ಯದಲ್ಲಿ ಕಳೆದ 24 ಗಂಟೆಗಳಲ್ಲಿ 329 ಮಂದಿಗೆ ಕೋವಿಡ್–19 ಪಾಸಿಟಿವ್ ದೃಢಪಟ್ಟಿದೆ. ಸೋಂಕಿನಿಂದ ರಾಜ್ಯದಲ್ಲಿ ಇಂದು ಓರ್ವ ಮೃತಪಟ್ಟಿದ್ದಾನೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಇಂದು ಕೋವಿಡ್‌ನಿಂದ 283 ಮಂದಿ ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಕಳೆದ 24 ಗಂಟೆಗಳಲ್ಲಿ 3,819 ಮಂದಿಗೆ ಕೊರೊನಾ ಟೆಸ್ಟ್ ಮಾಡಲಾಗಿದೆ. ಪಾಸಿಟಿವಿಟಿ ದರ ಶೇ. 8.61ರಷ್ಟಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಹಿತಿ ನೀಡಿದೆ.

ಇನ್ನು ರಾಜಧಾನಿ ಬೆಂಗಳೂರಿನಲ್ಲಿಯೇ ಇಂದು 177 ಜನರಿಗೆ ಕೊರೊನಾ ಪಾಸಿಟಿವ್ ಬಂದಿದೆ. ಇನ್ನುಳಿದಂತೆ ಮೈಸೂರು 27, ಬಾಗಲಕೋಟೆ 10, ಹಾಸನ 17, ಬೆಂಗಳೂರು ಗ್ರಾಮಾಂತರ 8, ಚಾಮರಾಜನಗರ 5, ತುಮಕೂರು 16 ಪ್ರಕರಣ ಸೇರಿದಂತೆ ಒಟ್ಟು 329 ಪ್ರಕರಣಗಳು ವರದಿಯಾಗಿವೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಪೂರ್ವಭಾವಿ ಸಭೆ

ಮಂಡ್ಯ, ಜ.7– ಪಾಂಡವಪುರ ಪುರಸಭೆಯ 2024–25ನೇ ಸಾಲಿನ ಆಯವ್ಯಯ ಮಂಡಿಸುವ ಸಲುವಾಗಿ ಜ.10 ರಂದು ಬೆಳಗ್ಗೆ 11 ಗಂಟೆಗೆ ಪಾಂಡವಪುರ ಪುರಸಭಾ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ.

ಗುಜರಾತ್‌ನಲ್ಲಿ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವಕ್ಕೆ ಚಾಲನೆ

68 ರಾಷ್ಟ್ರಗಳು ಭಾಗಿ

ಗಾಂಧಿನಗರ, ಜ.7– ಗುಜರಾತಿನಲ್ಲಿ ಇಂದಿನಿಂದ ಆರಂಭವಾದ ಏಳು ದಿನಗಳ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವಕ್ಕೆ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಭಾನುವಾರ ಚಾಲನೆ ನೀಡಿದರು. ಇದರಲ್ಲಿ 68 ರಾಷ್ಟ್ರಗಳು ಸೇರಿದಂತೆ ವಿವಿಧ ರಾಜ್ಯಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಪಟೇಲ್, ಪ್ರಧಾನಿ ನರೇಂದ್ರ ಮೋದಿಯವರ ಪ್ರಗತಿಪರ ಸಿದ್ಧಾಂತ ಮತ್ತು ದೂರದೃಷ್ಟಿಯ ನಾಯಕತ್ವದಿಂದಾಗಿ ಕೈಗಾರಿಕಾ ಮತ್ತು ವ್ಯವಹಾರ ಅಭಿವೃದ್ಧಿಯೊಂದಿಗೆ ಭಾರತದ ಆರ್ಥಿಕತೆಯು ಹೊಸ ಎತ್ತರವನ್ನು ತಲುಪುತ್ತಿದೆ. ನವರಾತ್ರಿ ಹಬ್ಬವಾಗಲಿ ಅಥವಾ ಅಂತರಾಷ್ಟ್ರೀಯ ಗಾಳಿಪಟ ಉತ್ಸವವಾಗಲಿ ಗುಜರಾತ್ ಯಾವಾಗಲೂ ತನ್ನ ಸಂಸ್ಕೃತಿ ಮತ್ತು ಶಕ್ತಿಯನ್ನು ಜನರು ಅನುಭವಿಸುವಂತೆ ಮಾಡಿದೆ ಎಂದು ಅವರು ಹೇಳಿದರು. ಇಂತಹ ಹಬ್ಬಗಳು ರಾಜ್ಯದ ಆರ್ಥಿಕತೆಯನ್ನು ಬಲಪಡಿಸುತ್ತದೆ. ಅಷ್ಟೇ ಅಲ್ಲ, ಉದ್ಯಮಿಗಳ ಆರ್ಥಿಕ ಸ್ಥಿತಿಯೂ ಸುಧಾರಿಸುತ್ತದೆ ಮತ್ತು ಇತರ ಪೂರಕ ಉದ್ಯೋಗಾವಕಾಶಗಳು ಸಹ ಹೆಚ್ಚುತ್ತವೆ. ಗಾಳಿಪಟ ಉತ್ಸವವು ವಿಶ್ವಾದ್ಯಂತ ಜನಪ್ರಿಯತೆಯನ್ನು ಗಳಿಸಿದ್ದು, ಪ್ರತಿ ವರ್ಷವೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರಪಂಚದಾದ್ಯಂತ ಮತ್ತು ದೇಶದಿಂದ ಗಾಳಿಪಟ ಹಾರಾಟಗಾರರು ಗುಜರಾತ್‌ಗೆ ಆಗಮಿಸುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ ಎಂದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 8 ಜನವರಿ 2024

ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ 2 ಪಕ್ಷಗಳಿಂದ ಮುಂದುವರೆದ ಅಭ್ಯರ್ಥಿ ಆಯ್ಕೆ ಗೊಂದಲ

- ಜೆಡಿಎಸ್‌ನಿಂದ ಹೆಚ್ಡಿಕೆ ಕಣಕ್ಕಿಳಿಯುತ್ತಾರೋ, ಸ್ಥಳೀಯರಿಗೆ ಟಿಕೆಟ್ ಕೊಡುತ್ತಾರೋ?
- ಕಾಂಗ್ರೆಸ್‌ನಿಂದ ಚಲುವರಾಯಸ್ವಾಮಿ ಸ್ಪರ್ಧೆಗೆ ಒತ್ತಡ, ಮನಸ್ಸು ಮಾಡದ ಕೃಷಿ ಮಂತ್ರಿ
- ಸ್ಪರ್ಧೆಗೆ ಸುಮಲತಾ ಸಿದ್ಧ, ಕಾದು ನೋಡುವ ತಂತ್ರಕ್ಕೆ ಮೊರೆ ಹೋದ ಹಾಲಿ ಸಂಸದೆ

... ಎಂ.ಕೆ.ಮೋಹನ್‌ರಾಜ್


ಹೆಚ್.ಡಿ.ಕುಮಾರಸ್ವಾಮಿ


ನಿಖಿಲ್ ಕುಮಾರಸ್ವಾಮಿ


ಸಿ.ಎಸ್. ಪುಟ್ಟರಾಜು


ಕೆ. ಸುರೇಶ್‌ಗೌಡ


ಎನ್.ಚಲುವರಾಯಸ್ವಾಮಿ


ಧನಲಕ್ಷ್ಮಿ


ರಮ್ಯಾ


ಶಾಂಭವಿ

ಮಂಡ್ಯ, ಜ.7– ಪ್ರತಿ ಲೋಕಸಭಾ ಚುನಾವಣೆಯಲ್ಲೂ ಮಂಡ್ಯ ಕ್ಷೇತ್ರ ರಾಜ್ಯದ ಗಮನ ಸೆಳೆಯುತ್ತದೆ. ಅದು ದಿ.ಅಂಬರೀಶ್ ಸ್ಪರ್ಧಿಸುತ್ತಿದ್ದ ಚುನಾವಣೆಗಳಿಂದ ಹಿಡಿದು ಕಳೆದ 2019ರ ಲೋಕಸಭಾ ಚುನಾವಣೆವರೆಗೂ ಮಂಡ್ಯ ಕ್ಷೇತ್ರದ ಚುನಾವಣೆ ರಣರೋಚಕ. ಈಗಲೂ ಸಹ ಕ್ಷೇತ್ರ ಮತ್ತೆ ಗಮನ ಸಳೆಯಲು ಸಜ್ಜಾಗುತ್ತಿದ್ದು, ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ಅಭ್ಯರ್ಥಿಗಳ ಆಯ್ಕೆ ತೀವ್ರ ಗೊಂದಲವಾದರೆ, ಹಾಲಿ ಪಕ್ಷೇತರ ಸಂಸದೆ ಸುಮಲತಾ ಸ್ಪರ್ಧೆಗೆ ಸಿದ್ಧರಾಗಿದ್ದರೂ ಕಾದು ನೋಡುವ ತಂತ್ರಕ್ಕೆ ಮುಂದಾಗಿದ್ದಾರೆ.

ಉತ್ಸಾಹ ಕಳೆದುಕೊಂಡ ಕಾಂಗ್ರೆಸ್: ಕಳೆದ 2 ದಶಕಗಳಿಂದ ಜೆಡಿಎಸ್ ವಶದಲ್ಲಿದ್ದ ಮಂಡ್ಯ ಜಿಲ್ಲೆಯನ್ನು ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಅಲ್ಲದೇ ಇದೇ ಜೋಶ್‌ನಲ್ಲಿ ಲೋಕಸಭಾ ಚುನಾವಣೆ ಗೆಲ್ಲುವ ಉತ್ಸಾಹದಲ್ಲಿ ಇತ್ತು. ಅಂಬರೀಶ್ ಕಾಲದಲ್ಲಿ ಸತತವಾಗಿ ಸಂಸತ್ ಚುನಾವಣೆ ಗೆಲ್ಲುತ್ತಿದ್ದ ಕಾಂಗ್ರೆಸ್‌ಗೆ ಕಳೆದ 15 ವರ್ಷಗಳಿಂದ ಲೋಕಸಭಾ ಚುನಾವಣೆ ಗೆಲುವು ಮರೀಚಿಕೆಯಾಗಿದೆ. 2013ರ ಉಪ ಚುನಾವಣೆಯಲ್ಲಿ 6 ತಿಂಗಳ ಅವಧಿಗೆ ಕಾಂಗ್ರೆಸ್ ಟಿಕೆಟ್‌ನಡಿ ರಮ್ಯಾ ಗೆದ್ದಿದ್ದು ಬಿಟ್ಟರೆ 2009 ರಿಂದ ಒಂದು ಉಪ ಚುನಾವಣೆ ಸೇರಿ ಜೆಡಿಎಸ್ 3 ಬಾರಿ, 2019ರಲ್ಲಿ ಪಕ್ಷೇತರವಾಗಿ ಸುಮಲತಾ ಒಮ್ಮೆ ಗೆದ್ದಿದ್ದಾರೆ. ಈ ನಿಟ್ಟಿನಲ್ಲಿ ಶತಾಯಗತಾಯ ಈ ಬಾರಿ ಮಂಡ್ಯ ಲೋಕಸಭೆಯಲ್ಲಿ ಕಾಂಗ್ರೆಸ್‌ನ ಬಾವುಟ ಹಾರಿಸಲೇಬೇಕೆಂಬುದು ಕೈ ನಾಯಕರ ಲೆಕ್ಕಾಚಾರ.

ಈ ನಿಟ್ಟಿನಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕೆ.ಆರ್.ನಗರ ಸೇರಿದಂತೆ 8 ಕ್ಷೇತ್ರಗಳ ಪೈಕಿ 7ರಲ್ಲಿ (ಮೇಲುಕೋಟೆಯ ಕಾಂಗ್ರೆಸ್ ಬೆಂಬಲಿತ ದರ್ಶನ್ ಪುಟ್ಟಣ್ಣಯ್ಯ ಸೇರಿ) ಗೆದ್ದು ಬೀಗಿರುವ ಕಾಂಗ್ರೆಸ್ ನಾಯಕರು ಲೋಕಸಭಾ ಚುನಾವಣೆಗೆ ರಣೋತ್ಸಾಹದಿಂದ ಸಿದ್ಧತೆ ನಡೆಸಿದ್ದರು. ಸರ್ಕಾರವು ನಮ್ಮದೇ ಶಾಸಕರು ನಮ್ಮವರೇ ಆಗಿರುವುದರಿಂದ ಚುನಾವಣೆ ಎದುರಿಸುವುದು ಸುಲಭವೆಂದು ಹತ್ತಕ್ಕೂ ಅಧಿಕ ಮಂದಿ ಅಭ್ಯರ್ಥಿಗಳು ತಮಗೇ ಟಿಕೆಟ್ ಬೇಕೆಂದು ನಾಯಕರ ದುಂಬಾಲು ಬಿದ್ದಿದ್ದರು.

ಆದರೆ ಜೆಡಿಎಸ್– ಬಿಜೆಪಿ ಮೈತ್ರಿಯಾಗಿರುವ ಹಿನ್ನೆಲೆಯಲ್ಲಿ ಬಿಜೆಪಿಯ ಕನಿಷ್ಠ ಒಂದೂವರೆ ಲಕ್ಷದಿಂದ ಎರಡು ಲಕ್ಷ ಮತಗಳು ಜೆಡಿಎಸ್ ತೆಕ್ಕೆಗೆ ಜಾರುವುದರಿಂದ ಮಂಡ್ಯದಲ್ಲಿ ಸಾಮಾನ್ಯ ಅಭ್ಯರ್ಥಿ ಕಣಕ್ಕಿಳಿದರೆ ಗೆಲುವು ಕಷ್ಟಸಾಧ್ಯ ಎನ್ನುವ ಕಾರಣಕ್ಕೆ ಜಿಲ್ಲೆಯ ಮುಖಂಡರು ಲೋಕಸಭಾ ಚುನಾವಣೆ ಸ್ಪರ್ಧೆಗೆ ಒಲವು ತೋರುತ್ತಿಲ್ಲ. ರಾಜ್ಯ ಕಾಂಗ್ರೆಸ್ ನಾಯಕರು ಸಹ ಪ್ರಬಲ ಹಾಗೂ ಸಮರ್ಥ ಅಭ್ಯರ್ಥಿಯನ್ನು ಮೈತ್ರಿ ಅಭ್ಯರ್ಥಿ ಮುಂದೆ ಕಣಕ್ಕಿಳಿಸಲು ಸಜ್ಜಾಗುತ್ತಿದ್ದಾರೆ.

ಚಲುವರಾಯಸ್ವಾಮಿ ಸ್ಪರ್ಧೆಗೆ ಒತ್ತಡ: ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಎದುರಿಸಬೇಕೆಂದರೆ ಪ್ರಬಲ ಅಭ್ಯರ್ಥಿಯೇ ಕಣಕ್ಕಿಳಿಯಬೇಕೆಂಬ ನಿಟ್ಟಿನಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರಿಗೆ ಸ್ಪರ್ಧಿಸುವಂತೆ ಒತ್ತಡ ಹೇರಿದ್ದಾರೆ ಎನ್ನಲಾಗಿದೆ. ಆದರೆ ಮಾಜಿ ಸಂಸದರೂ ಆದ ಸಚಿವ ಎನ್.ಚಲುವರಾಯಸ್ವಾಮಿಗೆ ಮಂಡ್ಯದಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಇಷ್ಟವಿಲ್ಲ. ಬದಲಾಗಿ ಪತ್ನಿ ಧನಲಕ್ಷ್ಮಿಗೆ ಟಿಕೆಟ್ ಕೊಟ್ಟರೆ ಗೆಲುವಿಗಾಗಿ ಶ್ರಮಿಸುತ್ತೇನೆ ಎಂಬುದು ಚಲುವರಾಯಸ್ವಾಮಿ ಲೆಕ್ಕಾಚಾರ.


ರಮ್ಯಾ ಕರೆತರಲು ಚಿಂತನೆ: ಚಲುವರಾಯಸ್ವಾಮಿ ಸ್ಪರ್ಧೆಗೆ ಒಪ್ಪದಿದ್ದರೆ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಮಾಜಿ ಸಂಸದೆ ರಮ್ಯಾ ಅವರನ್ನು ಕರೆತರಬೇಕೆಂಬುದು ಡಿಕೆಶಿ ಲೆಕ್ಕಾಚಾರ. ಶಾಸಕ ಗಣಿಗ ರವಿಕುಮಾರ್ ಸೇರಿದಂತೆ ಹಲವರು ರಮ್ಯಾ ಸ್ಪರ್ಧಿಸಲಿ ಎಂದು ಕೆಪಿಸಿಸಿ ಮೇಲೆ ಒತ್ತಡ ಹಾಕುತ್ತಿದ್ದಾರೆ. ಆದರೆ ರಮ್ಯಾ ಕಾರ್ಯಕರ್ತರ ಕೈಗೆ ಸಿಗುವುದಿಲ್ಲ. ಆ ಕಾರಣಕ್ಕಾಗಿ ರಮ್ಯಾ ಸ್ಪರ್ಧೆ ಬೇಡ. ಬದಲಿಗೆ ಸ್ಥಳೀಯರಿಗೆ ಟಿಕೆಟ್ ಕೊಡಿ ಎಂದು ಕಾರ್ಯಕರ್ತರು ಮನವಿ ಮಾಡಿದ್ದಾರೆ.

ಒಟ್ಟಾರೆ ಕಾಂಗ್ರೆಸ್ ವಲಯದಲ್ಲಿ ಚಲುವರಾಯಸ್ವಾಮಿ, ಧನಲಕ್ಷ್ಮಿ ಚಲುವರಾಯಸ್ವಾಮಿ, ಶಾಂಭವಿ ಎಸ್.ಎಂ.ಕೃಷ್ಣ ಹಾಗೂ ರಮ್ಯಾ ಹೆಸರು ಮುಂಚೂಣಿಯಲ್ಲಿ ಕೇಳಿ ಬರುತ್ತಿದ್ದು, ಇವರನ್ನು ಹೊರತುಪಡಿಸಿ ಹೊಸಮುಖ ಅಥವಾ ಜಿಲ್ಲೆಯ ಇತರೆ ಮುಖಂಡರು ಟಿಕೆಟ್ ತಂದರೂ ಅಚ್ಚರಿ ಇಲ್ಲ.

ಜೆಡಿಎಸ್‌ನಿಂದ ಹೆಚ್ಡಿಕೆಯೋ ಅಥವಾ ಇತರರೋ: ಜೆಡಿಎಸ್– ಬಿಜೆಪಿ ಮೈತ್ರಿಯಾಗಿರುವ ಹಿನ್ನೆಲೆಯಲ್ಲಿ ಮೂರ್‍ನಾಲ್ಕು ಕ್ಷೇತ್ರಗಳನ್ನು ಬಿಜೆಪಿ ಜೆಡಿಎಸ್‌ಗೆ ಬಿಟ್ಟುಕೊಡಲಿದ್ದು, ಬಹುತೇಕ ಮಂಡ್ಯ ಕ್ಷೇತ್ರ ಜೆಡಿಎಸ್ ಪಾಲಾಗಲಿದೆ. ಈ ನಿಟ್ಟಿನಲ್ಲಿ ಮಂಡ್ಯದಿಂದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರೇ ಸ್ಪರ್ಧಿಸಬೇಕೆಂಬುದು ಸ್ಥಳೀಯ ಜೆಡಿಎಸ್ ಹಾಗೂ ಬಿಜೆಪಿ ಮುಖಂಡರ ಒತ್ತಾಯ. ಜೊತೆಗೆ ಪ್ರಧಾನಿ ಮೋದಿ ಅವರು ಸಹ ಕುಮಾರಸ್ವಾಮಿ ಅವರನ್ನು ಮಂಡ್ಯದಿಂದ ಸ್ಪರ್ಧಿಸುವಂತೆ ಸಲಹೆ ನೀಡಿದ್ದಾರೆ ಎಂಬ ಮಾತುಗಳು ಕೇಳಿ ಬಂದಿದೆ.

ಕುಮಾರಸ್ವಾಮಿ ಮಾತ್ರ ನಾನು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲ್ಲ ಎಂದು ಹೇಳಿದ್ದರು. ಆದರೆ ಇತ್ತೀಚೆಗೆ ಮುಂದೆ ನೋಡೋಣ ಎಂದು ಸ್ಪಷ್ಟಪಡಿಸಿದ್ದರು.

ಸುಮಲತಾ ಅವರಿಂದ ಕಾದುನೋಡುವ ತಂತ್ರ, ಆಪ್ತನಿಂದ ಕುಮಾರಸ್ವಾಮಿ ಭೇಟಿ


ಮಾಜಿ ಸಿಎಂ ಕುಮಾರಸ್ವಾಮಿ ಅವರನ್ನು ಇತ್ತೀಚೆಗೆ ಸುಮಲತಾ ಆಪ್ತ ಸಚ್ಚಿದಾನಂದ ಭೇಟಿ ಮಾಡಿದರು.

ಕಳೆದ ವಿಧಾನಸಭಾ ಚುನಾವಣೆ ಸಂದರ್ಭ ಬಿಜೆಪಿಗೆ ಬೆಂಬಲ ನೀಡಿ, ಆ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಮಾಡಿದ್ದ ಸಂಸದೆ ಸುಮಲತಾ ಮಂಡ್ಯದಿಂದ ಬಿಜೆಪಿ ಅಭ್ಯರ್ಥಿಯಾಗಲು ತಯಾರಿ ನಡೆಸಿದ್ದರು. ಆದರೆ ಬಿಜೆಪಿ– ಜೆಡಿಎಸ್ ಮೈತ್ರಿಯಾಗಿ ಮಂಡ್ಯ ಬಹುತೇಕ ಜೆಡಿಎಸ್ ತೆಕ್ಕೆಗೆ ಜಾರಿರುವುದರಿಂದ ಸುಮಲತಾ ತ್ರಿಶಂಕು ಸ್ಥಿತಿಗೆ ಸಿಲುಕಿದ್ದು, ಕಾದು ನೋಡುವ ತಂತ್ರಕ್ಕೆ ಮೊರೆ ಹೋಗಿದ್ದಾರೆ.

ನಾನು ರಾಜಕಾರಣ ಮಾಡಿದರೆ ಮಂಡ್ಯದಿಂದಲೇ ಎಂದು ಘೋಷಿಸಿಕೊಂಡಿದ್ದ ಸುಮಲತಾ, ಮತ್ತೊಮ್ಮೆ ಇಲ್ಲಿಂದಲೇ ಸ್ಪರ್ಧಿಸುವ ಸುಳಿವು ನೀಡಿದ್ದರು. ಇದಕ್ಕೆ ಪುಷ್ಟಿ ಕೊಡುವಂತೆ ಇತ್ತೀಚೆಗೆ ಮಂಡ್ಯದಲ್ಲಿ ನಡೆದ ಕಾಟೇರ ಚಿತ್ರದ ಧ್ವನಿಸುರುಳಿ ಬಿಡುಗಡೆ ಸಮಾರಂಭದಲ್ಲಿ ಕಳೆದ ಬಾರಿ ಸುಮಲತಾ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದ ನಟ ದರ್ಶನ್, ಸುಮಲತಾ ಅವರಿಗೆ ಮಂಡ್ಯ ಜನರ ಆಶೀರ್ವಾದ ಇರಲಿ ಎಂದು ಹೇಳಿದ್ದರು.


ಸುಮಲತಾ

ಆದರೆ ಪ್ರಸ್ತುತ ಸುಮಲತಾ ಮುಂದೆ ಇರುವುದು ಬಿಜೆಪಿ ಟಿಕೆಟ್ ಸಿಗದಿದ್ದರೆ ಮತ್ತೆ ಪಕ್ಷೇತರರಾಗಿ ಸ್ಪರ್ಧಿಸುವುದು ಅಥವಾ ಕಾಂಗ್ರೆಸ್ ಸೇರಿ ಅಲ್ಲಿಂದ ಟಿಕೆಟ್ ಪಡೆಯುವುದು. ಪಕ್ಷೇತರವಾಗಿ ಸ್ಪರ್ಧಿಸಲು 2019ರಲ್ಲಿ ಸುಮಲತಾ ಪರ ಇದ್ದ ಅಲೆ ಈ ಬಾರಿ ಇಲ್ಲ. ಆದ್ದರಿಂದ ಪಕ್ಷೇತರ ಸ್ಪರ್ಧೆ ಸುಲಭವಲ್ಲ. ಕಾಂಗ್ರೆಸ್ ಟಿಕೆಟ್ ಪಡೆಯಲು ಸುಮಲತಾ ಭಾರೀ ಕಸರತ್ತು ನಡೆಸಬೇಕು. ನಮ್ಮ ವಿರುದ್ಧ ಸುಮಲತಾ ಮತ ಕೇಳಿದ್ದು, ಅವರನ್ನು ನಾವ್ಯಾಕೆ ಪಕ್ಷಕ್ಕೆ ಸೇರ್ಪಡೆ ಮಾಡಿ ಕೊಳ್ಳಬೇಕೆಂಬುದು ಮಂಡ್ಯ ಶಾಸಕ ಗಣಿಗ ರವಿಕುಮಾರ್ ಸೇರಿದಂತೆ ಸ್ಥಳೀಯರ ಪ್ರಶ್ನೆ, ಇಲ್ಲದಿದ್ದಲ್ಲಿ ಬಿಜೆಪಿ ನಾಯಕರ ಒತ್ತಡಕ್ಕೆ ಮಣಿದು ರಾಜ್ಯಸಭೆ ಅಥವಾ ಬೆಂಗಳೂರಿನ ಯಾವುದಾದರೂ ಒಂದು ಕ್ಷೇತ್ರದಿಂದ ಸ್ಪರ್ಧಿಸಬೇಕಾಗಬಹುದು.

ಆಪ್ತನಿಂದ ಹೆಚ್ಡಿಕೆ ಭೇಟಿ: ಸುಮಲತಾ ಆಪ್ತ ಎಂದೇ ಗುರುತಿಸಿಕೊಂಡಿರುವ ಶ್ರೀರಂಗಪಟ್ಟಣ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಸಚ್ಚಿದಾನಂದ ಇತ್ತೀಚೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರ ಸ್ವಾಮಿ ಅವರನ್ನು ಭೇಟಿಯಾಗಿ ಬಂದಿದ್ದಾರೆ. ಹೊಸ ವರ್ಷದ ಶುಭಾಷಯ ಕೋರುವ ನೆಪದಲ್ಲಿ ಸಚ್ಚಿದಾನಂದ ಕುಮಾರಸ್ವಾಮಿ ಭೇಟಿ ಮಾಡಿ ಮಾತುಕತೆ ನಡೆಸಿದ್ದು, ಈ ಸಂದರ್ಭ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಸಹ ಉಪಸ್ಥಿತರಿದ್ದರು. ಸುಮಲತಾ ಆಣತಿಯಂತೆ ಕುಮಾರಸ್ವಾಮಿ ಭೇಟಿ ಮಾಡಿದ್ದಾರೋ ಅಥವಾ ಎರಡು ಪಕ್ಷಗಳು ಮೈತ್ರಿಯಾಗಿರುವ ಹಿನ್ನೆಲೆಯಲ್ಲಿ ಅನೌಪಚಾರಿಕವಾಗಿ ಭೇಟಿ ಮಾಡಿದ್ದಾರೋ ಗೊತ್ತಿಲ್ಲ. ಇಲ್ಲವೇ ಸುಮಲತಾ ಹಾಗೂ ಕುಮಾರಸ್ವಾಮಿ ಮುಖಾ ಮುಖಿಯಾಗಲು ಸಚ್ಚಿದಾನಂದ ಮೂಲಕ ವೇದಿಕೆ ಸಿದ್ಧವಾಗುತ್ತಿದೆಯೋ ಎಂಬುದು ಸದ್ಯದಲ್ಲೇ ತಿಳಿಯಲಿದೆ.

ಜಿಲ್ಲೆಯ ಜೆಡಿಎಸ್ ಮಾಜಿ ಶಾಸಕರಾದ ಸಿ.ಎಸ್.ಪುಟ್ಟರಾಜು, ಕೆ.ಸುರೇಶ್‌ಗೌಡ ಸೇರಿದಂತೆ ಹಲವು ಮುಖಂಡರು ಕುಮಾರಸ್ವಾಮಿ ಅವರೇ ಮಂಡ್ಯಕ್ಕೆ ಬರಬೇಕೆಂದು ಒತ್ತಾಯಿಸಿದ್ದಾರೆ. ಆದರೆ ಕುಮಾರಸ್ವಾಮಿ ಮಾತ್ರ ಇನ್ನೂ ಸಹ ಮನಸ್ಸು ಮಾಡಿಲ್ಲ.

ದಶಕಗಳಿಂದ ಪಾರುಪತ್ಯ ಸಾಧಿಸಿರುವ ಮಂಡ್ಯ ಕ್ರಮೇಣ ಕಾಂಗ್ರೆಸ್‌ನತ್ತ ವಾಲುತ್ತಿರುವುದು ಕುಮಾರಸ್ವಾಮಿಯವರಿಗೆ ಆತಂಕದ ವಿಷಯವಾಗಿದೆ. ಹಾಸನ ಹಾಗೂ ರಾಮನಗರಕ್ಕಿಂತ ಜೆಡಿಎಸ್ ಭದ್ರಕೋಟೆ ಮಂಡ್ಯ ಎಂಬುದು ಜಗಜ್ಜಾಹೀರು. ವಿಧಾನಸಭಾ ಚುನಾವಣೆಯಲ್ಲಾದ ಸೋಲನ್ನು ಮರೆತು ಲೋಕಸಭಾ ಚುನಾವಣೆಯಲ್ಲಿ ಗೆಲುವು ಪಡೆಯಬೇಕೆಂಬ ಹಠ ತೊಟ್ಟಿರುವ ಕುಮಾರಸ್ವಾಮಿ, ಜಿಲ್ಲೆಯ ಮಾಜಿ ಶಾಸಕರನ್ನು ಕಣಕ್ಕಿಳಿಸುತ್ತಾರೋ ಅಥವಾ ತಾವೇ, ಅಖಾಡಕ್ಕೆ ಧುಮುಕುತ್ತಾರೋ ಕಾದು ನೋಡಬೇಕು.

ಕುಮಾರಸ್ವಾಮಿ ಸ್ಪರ್ಧಿಸದಿದ್ದರೆ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಲಿ ಎಂಬುದು ದಳಪತಿಗಳ ಒತ್ತಾಯ. ಹಾಗೊಂದು ವೇಳೆ ಇಬ್ಬರೂ ಬಾರದಿದ್ದರೆ ಮಾಜಿ ಶಾಸಕರಾದ ಸಿ.ಎಸ್.ಪುಟ್ಟರಾಜು ಅಥವಾ ಸುರೇಶ್‌ಗೌಡರಿಗೆ ಟಿಕೆಟ್ ಸಿಗುವ ಸಾಧ್ಯತೆ ಇದೆ. ಪುಟ್ಟರಾಜು ಇದುವರೆಗೂ ಟಿಕೆಟ್ ಕೇಳಿಲ್ಲವಾದರೂ ಪಕ್ಷ ನೀಡಿದ ಜವಾಬ್ದಾರಿಯನ್ನು ನಿಭಾಯಿಸಲು ಮಾನಸಿಕವಾಗಿ ಸಿದ್ಧರಿದ್ದಾರೆ. ಸುರೇಶ್‌ಗೌಡ ಮಾತ್ರ ಕುಮಾರಸ್ವಾಮಿ, ನಿಖಿಲ್ ಬಾರದಿದ್ದರೆ ನಾನು ಸ್ಪರ್ಧೆಗೆ ಸಿದ್ಧನಿದ್ದೇನೆ ಎಂದು ಘೋಷಿಸಿಕೊಂಡಿದ್ದಾರೆ.

ಇನ್ನು ಬಿಜೆಪಿಯಿಂದ ಜೆಡಿಎಸ್‌ಗೆ ಬೆಂಬಲ ಎನ್ನುವ ನಿಲುವು ಸ್ಥಳೀಯ ಮುಖಂಡರಿಂದ ಬಂದಿದ್ದು, ಹಾಗೊಂದು ವೇಳೆ ಮಂಡ್ಯ ಕ್ಷೇತ್ರ ಬಿಜೆಪಿ ಪಾಲಾದರೆ ಹಾಲಿ ಸಂಸದೆ ಸುಮಲತಾ ಅಂಬರೀಶ್, ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಹಾಗೂ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಡಾ. ಸಿದ್ದರಾಮಯ್ಯ ಸ್ಪರ್ಧೆಗೆ ಸಿದ್ಧರಿದ್ದಾರೆ.

ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ

ಮಂಡ್ಯ, ಜ.7– ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ವತಿಯಿಂದ ಜ.24 ರವರೆಗೆ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ. ಜ.9 ರಂದು ಶಿವಳ್ಳಿ ಸರ್ಕಾರಿ ಆರೋಗ್ಯ ಕೇಂದ್ರ, ಜ.10 ರಂದು ಕೆ.ಆರ್.ಪೇಟೆ ತಾಲೂಕು ಆಸ್ಪತ್ರೆ, ಜ.11 ರಂದು ಪಾಂಡವಪುರ ಉಪವಿಭಾಗ ಆಸ್ಪತ್ರೆ, ಜ.12 ರಂದು ಕೆ.ಎಂ ದೊಡ್ಡಿ ಸರ್ಕಾರಿ ಆರೋಗ್ಯ ಕೇಂದ್ರ, ಜ.16 ರಂದು ಪಾಂಡವಪುರ ಉಪ ವಿಭಾಗ ಆಸ್ಪತ್ರೆ, ಜ.17 ರಂದು ಅರಕೆರೆ ಸರ್ಕಾರಿ ಆರೋಗ್ಯ ಕೇಂದ್ರ, ಜ.18 ರಂದು ಮದ್ದೂರು ತಾಲೂಕು ಆಸ್ಪತ್ರೆ, ಜ.19 ರಂದು ಬಸರಾಳು ಪ್ರಾಥಮಿಕ ಆರೋಗ್ಯ ಕೇಂದ್ರ, ಜ.20 ರಂದು ಕಿರುಗಾವಲು ಸರ್ಕಾರಿ ಆರೋಗ್ಯ ಕೇಂದ್ರ, ಜ.23 ರಂದು ಬಿಂಡಿಗನವಿಲೆ ಸರ್ಕಾರಿ ಆರೋಗ್ಯ ಕೇಂದ್ರ ಹಾಗೂ ಮಧ್ಯಾಹ್ನ 1 ಗಂಟೆಗೆ ನಾಗಮಂಗಲ ಸಾರ್ವಜನಿಕ ಆಸ್ಪತ್ರೆ, ಜ.24 ರಂದು ಕೆರಗೋಡು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬೆಳಗ್ಗೆ 10 ಗಂಟೆಗೆ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ನಡೆಯಲಿದೆ ಎಂದು ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್‌ನ 9ನೇ ವಾರ್ಷಿಕ ಸಮ್ಮೇಳನದ ಸಮಾರೋಪ

ವಿವೇಕಾನಂದರ ಪರಿಶ್ರಮದಿಂದ ವಿದೇಶದಲ್ಲಿ ಹಿಂದೂ ಸನ್ಯಾಸಿಗಳಿಗೆ ಗೌರವ

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅಭಿಮತ



ಮೈಸೂರಿನ ಕುವೆಂಪುನಗರದಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ರಾಮಕೃಷ್ಣ–ವಿವೇಕಾನಂದ ಭಾವಪ್ರಚಾರ ಪರಿಷತ್‌ನ 9ನೇ ವಾರ್ಷಿಕ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿಯವರು ಭಾಗವಹಿಸಿ, ಮಾತನಾಡಿದರು. ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಸೇರಿದಂತೆ ರಾಜ್ಯದಲ್ಲಿನ ವಿವಿಧೆಡೆಯ ರಾಮಕೃಷ್ಣ ಆಶ್ರಮಗಳ ಅಧ್ಯಕ್ಷರು ಉಪಸ್ಥಿತರಿದ್ದರು.

ಮೈಸೂರು, ಜ.7(ಎಂಕೆ)– ನಮ್ಮಂತಹ ಹಿಂದೂ ಸನ್ಯಾಸಿಗಳಿಗೆ ವಿದೇಶಗಳಲ್ಲಿ ಒಂದಷ್ಟು ಗೌರವ ದೊರಕುತ್ತಿದೆ ಎಂದರೆ ಅದಕ್ಕೆ ಸ್ವಾಮಿ ವಿವೇಕಾನಂದರ ಪರಿಶ್ರಮ ಕಾರಣವಾಗಿದೆ ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ರಾಮಕೃಷ್ಣ–ವಿವೇಕಾನಂದ ಭಾವಪ್ರಚಾರ ಪರಿಷತ್‌ನ ಮೂರು ದಿನಗಳ 9ನೇ ವಾರ್ಷಿಕ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಶ್ರೀಗಳು, ವೇದ–ಉಪನಿಷತ್ತುಗಳು, ಲೋಕ ನೀತಿಗಳು ಕತ್ತಲೆಯಲ್ಲಿ ದಾರಿತೋರಲು ಇರುವ ಪಂಜುಗಳು. ದೇಶವೇ ದಾಸ್ಯ ಭಾವದಲ್ಲಿ ಮುಳುಗಿದ್ದ ಸಂದರ್ಭದಲ್ಲಿ ಸತ್ಯವೇ ಮೂರ್ತಿವೆತ್ತ ರೂಪದಲ್ಲಿ ಎದ್ದು ಬಂದಂತೆ ಸ್ವಾಮಿ ವಿವೇಕಾನಂದರು ಬಂದರು. ರಾಮಕೃಷ್ಣ ಪರಮಹಂಸರು ಅವರ ಹಿಂದಿನ ಶಕ್ತಿಯಾಗಿದ್ದರು. ದಿವ್ಯತ್ರಯರ ವಿಚಾರಗಳು ನಮ್ಮ ಮನಸ್ಸಿಗೆ ಬಂದರೆ ಸಾಕು. ನಮ್ಮ ಬದುಕು ಬೆಳಕಾಗುತ್ತದೆ ಎಂದರು.

ಆಲೋಚನೆಗಳು ವಿಶ್ವವನ್ನು ಆಳುತ್ತಿವೆ. ಆಲೋಚನೆಗಳು ಮಾನವೀಯ ಮೌಲ್ಯಗಳನ್ನು ಕಾಪಾಡುತ್ತವೆ. ಮನಸ್ಸಿನಲ್ಲಿರುವ ಕ್ಲೇಶಗಳು ದೂರಾಗಲು, ಉತ್ತಮ ವ್ಯಕ್ತಿತ್ವವನ್ನು ನಿರ್ಮಾಣ ಮಾಡುವ ರೀತಿಯಲ್ಲಿ ಸಹಕಾರ ನೀಡುವ ಆಲೋಚನೆಗಳು, ಯೋಚನೆಗಳು ನಮ್ಮ ಮನಸ್ಸಿಗೆ ಬರಬೇಕು. ಬದಲಾಗುತ್ತಿರುವ ಕಾಲಘಟ್ಟದಲ್ಲಿ ಮಾತಿಗೆ, ಶಬ್ದಗಳಿಗೆ, ಪುಸ್ತಕಗಳಿಗೆ ಹಾಗೂ ವಿಚಾರಗಳಿಗೆ ಬರವಿಲ್ಲ. ಆದರೆ, ನಮ್ಮಲ್ಲಿನ ಕೆಟ್ಟ ಆಲೋಚನೆಗಳನ್ನು ದೂರ ಸರಿಸುವ ವಿಚಾರಗಳ ಅವಶ್ಯವಿದೆ. ಆದ್ದರಿಂದ ದಿವ್ಯತ್ರಯರ ದಿವ್ಯ ವಾಣಿಗಳನ್ನು ಕೇಳಿ ಬದುಕಿಗೆ ಧನ್ಯತೆ ಗಳಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸ್ವಾಮಿ ವಿವೇಕಾನಂದರು ಕರ್ನಾಟಕದಲ್ಲಿ ಬಹಳಷ್ಟು ಕಡೆಗೆ ಭೇಟಿ ಕೊಟ್ಟಿದ್ದರೂ ಮೈಸೂರಿನ ಭೇಟಿ ಬಹಳ ಫಲಪ್ರದವಾಗಿದೆ. ಅವರು ಉಳಿದಿದ್ದ ಜಾಗದಲ್ಲಿ 'ವಿವೇಕ ಸ್ಮಾರಕ' ನಿರ್ಮಾಣ ಪ್ರಾರಂಭವಾಗಿದ್ದರೂ ಇಷ್ಟು ವಿಳಂಬ ಮಾಡುತ್ತಿರುವುದರಿಂದ ಯುವಕರಿಗೆ ಹಾಗೂ ನಾಡಿಗೆ ನಷ್ಟವಾಗುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಿದೆ. ವ್ಯಕ್ತಿತ್ವವನ್ನು ಹಾಳುಮಾಡುವ ಗಗನಚುಂಬಿ ಕಟ್ಟಡಗಳು ಎಲ್ಲೆಡೆ ನಿರ್ಮಾಣಗೊಳ್ಳುತ್ತಲೇ ಇವೆ. ಆದರೆ ವ್ಯಕ್ತಿತ್ವವನ್ನು ಕಟ್ಟುವ ಸ್ಮಾರಕಗಳ ನಿರ್ಮಾಣಕ್ಕೆ ವಿಘ್ನಗಳು ಎದುರಾಗುತ್ತಿವೆ. ಒಳ್ಳೆಯ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಪ್ರೇರಣೆ ನೀಡುವವರೇ ಕಡಿಮೆ. ಇಂತಹ ಸಂದರ್ಭದಲ್ಲಿ ಯುವಕರ ಭಾವನೆಗಳನ್ನು ಶುದ್ಧೀಕರಿಸುವ 'ವಿವೇಕ ಸ್ಮಾರಕ' ದಿಂದ ದೇಶ ಕಟ್ಟುವ ಕೆಲಸವಾಗಲಿದೆ ಎಂದು ಹೇಳಿದರು. ವಿವೇಕಾನಂದರಿಂದ ಪ್ರೇರಿತರಾದ ಕೆ.ಹೆಚ್. ರಾಮಯ್ಯ ಅವರು, ಸುಮಾರು 1905–06ರಲ್ಲಿ ಕೇಂದ್ರ ಒಕ್ಕಲಿಗರ ಸಂಘ ಕಟ್ಟಿದರು. ಅದರಂತೆ ಮೈಸೂರಿಗೆ ಬಂದಿದ್ದ ವಿವೇಕಾನಂದರು, ಭೈರವಿ ಕೆಂಪೇಗೌಡರಲ್ಲಿದ್ದ ಪ್ರತಿಭೆಯನ್ನು ಗುರ್ತಿಸಿ, ಇಂತಹ ಕಲಾರತ್ನವನ್ನು ಪೋಷಿಸುವಂತೆ ಮಹಾರಾಜರಿಗೆ ತಿಳಿಸಿದ್ದರು. ಈ ರೀತಿಯಾಗಿ ಯುವಕರಿಗೆ ಸಕಾಲದಲ್ಲಿ ಒಳ್ಳೆಯ ವಿಚಾರಗಳನ್ನು ತಿಳಿಸುವ ಕೆಲಸವನ್ನು ಒಂದು ಸಂಸ್ಥೆ ಮಾಡಿದರೆ, ಅದರಿಂದ ಪ್ರಭಾವಿತರಾದ ಯುವಕರು ದೇಶಕ್ಕೆ ಬೆಳಕನ್ನು ತರುವ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

'ವಿವೇಕ ಸ್ಮಾರಕ' ಆದಷ್ಟು ಬೇಗ ಪೂರ್ಣಗೊಳ್ಳಲಿ...

ಮೈಸೂರಿನಲ್ಲಿ ನಿರ್ಮಾಣವಾಗುತ್ತಿರುವ 'ವಿವೇಕ ಸ್ಮಾರಕ' ಆದಷ್ಟು ಬೇಗ ಪೂರ್ಣಗೊಂಡು ನಾಡಿನ ಯುವಕರ ಬದುಕನ್ನು ಕಟ್ಟುವ ಕೆಲಸವಾಗಲಿ. ಈ ಸತ್ಕಾರ್ಯಕ್ಕೆ ಶ್ರೀ ಆದಿಚುಂಚನಗಿರಿ ಮಠವು ರಾಮಕೃಷ್ಣ ಆಶ್ರಮದ ಜೊತೆಗಿರಲಿದೆ.

- ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಗಮಕ ವಾಚನ: ಬಳಿಕ ವಿದ್ವಾನ್ ಮತ್ತೂರು ಕುಮಾರಸ್ವಾಮಿ ಅವರಿಂದ 'ಕುಮಾರವ್ಯಾಸ ಭಾರತ'ದ 'ಪಾಶುಪತಾಸ್ತ್ರ ಪ್ರಾಪ್ತಿ' ಪ್ರಸಂಗದ ಗಮಕ ವಾಚನ ಕಾರ್ಯಕ್ರಮ ನಡೆಯಿತು. ಇದೇ ಹೋಟೆಲ್ ಉದ್ಯಮಿ ಗೋವಿಂದೇಗೌಡ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಗದಗ–ವಿಜಯಪುರದ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದ ಸರಸ್ವತಿ, ದಾವಣಗೆರೆ ರಾಮಕೃಷ್ಣ ಮಿಷನ್‌ನ ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ್, ಹಲಸೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಬೋಧಸ್ವರೂಪಾನಂದಜೀ ಮಹಾರಾಜ್, ಆಂಧ್ರಪ್ರದೇಶ ವಿಜಯವಾಡದ ರಾಮಕೃಷ್ಣ ಮಿಷನ್ ಅಧ್ಯಕ್ಷರಾದ ಸ್ವಾಮಿ ವಿನಿಶ್ಚಲಾನಂದಜೀ ಮಹಾರಾಜ್, ರಾಣೆಬೆನ್ನೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಪ್ರಕಾಶನಂದಜೀ ಮಹಾರಾಜ್, ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ವೀರೇಶಾನಂದ ಸರಸ್ವತಿ, ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಚಿದಾನಂದಗೌಡ, ಮಾಜಿ ಮೇಯರ್ ಸುನಂದಾ ಪಾಲನೇತ್ರ, ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಮಹಿಳೆಯರ ಶಿಕ್ಷಣಕ್ಕೆ ಮುನ್ನುಡಿ ಬರೆದವರು ಸಾವಿತ್ರಿಬಾಯಿ ಫುಲೆ


ಮೈಸೂರಿನ ಚಾಮುಂಡಿಬೆಟ್ಟದಲ್ಲಿನ ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ಬಾಲಕಿಯರ ವಸತಿ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ಸಾವಿತ್ರಿಬಾಯಿ ಫುಲೆ ಜಯಂತಿಯಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಜ.7(ಎಸ್‌ಬಿಡಿ)– ಶೋಷಿತರು ಹಾಗೂ ಮಹಿಳೆಯರ ಶಿಕ್ಷಣಕ್ಕೆ ಮುನ್ನುಡಿ ಬರೆದವರು ಅಕ್ಷರದ ಜಗಜ್ಜನನಿ ಸಾವಿತ್ರಿಬಾಯಿ ಫುಲೆ ಎಂದು ಸಾಹಿತಿ ಬನ್ನೂರು ಕೆ.ರಾಜು ತಿಳಿಸಿದರು.

ಮೈಸೂರಿನ ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗದ ವತಿಯಿಂದ ಚಾಮುಂಡಿಬೆಟ್ಟದಲ್ಲಿನ ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ಬಾಲಕಿಯರ ವಸತಿ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ದೇಶದ ಮೊದಲ ಶಿಕ್ಷಕಿ, ಅಕ್ಷರ ಮಾತೆ ಸಾವಿತ್ರಿಬಾಯಿ ಫುಲೆ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶತಮಾನಗಳ ಹಿಂದೆ ಮೌಢ್ಯಗಳ ಆಚರಣೆಯಿಂದ ಅಂಧಕಾರವೇ ತುಂಬಿದ್ದ, ಜಾತಿ, ಮತ, ಪಂಥಗಳೆಂಬ ಅಸಮಾನತೆಯ ಪುರುಷ ಪ್ರಧಾನ ಸಮಾಜದಲ್ಲಿ ಬೆಂದರೂ ಸಾವಿತ್ರಿಬಾಯಿ ಫುಲೆ ಅವರು ಅಕ್ಷರ ವಂಚಿತರ ಎದೆಯಲ್ಲಿ ಅಕ್ಷರದ ಬೀಜ ಬಿತ್ತಿದರು. ಶೋಷಿತರ ಮತ್ತು ಮಹಿಳೆಯರ ಶಿಕ್ಷಣಕ್ಕೆ ಮುನ್ನುಡಿ ಬರೆಯುವ ಮೂಲಕ ಅಕ್ಷರದ ಜಗಜ್ಜನನಿಯಾದರು ಎಂದು ಬಣ್ಣಿಸಿದರು.

ಅಕ್ಷರದ ಅರಿವಿಲ್ಲದೆ ಮನುಷ್ಯರು ಪ್ರಾಣಿಗಳಂತೆ ಬದುಕುತ್ತಿದ್ದ ಕಾಲಘಟ್ಟದಲ್ಲಿ ಸಾವಿತ್ರಿಬಾಯಿ ಫುಲೆ ಅವರು ತಮ್ಮ ಪತಿ ಜ್ಯೋತಿ ಬಾಫುಲೆ ಮಾರ್ಗದರ್ಶನದಲ್ಲಿ ಅಕ್ಷರ ಕಲಿತು, ಭಾರತದ ಮೊಟ್ಟ ಮೊದಲ ಶಿಕ್ಷಕಿ ಎನಿಸಿಕೊಂಡರು. ಇತರ ಅನಕ್ಷರಸ್ಥರಿಗೂ ಅದರಲ್ಲೂ ವಿಶೇಷವಾಗಿ ಸ್ತ್ರೀಯರಿಗೆ ಶಿಕ್ಷಣ ನೀಡಲು ಮುಂದಾಗಿದ್ದು ಆ ಕಾಲದ ಬಹುದೊಡ್ಡ ಕ್ರಾಂತಿಕಾರಿ ನಡೆಯಾಗಿತ್ತು. ಸಾವಿತ್ರಿಬಾಯಿ ಫುಲೆಯವರ ಚರಿತ್ರಾರ್ಹ ಸಾಧನೆ ಒಂದೂವರೆ ಶತಮಾನಕ್ಕೂ ಹೆಚ್ಚು ಕಾಲ ಸರಿಯಾಗಿ ಬೆಳಕಿಗೆ ಬಾರದೆ ಹೂತು ಹೋಗಿತ್ತು. ಬಾಬಾ ಸಾಹೇಬ್ ಅಂಬೇಡ್ಕರರು ಸಾವಿತ್ರಿ ಬಾ ಫುಲೆ ದಂಪತಿಯ ಸಾಹಸ ಗಾಥೆಯ ಪುಟಗಳನ್ನು ಹೊರತೆಗೆದಾಗಿನಿಂದ ಇಡೀ ದೇಶವೇ ಅಕ್ಷರದವ್ವ ಸಾವಿತ್ರಿಬಾಯಿ ಫುಲೆಯ ಸಮಾಜ ಸುಧಾರಣೆಯನ್ನು ಕೊಂಡಾಡುತ್ತಿದೆ ಎಂದರು.

ವಿಧವಾ ವಿವಾಹ, ಬಾಲ್ಯ ವಿವಾಹ, ಹೆಣ್ಣು ಭ್ರೂಣ ಹತ್ಯೆ, ಸತಿ ಪದ್ಧತಿ, ವರದಕ್ಷಿಣೆ, ದೇವದಾಸಿ ಸಮಸ್ಯೆ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ಸಾವಿತ್ರಿಬಾಯಿ ಫುಲೆ ಅವರು ಧ್ವನಿಯೆತ್ತಿದ್ದರು. ಇವರಿಗೆ ಬೆಂಬಲವಾಗಿದ್ದ ಶ್ರೇಷ್ಠ ಸಮಾಜ ಸುಧಾರಕ ಜ್ಯೋತಿ ಬಾ ಫುಲೆ ಅವರನ್ನೂ ಸ್ಮರಿಸಬೇಕು ಎಂದು ಹೇಳಿದರು. ಸಂಖ್ಯಾಶಾಸ್ತ್ರಜ್ಞ ಎಸ್.ಜಿ.ಸೀತಾರಾಂ ಹಾಗೂ ಚಿತ್ರ ಕಲಾವಿದೆ, ಲೇಖಕಿ ಡಾ.ಜಮುನಾರಾಣಿ ಮಿರ್ಲೆ ಮಾತನಾಡಿದರು. ಇದೇ ಸಂದರ್ಭದಲ್ಲಿ ಸಾವಿತ್ರಿ ಬಾಯಿ ಫುಲೆ ಹೆಸರಿನಲ್ಲಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಾದ ಹೆಚ್.ಎಸ್.ವರ್ಷಿಣಿ, ಬಿಂದುಶ್ರೀ, ನೇತ್ರಾವತಿ(ಭಾಷಣ ಸ್ಪರ್ಧೆ), ಲಲಿತಾ ಪರಮೇಶ್ವರಿ, ಶ್ರೀದೇವಿ, ವೈಷ್ಣವಿ(ಗಾಯನ), ಎನ್.ಜನನಿ, ಸಂಜನಾ ಹಾಗೂ ಅಶ್ವಿನಿ(ಚಿತ್ರ ಕಲೆ)ಗೆ ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ ಬಹುಮಾನ ವಿತರಿಸಿದರು. ಮುಖ್ಯ ಶಿಕ್ಷಕ ಡಿ.ಕೃಷ್ಣಮೂರ್ತಿ ಅವರನ್ನು ಸನ್ಮಾನಿಸಲಾಯಿತು.

ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ಶಿಕ್ಷಕರಾದ ಎಸ್.ಪಿ.ಪ್ರಭುಲಿಂಗ ಸ್ವಾಮಿ, ಸೋಮಶೇಖರ್, ಅರುಂಧತಿ ಮತ್ತಿತರರು ಉಪಸ್ಥಿತರಿದ್ದರು.

ಮಧ್ಯಂತರದಲ್ಲಿ ಶಾಲೆ ಬಿಟ್ಟಿರುವ ಮಕ್ಕಳಿಗೆ ಕರ್ನಾಟಕ ಮುಕ್ತ ವಿದ್ಯಾಲಯ ವರದಾನ

ಮೈಸೂರು, ಜ.7– ಕರ್ನಾಟಕ ಮುಕ್ತ ವಿದ್ಯಾಲಯದ ರಾಜ್ಯ ಮಟ್ಟದ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳ ಸಭೆಯನ್ನು ಏರ್ಪಡಿಸಲಾಗಿತ್ತು. ಡಿ.ಎಸ್.ಇ.ಆರ್.ಟಿ. ಹಿರಿಯ ಸಹಾಯಕ ನಿರ್ದೇಶಕ ಆರ್. ಮಂಜುನಾಥ್ ಸಭೆ ಉದ್ಘಾಟಿಸಿ ಮಾತನಾಡಿ, ಕರ್ನಾಟಕ ಮುಕ್ತ ವಿದ್ಯಾಲಯ ಜೆಎಸ್‌ಎಸ್ ಮಹಾವಿದ್ಯಾಪೀಠದ ಒಂದು ಅಂಗಸಂಸ್ಥೆಯಾಗಿ ನಿರ್ವಹಿಸುತ್ತಿರುವ ಕಾರ್ಯವು ಶ್ಲಾಘನೀಯವಾದುದು. ನಾನಾ ಕಾರಣಗಳಿಂದ ಮಧ್ಯಂತರದಲ್ಲಿ ಶಾಲೆ ಬಿಟ್ಟಿರುವ ಸಾವಿರಾರು ವಿದ್ಯಾರ್ಥಿಗಳನ್ನು ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಹಂತದ 10ನೇ ಮತ್ತು 12ನೇ ತರಗತಿಗೆ ನೇರವಾಗಿ ದಾಖಲಾತಿ ಮಾಡಿಸುವ ಮೂಲಕ ಅವರನ್ನು ಸಮಾಜದ ಶೈಕ್ಷಣಿಕ ಪ್ರಕ್ರಿಯೆ ವಾಹಿನಿಗೆ ಸೇರ್ಪಡೆ ಮಾಡಲು ರಾಜ್ಯದಲ್ಲಿರುವ ಎಲ್ಲಾ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ವ್ಯಾಪಕ ಕಾರ್ಯಯೋಜನೆಯನ್ನು ಹಮ್ಮಿಕೊಳ್ಳಬೇಕೆಂದು ತಿಳಿಸಿದರು.

ಕರ್ನಾಟಕ ಮುಕ್ತ ವಿದ್ಯಾಲಯದ ಮುಖ್ಯಸ್ಥ ಸಿ.ಎಸ್. ಶಿವಸ್ವಾಮಿ, ವಿದ್ಯಾಲಯ ಬೆಳವಣಿಗೆಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು. 2024–25ನೇ ಸಾಲಿನಲ್ಲಿ ಕರ್ನಾಟಕ ಮುಕ್ತ ವಿದ್ಯಾಲಯವು ರಜತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ವಿದ್ಯಾಲಯಗಳ ಕಲಿಕಾ ಕೇಂದ್ರಗಳ ಅಭಿವೃದ್ಧಿಗೆ ಮಾರ್ಗೋಪಾಯಗಳನ್ನು ಸೂಚಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ಪ್ರಭಾರ ನಿರ್ದೇಶಕ ಕೆ.ಎಲ್. ರೇವಣ್ಣಸ್ವಾಮಿ ವಹಿಸಿದ್ದರು.


ಮೈಸೂರಿನ ಗಾನಭಾರತಿ ವೀಣೆಶೇಷಣ್ಣ ಭವನದ ರಮಾಗೋವಿಂದ ಕಲಾವೇದಿಕೆಯಲ್ಲಿ ನಾಗರಿಕ ವೇದಿಕೆ ಹಾಗೂ ಪೂರ್ಣಪ್ರಜ್ಞಾ ವಿದ್ಯಾಕೇಂದ್ರದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ವೇದಿಕೆಯ ಹಿರಿಯ ಸದಸ್ಯರಾದ ಎನ್.ಗಿರೀಗೌಡ, ಬಿ.ಕೆ. ಜಯರಾಂ, ಸೋಮಣ್ಣ, ಎಸ್.ಎಸ್. ಮಹೇಂದ್ರ, ಎಂ.ರಾಮಯ್ಯ, ಎಂ. ರಾಮೇಗೌಡ, ರಾಮಕೃಷ್ಣಯ್ಯ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯ ಗೌರವಾಧ್ಯಕ್ಷ ಬಿ.ಪಿ.ಪುಟ್ಟಸ್ವಾಮಿ, ಕಾರ್ಯಾಧ್ಯಕ್ಷ ಕೆ.ಆರ್.ಶ್ರೀರಂಗಯ್ಯ, ಚಲನಚಿತ್ರ ನಟರಾದ ಸಂತೋಷ ಬಿಲ್ಲವ, ಸಾತ್ವಿಕಾ, ಉಪಾಧ್ಯಕ್ಷ ಹೆಚ್.ಅರವಿಂದ, ಕಾರ್ಯದರ್ಶಿ ಕುಳ್ಳೇಗೌಡ, ಜಂಟಿ ಕಾರ್ಯದರ್ಶಿ ಬಿ.ಶ್ರೀಕಾಂತ್, ಖಜಾಂಚಿ ಎಸ್.ಪಿ. ತ್ಯಾಗರಾಜು, ಶಾಲಾ ಸಮಿತಿ ಅಧ್ಯಕ್ಷ ಜೆ.ಲೋಕೇಶ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಸಮ್ಮೇಳನದಲ್ಲಿ ಕೊಡಗಿನ ಸಂಸ್ಕೃತಿ ಸಿರಿ ಆಕರ್ಷಣೆ



ಬೆಂಗಳೂರಿನಲ್ಲಿ ನಡೆದ ಅಸೋಸಿಯೇಷನ್ ಆಫ್ ಓಟೋಲರಿಂಗೋಲಜಿಸ್ಟ್ ಆಫ್ ಇಂಡಿಯಾದ ರಾಷ್ಟ್ರೀಯ ಸಮ್ಮೇಳನದಲ್ಲಿ ಆಕರ್ಷಿಸಿದ ಕೊಡಗಿನ ಸಂಸ್ಕೃತಿ ಸಿರಿ.

ಮಡಿಕೇರಿ, ಜ.7– ಬೆಂಗಳೂರಿನಲ್ಲಿ ನಡೆದ ಅಸೋಸಿಯೇಷನ್ ಆಫ್ ಓಟೋಲರಿಂಗೋಲಜಿಸ್ಟ್ ಆಫ್ ಇಂಡಿಯಾದ 75ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಕೊಡಗಿನ ಸಂಸ್ಕೃತಿ ಸಿರಿ ಆಕರ್ಷಿಸಿತು.

ಬೆಂಗಳೂರಿನ ಸ್ವಿಸ್ ಟೌನ್‌ನ ಕ್ಲಾಕ್ಸ್ ಎಕ್ಸೋಟಿಕಾ ಸೆಂಟರ್‌ನಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕೊಡಗಿನ ಸಂಸ್ಕೃತಿ ಬಿಂಬಿಸುವ ಮದುಮಗ, ಮದುಮಗಳು, ಬಿಳಿ ಮತ್ತು ಕಪ್ಪು ಕುಪ್ಯಾಧಾರಿಗಳು ಗಮನ ಸೆಳೆದರು. ಕೊಡವ ಸಂಸ್ಕೃತಿಯ ಆಭರಣಗಳ ವಿವರಣೆ ಸಹಿತ ಫ್ಯಾಶನ್ ಶೋ, ಕೊಡವ ಹಾಡಿನ ನೃತ್ಯ, ವಾಲಗ ನೃತ್ಯ, ಕೊಡಗಿನ ನಟಿ ಈರಮಂಡ ಹರಿಣಿ ವಿಜಯ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸ್ಕೃತಿ ಸಿರಿ ಬಳಗ ಮೂರ್ನಾಡುವಿನ ಸದಸ್ಯರಾದ ತೋರೆರ ನಳಿನಿ ಅಯ್ಯಪ್ಪ, ಕೋಲೆಯಂಡ ನಿಶಾ ಮೋಹನ್, ಹೈಕೋರ್ಟ್ ನ್ಯಾಯವಾದಿ ಆನೇಡ ಹರೀಶ್ ಗಣಪತಿ, ತೋತಿಯಂಡ ಕಿರಣ್ ಸೋಮಣ್ಣ, ಅಮ್ಮಾಟಂಡ ದೇವಯ್ಯ, ವಿಂದ್ಯಾ ದೇವಯ್ಯ ಸೇರಿದಂತೆ 25 ಮಂದಿಯ ತಂಡ ಕೊಡವ ಸಂಸ್ಕೃತಿಯನ್ನು ಪ್ರತಿಬಿಂಬಿಸಿ ನೆರೆದಿದ್ದ ಗಣ್ಯರು ಹಾಗೂ ವೈದ್ಯ ಪ್ರತಿನಿಧಿಗಳ ಪ್ರಶಂಸೆಗೆ ಪಾತ್ರವಾಯಿತು.

ಕೊಡಗಿನ ಸಂಸ್ಕೃತಿಯನ್ನು ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರದರ್ಶಿಸಿ ಯಶಸ್ವಿಯಾದ ಬಗ್ಗೆ ಆಯೋಜಕರಾದ ಡಾ.ಮೋಹನ್ ಅಪ್ಪಾಜಿ, ಹರಿಣಿ ವಿಜಯ್ ಹಾಗೂ ಈರಮಂಡ ವಿಜಯ್ ಹರ್ಷ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಈರಮಂಡ ಹರಿಣಿ ವಿಜಯ್ ದಂಪತಿಯನ್ನು ಅಸೋಸಿಯೇಷನ್ ಆಫ್ ಓಟೋಲರಿಂಗೋಲಜಿಸ್ಟ್ ಆಫ್ ಇಂಡಿಯಾದ ವೈದ್ಯ ಪ್ರಮುಖರು ಸನ್ಮಾನಿಸಿದರು. ಮುಂದಿನ ದಿನಗಳಲ್ಲಿ ನಡೆಯುವ ವೈದ್ಯರ ರಾಜ್ಯ ಮಟ್ಟದ ಸಮ್ಮೇಳನಕ್ಕೆ ಸಂಸ್ಕೃತಿ ಸಿರಿ ತಂಡ ಆಯ್ಕೆಗೊಂಡಿತು.

ಸಮ್ಮೇಳನದಲ್ಲಿ ಕೊಡಗಿನ ಹಿರಿಯ ವೈದ್ಯ ಡಾ.ಕೋಲೆಯಂಡ ಮೋಹನ್ ಅಪ್ಪಾಜಿ, ಬೆಂಗಳೂರು ಜಯದೇವ ಆಸ್ಪತ್ರೆಯ ಮುಖ್ಯಸ್ಥ ಡಾ.ಮಂಜುನಾಥ್, ಪ್ರೊ.ಡಾ.ವಿಜಯೇಂದ್ರ ಹೊನ್ನೂರಪ್ಪ, ಡಾ.ಹರಿಹರ ಮೂರ್ತಿ ಸೇರಿ 2000ಕ್ಕೂ ಅಧಿಕ ವೈದ್ಯರು ಪಾಲ್ಗೊಂಡಿದ್ದರು.

ಅಕಾಲಿಕ ಮಳೆಯಿಂದ ಬೆಳೆಗಾರರಿಗೆ ಸಂಕಷ್ಟ

• ಗದ್ದೆಯಲ್ಲೇ ಭತ್ತದ ಮೊಳಕೆ • ಕಾಫಿ ಹಣ್ಣು ಉದುರುವ ಆತಂಕ





ಮಡಿಕೇರಿ, ಜ.7– ಹವಾಮಾನ ವೈಪರೀತ್ಯದಿಂದ ಕೊಡಗು ಜಿಲ್ಲೆಯ ವಿವಿಧೆಡೆ ಕಳೆದ ಎರಡು ಮೂರು ದಿನಗಳಿಂದ ಸುರಿಯುತ್ತಿರುವ ಅಕಾಲಿಕ ಮಳೆಯಿಂದ ಕಾಫಿ ಮತ್ತು ಭತ್ತದ ಬೆಳೆಗಾರರು ಸಂಕಷ್ಟಕ್ಕೀಡಾಗಿದ್ದಾರೆ.

ಅಕಾಲಿಕವಾಗಿ ಸುರಿಯುತ್ತಿರುವ ತುಂತುರು ಮಳೆ ಮತ್ತು ಮೋಡ ಕವಿದ ವಾತಾವರಣದಿಂದ ಭತ್ತ ಕಟಾವಿಗೆ ತೀವ್ರ ತೊಂದರೆಯಾಗಿದ್ದು, ರೈತರಲ್ಲಿ ಆತಂಕ ಮೂಡಿಸಿದೆ. ಕೊಡಗಿನ ಅರೆಮಲೆನಾಡು ಭಾಗವಾದ ಕುಶಾಲನಗರ ತಾಲೂಕಿನಾದ್ಯಂತ ಎರಡು ದಿನಗಳಿಂದ ಮೋಡ ಮುಸುಕಿದ ವಾತಾವರಣವಿದ್ದು, ಆಗಾಗ್ಗೆ ಬೀಳುತ್ತಿರುವ ತುಂತುರು ಮಳೆ ರೈತರನ್ನು ಕಂಗೆಡಿಸಿದೆ. ಕೂಡಿಗೆ ಮತ್ತು ಹೆಬ್ಬಾಲೆ ವ್ಯಾಪ್ತಿಯಲ್ಲಿ ಭತ್ತದ ಬೆಳೆಗಾರರು ಕಂಗಾಲಾಗುವಂತೆ ಮಾಡಿದೆ.

ಕೆಲ ವರ್ಷಗಳಿಂದ ಭತ್ತ ಬೆಳೆಯಲು ಅಧಿಕ ಖರ್ಚಾಗುತ್ತಿರುವುದರಿಂದ ಸಾಕಷ್ಟು ರೈತರು ಬೆಳೆ ಬೆಳೆಯಲು ಹಿಂದೇಟು ಹಾಕುತ್ತಿದ್ದರು. ಈ ಬಾರಿ ಸಾಕಷ್ಟು ಮಳೆಯಾಗದೆ ಬರದ ಪರಿಸ್ಥಿತಿ ಎದುರಾಗಿದೆ. ಹೀಗಾಗಿ ಭತ್ತದ ಬೆಳೆ ಪ್ರದೇಶ ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದೆ. ಬರ ಪರಿಸ್ಥಿತಿಯ ನಡುವೆಯೂ ಕಷ್ಟಪಟ್ಟು ಬೆಳೆದ ಬೆಳೆ ಕಟಾವಿನ ಹಂತದಲ್ಲಿ ಉಂಟಾಗಿರುವ ಹವಾಮಾನ ವೈಪರೀತ್ಯದಿಂದ ಕೈಗೆ ಬಂದ ತುತ್ತು ಬಾಯಿಗಿಲ್ಲ ಎಂಬಂತಾಗಿದೆ. ಈಗಾಗಲೇ ಕಟಾವು ಮಾಡಿರುವ ಭತ್ತದ ಬೆಳೆಯನ್ನು ಗದ್ದೆಯಲ್ಲೇ ಬಿಡಲಾಗಿದ್ದು, ಮಳೆಯಿಂದ ಭತ್ತ ಮೊಳಕೆ ಬರುವ ಭೀತಿ ರೈತಾಪಿ ವರ್ಗವನ್ನು ಕಾಡುತ್ತಿದೆ.

ದೊಡ್ಡ ಸಾಹಸ: ಇದೀಗ ಅಕಾಲಿಕ ಮಳೆ ಸುರಿಯುತ್ತಿರುವುದು ಕಾಫಿ ಬೆಳೆಗಾರರನ್ನು ಕಂಗಾಲಾಗಿಸಿದೆ. ಒಂದೆಡೆ ಕುಯ್ಲು ಮಾಡಿರುವ ಕಾಫಿ ಹಣ್ಣನ್ನು ಒಣಗಿಸುವುದು ಸವಾಲಾಗಿದೆ. ಯಾವುದೋ ಹೊತ್ತಿನಲ್ಲಿ ಸುರಿಯುವ ಮಳೆಯಿಂದ ಒಣ ಹಾಕಿದ ಕಾಫಿ ಹಣ್ಣುಗಳನ್ನು ರಕ್ಷಿಸಿಕೊಳ್ಳುವುದು ಒಂದು ದೊಡ್ಡ ಸಾಹಸವಾಗಿದೆ.

ಮತ್ತೊಂದೆಡೆ ಮಳೆಗೆ ಗಿಡದಲ್ಲಿ ಹಣ್ಣಾಗಿರುವ ಕಾಫಿ ಉದುರುವ ಆತಂಕ ಇದೆ. ಅದರೊಂದಿಗೆ ಮಳೆಯಿಂದಾಗಿ ಹಣ್ಣು ಇರುವ ಗಿಡಗಳಲ್ಲಿ ಕಾಫಿ ಹೂವು ಕಟ್ಟುವ ಎಲ್ಲಾ ಲಕ್ಷಣಗಳು ಕೂಡ ಕಂಡು ಬರುತ್ತಿವೆ. ಹೀಗಾದಲ್ಲಿ ಅತ್ತ ಹಣ್ಣಾದ ಕಾಫಿಯನ್ನು ಕುಯ್ಲು ಮಾಡಲಾಗದ ಅತಂತ್ರ ಸ್ಥಿತಿಯಲ್ಲಿ ಬೆಳೆಗಾರರು ಸಿಲುಕಿಕೊಳ್ಳಲಿದ್ದಾರೆ.

ಶಿಕ್ಷಣದಿಂದ ಮಾತ್ರ ದೇಶದ ಪ್ರಗತಿ ಸಾಧ್ಯ: ಕೆ.ಜಿ. ಬೋಪಯ್ಯ



ವಿರಾಜಪೇಟೆ ಬಳಿಯ ಬಿಟ್ಟಂಗಾಲದ ಯಜ್ಞ ಟವರ್ ಮುಂಭಾಗದ ಆವರಣದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಉತ್ಸವ ಹಾಗೂ ಚಿಣ್ಣರ ಕಲಾಕೂಟದ ಸಮಾರಂಭದಲ್ಲಿ ಮಾಜಿ ಶಾಸಕ ಕೆ.ಜಿ.ಬೋಪಯ್ಯ, ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ವನಜಾಕ್ಷಿ, ಪೂಜಾ ಸಜೇಶ್, ರೆಮೋ, ಪ್ರಥಮ್ ಮತ್ತಿತರರು ಇದ್ದರು.

ವಿರಾಜಪೇಟೆ, ಜ.7–ಉತ್ತಮ ಶಿಕ್ಷಣದಿಂದ ಮಾತ್ರ ದೇಶ ಮುಂದುವರೆಯಲು ಸಾಧ್ಯ. ಆದ್ದರಿಂದ ವಿದ್ಯಾರ್ಥಿಗಳು ಸಿಗುವ ವೇದಿಕೆಯ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವಂತಾಗಬೇಕು ಎಂದು ಮಾಜಿ ಶಾಸಕ ಕೆ.ಜಿ.ಬೋಪಯ್ಯ ಹೇಳಿದರು.

ವಿರಾಜಪೇಟೆ ಬಳಿಯ ಬಿಟ್ಟಂಗಾಲದ ಯಜ್ಞ ಟವರ್ ಮುಂಭಾಗದ ಆವರಣದಲ್ಲಿ ಲಿಟಲ್ ಸ್ಕಾಲರ್ಸ್ ಅಕಾಡೆಮಿ ಆಂಗ್ಲ ಮಾಧ್ಯಮ ಶಾಲೆ ಮತ್ತು ಇಂಟೋಪೀಸ್ ಡ್ಯಾನ್ಸ್ ಸ್ಟುಡಿಯೋ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ ಸಾಂಸ್ಕೃತಿಕ ಉತ್ಸವ ಹಾಗೂ ಚಿಣ್ಣರ ಕಲಾಕೂಟದ ಸಮಾರಂಭದಲ್ಲಿ ಮಾತನಾಡಿದ ಅವರು, ಖಾಸಗಿ ವಿದ್ಯಾಸಂಸ್ಥೆಗಳ ಆಡಳಿತ ಮಂಡಳಿ ಉತ್ತಮ ಶಿಕ್ಷಣಕ್ಕೆ ಒತ್ತು ನೀಡುವ ಮೂಲಕ ಎಲೆ ಮರೆಯ ಕಾಯಿಯಂತಿರುವ ಮಕ್ಕಳ ಪ್ರತಿಭೆಯನ್ನು ಹೊರತರಲು ವೇದಿಕೆ ಕಲ್ಪಿಸುವುದು ಉತ್ತಮ ಕಾರ್ಯ. ಅದೇ ರೀತಿ ಸರ್ಕಾರಿ ಶಾಲೆಯ ಮಕ್ಕಳಿಗೂ ಇಂತ ಅವಕಾಶಗಳು ದೊರಕುವಂತಾಗಲಿ ಎಂದರು.

ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮಾತನಾಡಿ, ಮಕ್ಕಳಿಗೆ ಶಿಕ್ಷಣ ಎಷ್ಟು ಮುಖ್ಯವೋ, ಹಾಗೆ ಕ್ರೀಡೆ, ಕಲೆ, ಸಾಹಿತ್ಯವೂ ಅಷ್ಟೇ ಮುಖ್ಯ. ವಿದ್ಯಾರ್ಥಿಗಳು ಗುರು–ಹಿರಿಯರಿಗೆ ಗೌರವ ನೀಡುವ ಮೂಲಕ ಕ್ರೀಡಾಕೂಟಗಳಲ್ಲಿ ಭಾಗವಹಿಸುವಂತಾಗಬೇಕು. ಇದಕ್ಕೆ ಪೋಷಕರ ಸಹಕಾರ ಅಗತ್ಯ. ಶಿಕ್ಷಕರು ಮಕ್ಕಳನ್ನು ತಿದ್ದಿ ಅವರಲ್ಲಿರುವ ಪ್ರತಿಭೆಯನ್ನು ಅರಿತು ಭವಿಷ್ಯ ರೂಪಿಸುವ ಮೂಲಕ ದೇಶದ ಉತ್ತಮ ಪ್ರಜೆಯನ್ನಾಗಿ ಮಾಡುವಂತಾಗಲಿ ಎಂದು ತಿಳಿಸಿದರು.

ಶಿಕ್ಷಣ ಇಲಾಖೆಯ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ವನಜಾಕ್ಷಿ, ಲಿಟಲ್ ಶಾಲಾ ಅಕಾಡೆಮಿ ಅಧ್ಯಕ್ಷೆ ಪೂಜಾ ಸಜೇಶ್ ಮಾತನಾಡಿದರು. ಇದೇ ವೇಳೆ ಮಜಾ ಟಾಕೀಸ್ ಖ್ಯಾತಿಯ ರೆಮೋ, ಬಿಗ್‌ಬಾಸ್ ಖ್ಯಾತಿಯ ಪ್ರಥಮ್ ತಮ್ಮ ಮಾತಿನಲ್ಲಿ ಪ್ರೇಕ್ಷಕರನ್ನು ರಂಜಿಸಿದರು. ಶಾಲಾ ಆಡಳಿತ ಮಂಡಳಿಯ ಕಾರ್ಯದರ್ಶಿ ಪ್ರತಿಮಾ ರಂಜನ್, ಸಜೇಶ್ ಭರತ್, ಡ್ಯಾನ್ಸ್ ಶಿಕ್ಷಕ ವಿಷ್ಣು, ಮುಖ್ಯ ಶಿಕ್ಷಕಿ ಮೀರಾ ಪೊಣಚ್ಚ, ಸ್ವಾತಿ, ಅರುಣ್, ಪ್ರತಿಮಾ ಮುಂತಾದವರು ಉಪಸ್ಥಿತರಿದ್ದರು. ಚಿಣ್ಣರ ಕಲಾ ಕೂಟದಲ್ಲಿ ಕೊಡಗಿನ 33 ಶಾಲೆಗಳಿಂದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಭಾಗವಹಿಸಿದ್ದ ಎಲ್ಲಾ ಶಾಲಾ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ನೇಣು ಬಿಗಿದ ಸ್ಥಿತಿಯಲ್ಲಿ ಶವ ಪತ್ತೆ

ಕುಶಾಲನಗರ, ಜ.7–ಕೂಡುಮಂಗಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕತ್ತೂರು ಗ್ರಾಮದಲ್ಲಿ ವ್ಯಕ್ತಿಯ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಕುಮುಟಾ ಮೂಲದ ಪ್ರವೀಣ್ ಎಂದು ಗುರುತಿಸಲಾಗಿದ್ದು, ಈತ ಹಾರಂಗಿ ಹಿನ್ನೀರಿನ ಖಾಸಗಿಯ ವಾಟರ್ ಅಡ್ವೆಂಚರ್ ಅನ್ನು ನಿರ್ವಹಣೆ ಮಾಡುತ್ತಿದ್ದ. ಚಿಕ್ಕತ್ತೂರು ಗ್ರಾಮದ ಲಿಖಿತಾ ಎಂಬವರ ಮನೆಯಲ್ಲಿ ಒಬ್ಬನೇ ಬಾಡಿಗೆ ಇದ್ದ ಎನ್ನಲಾಗಿದೆ. ಹಿಂದಿನ ರಾತ್ರಿ ಕೆಲವರು ಈತನ ನಿವಾಸಕ್ಕೆ ಬಂದು ಹೋಗಿರುವುದು ಗೊತ್ತಾಗಿದ್ದು, ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಈತನ ಸಾವಿನ ಬಗ್ಗೆ ತನಿಖೆ ಕೈಗೊಂಡಿದ್ದಾರೆ.

ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರ ಪ್ರತಿಭಟನೆ



ಕರಸೇವಕನ ಬಂಧನ ಖಂಡಿಸಿ ಹಿಂದೂ ಜಾಗರಣಾ ವೇದಿಕೆಯ ಕಾರ್ಯಕರ್ತರು ಕುಶಾಲನಗರದ ಡಿವೈಎಸ್ಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕುಶಾಲನಗರ, ಜ.7– ಕರಸೇವಕನ ಬಂಧನ ಖಂಡಿಸಿ ಹಿಂದೂ ಜಾಗರಣಾ ವೇದಿಕೆಯ ಕಾರ್ಯಕರ್ತರು ಪಟ್ಟಣದ ಡಿವೈಎಸ್ಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಹುಬ್ಬಳ್ಳಿಯಲ್ಲಿ ರಾಮ ಭಕ್ತನನ್ನು ರಾಜ್ಯ ಸರ್ಕಾರ ಬಂಧಿಸಿದೆ. ನಾವು ಕರಸೇವಕರು, ನಮ್ಮನ್ನೂ ಬಂಧಿಸಿ ಎಂದು ಸರ್ಕಾರದ ವಿರುದ್ಧ ಕೂಗಿದ ಪ್ರತಿಭಟನಾಕಾರರು, ಪೊಲೀಸ್ ಇಲಾಖೆ ಸರ್ಕಾರದ ಕೈಗೊಂಬೆಯಂತೆ ವರ್ತಿಸುತ್ತಿದೆ ಎಂದು ಆರೋಪಿಸಿದರು.

ಹಿಂದೂ ಜಾಗರಣಾ ವೇದಿಕೆಯ ಜಿಲ್ಲಾ ಸಹಸಂಚಾಲಕ ಭೋಜೇಗೌಡ ಮಾತನಾಡಿ, ಹುಬ್ಬಳ್ಳಿಯಲ್ಲಿ ಕರಸೇವಕನನ್ನು ಬಂಧಿಸಿರುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ತಾಲೂಕು ಕೇಂದ್ರಗಳ ಡಿವೈಎಸ್ಪಿ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಕಾಂಗ್ರೆಸ್‌ನ ಹಲವು ಮುಖಂಡರು ಹಿಂದೂ ವಿರೋಧಿ ನೀತಿ ಅನುಸರಿಸಿ, ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಚಿಕ್ಕಮಗಳೂರು ದತ್ತಪೀಠಕ್ಕೆ ಸಂಬಂಧಿಸಿದ ದಶಕಗಳ ಹಿಂದಿನ ಪ್ರಕರಣವನ್ನು ಕೆದಕುವ ಮೂಲಕ ಮತ್ತೊಮ್ಮೆ ನಾವು ಹಿಂದೂ ವಿರೋಧಿ ಎಂದು ಕಾಂಗ್ರೆಸ್ ಸರ್ಕಾರ ಸಾಬೀತು ಮಾಡಿದೆ. ಗೋದ್ರಾ ಮಾದರಿ ಹತ್ಯಾಕಾಂಡದ ಹೇಳಿಕೆ ನೀಡಿರುವ ಕಾಂಗ್ರೆಸ್‌ನ ಹಿರಿಯ ಮುಖಂಡ ಬಿ.ಕೆ.ಹರಿಪ್ರಸಾದ್ ಅವರನ್ನು ಸೂಕ್ತ ತನಿಖೆಗೆ ಒಳಪಡಿಸಿ ಸತ್ಯಾಸತ್ಯತೆ ಹೊರತರಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಹಿಂದೂ ಜಾಗರಣಾ ವೇದಿಕೆಯ ಸೋಮವಾರಪೇಟೆ ತಾಲೂಕು ಸಂಚಾಲಕ ವಿನುಕುಮಾರ್, ಕುಶಾಲನಗರ ತಾಲೂಕು ಸಂಚಾಲಕ ಎಲ್.ಹರೀಶ್, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಉಮೇಶ್, ಚಾಮೆರ ಪ್ರದೀಪ್, ತಾಲೂಕು ಸಹಸಂಚಾಲಕ ಹೇಮಂತ್ ಪೂಜಾರಿ, ಪ್ರಮುಖರಾದ ಪ್ರಜ್ವಲ್, ಪ್ರವೀಣ್, ಶೈಲೇಶ್, ಅವಿನಾಶ್, ಕರಸೇವಕರಾದ ಮನು, ಕೃಷ್ಣಪ್ಪ, ಬಿಜೆಪಿಯ ಅಮೃತ್ ರಾಜ್, ಉಮಾಶಂಕರ್, ಜಿ.ಎಲ್.ನಾಗರಾಜ್, ವೈಶಾಖ್, ಚಂದ್ರಶೇಖರ್ ಹೆರೂರು ಮತ್ತಿತರರು ಇದ್ದರು.

ಕೊಳ್ಳೇಗಾಲ ಆಸ್ಪತ್ರೆಗೆ ನ್ಯಾಯಾಧೀಶರ ದಿಢೀರ್ ಭೇಟಿ



ಕೊಳ್ಳೇಗಾಲ ಸಾರ್ವಜನಿಕ ತಾಲೂಕು ಆಸ್ಪತ್ರೆಗೆ ಭೇಟಿ ನೀಡಿದ ನ್ಯಾಯಾಧೀಶ ಎಂ.ಶ್ರೀಧರ ಸಾರ್ವಜನಿಕರಿಂದ ಮಾಹಿತಿ ಪಡೆದರು.

ಚಾಮರಾಜನಗರ, ಜ.7– ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ ನಗರಸಭೆ ಹಾಗೂ ಪಮ ಅಧಿಕಾರಿಗಳೊಂದಿಗೆ ಕೊಳ್ಳೇಗಾಲ ಹಾಗೂ ಹನೂರಿನ ಸಾರ್ವಜನಿಕ ತಾಲೂಕು ಆಸ್ಪತ್ರೆ ಹಾಗೂ ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ದಿಢೀರ್ ಭೇಟಿ ನೀಡಿ, ನಿರ್ವಹಣೆ ಬಗ್ಗೆ ಪರಿಶೀಲಿಸಿದರು.

ಕೊಳ್ಳೇಗಾಲದ ಸಾರ್ವಜನಿಕ ತಾಲೂಕು ಆಸ್ಪತ್ರೆ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಗ್ರಾಮಾಂತರ ಪೊಲೀಸ್ ಠಾಣೆ ಹಾಗೂ ಕನ್ನಿಕಾ ಪರಮೇಶ್ವರಿ ರಸ್ತೆಯ ಮಾರ್ಕೆಟ್ ಹತ್ತಿರದ ಶೌಚಾಲಯಗಳಿಗೆ ನ್ಯಾಯಾಧೀಶರು ಭೇಟಿ ನೀಡಿ ಅಲ್ಲಿನ ಸ್ವಚ್ಛತೆ ಬಗ್ಗೆ ಪರಿಶೀಲಿಸಿದರು. ನಂತರ ಹನೂರಿನ ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್ ನಿಲ್ದಾಣಕ್ಕೆ ಭೇಟಿ ನೀಡಿದ ನ್ಯಾಯಾಧೀಶರು, ಅಲ್ಲಿನ ಶೌಚಾಲಯದ ವ್ಯವಸ್ಥೆಯನ್ನು ಪರಿಶೀಲಿಸಿ ಶೌಚಾಲಯದ ಹಿಂಭಾಗದ ಜಾಗದಲ್ಲಿ ಕಸ ಹಾಕದಂತೆ ಗೇಟ್ ಅಳವಡಿಸುವಂತೆ ಸೂಚಿಸಿದರು.

ಇದೇ ವೇಳೆ ಕೊಳ್ಳೇಗಾಲ ನಗರ ಸಭೆಯ ಹಿರಿಯ ಆರೋಗ್ಯಾಧಿಕಾರಿ ಚೇತನ್ ಕುಮಾರ್, ಕಿರಿಯ ಆರೋಗ್ಯಾಧಿಕಾರಿ ಭೂಮಿಕಾ ಮತ್ತಿತರರು ಇದ್ದರು.

ಠೇವಣಿದಾರರಿಗೆ ಹಣ ಪಾವತಿಸುವವರೆಗೂ ಹೋರಾಟ ಅಚಲ



ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ನಡೆದ ಗ್ರೀನ್‌ಬಡ್ಸ್ ಸಭೆಯಲ್ಲಿ ಗ್ರೀನ್‌ಬಡ್ಸ್ ಕಾರ್ಯಕರ್ತರ ಹಾಗೂ ಠೇವಣಿದಾರರ ಸಮಿತಿ ರಾಜ್ಯಾಧ್ಯಕ್ಷೆ ಲಕ್ಷ್ಮೀದೇವಿ ಮಾತನಾಡಿದರು.

ಚಾಮರಾಜನಗರ ಜ.7– ಗ್ರೀನ್ ಬಡ್ಸ್‌ನಲ್ಲಿ ಹಣ ಹೂಡಿರುವ ಠೇವಣಿದಾರರಿಗೆ ಹಣ ವಾಪಸ್ ಪಾವತಿಸುವವರೆಗೂ ನಮ್ಮ ಹೋರಾಟ ಅಚಲ ಎಂದು ಗ್ರೀನ್‌ಬಡ್ಸ್ ಕಾರ್ಯಕರ್ತರ ಹಾಗೂ ಠೇವಣಿದಾರರ ಸಮಿತಿ ರಾಜ್ಯಾಧ್ಯಕ್ಷೆ ಲಕ್ಷ್ಮೀದೇವಿ ಹೇಳಿದರು.

ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ಭಾನುವಾರ ನಡೆದ ಗ್ರೀನ್‌ಬಡ್ಸ್ ಕಾರ್ಯಕರ್ತರು ಹಾಗೂ ಠೇವಣಿದಾರರ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಗ್ರೀನ್‌ಬಡ್ಸ್ ಸಂಸ್ಥೆ 2007ರಲ್ಲಿ ಆರಂಭವಾಗಿ 2013ರವರೆಗೂ ಠೇವಣಿದಾರರಿಗೆ ಸ್ವಲ್ಪಸ್ವಲ್ಪ ಹಣ ಪಾವತಿಸಿತು. 2013ರಲ್ಲಿ ಕಂಪನಿ ಬಂದ್ ಆಯಿತು. ಇದರಿಂದ ಹಣ ಕಟ್ಟಿಸಿರುವ ಕಾರ್ಯಕರ್ತರು ಠೇವಣಿದಾರರಿಗೆ ಹಣ ಕೊಡಿಸಲು ಸಾಧ್ಯವಾಗದೇ ಕೆಲವರು ತಮ್ಮ ಗ್ರಾಮಗಳನ್ನೇ ತೊರೆದಿರುವ ನಿದರ್ಶನಗಳಿವೆ. ಆ ಸಂದರ್ಭದಲ್ಲಿ ಕಾರ್ಯಕರ್ತರ ಹಿತಕಾಪಾಡುವುದು, ಠೇವಣಿದಾರರಿಗೆ ಹಣ ಕೊಡಿಸುವ ಸಂಬಂಧ ರಾಜ್ಯಮಟ್ಟದಲ್ಲಿ ಗ್ರೀನ್‌ಬಡ್ಸ್ ಕಾರ್ಯಕರ್ತರು ಹಾಗೂ ಠೇವಣಿದಾರರ ಸಮಿತಿಯನ್ನು ರಚನೆ ಮಾಡಲಾಗಿದೆ ಎಂದು ತಿಳಿಸಿದರು.

ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜು ಮಾತನಾಡಿದರು. ಇದೇ ವೇಳೆ ಜಿಲ್ಲೆಯಲ್ಲಿ ಗ್ರೀನ್‌ಬಡ್ಸ್ ಕಂಪನಿ ಮಾಡಿರುವ ಆಸ್ತಿಗಳನ್ನು ಪತ್ತೆಹಚ್ಚಿ, ಅವು ಮಾರಾಟವಾಗದಂತೆ ನೋಡಿಕೊಳ್ಳಲು ತಾಲೂಕುವಾರು 5 ರಿಂದ 6 ಕಾರ್ಯಕರ್ತರ ತಂಡ ರಚಿಸಲಾಯಿತು.

ರಾಜ್ಯದಲ್ಲಿ ಬಿಜೆಪಿ ನಾಯಕರ ಬೇಳೆ ಬೇಯಲ್ಲ

• ಶಾಸಕ ಸಿ.ಪುಟ್ಟರಂಗಶೆಟ್ಟಿ ಟಾಂಗ್ • ಜಿಲ್ಲಾ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ



ಚಾಮರಾಜನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪದಗ್ರಹಣ ಸಮಾರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಎಸ್.ಮಹೇಶ್ ಹಾಗೂ ಕಾರ್ಯಾಧ್ಯಕ್ಷ ದೊಡ್ಡರಾಯಪೇಟೆ ಮೂರ್ತಿ ಅಧಿಕಾರ ಸ್ವೀಕರಿಸಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಮತ್ತಿತರರಿದ್ದರು.

ಚಾಮರಾಜನಗರ, ಜ.7–ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ವಿರುದ್ಧ ಬಿಜೆಪಿ ನಾಯಕರು ಉದ್ದುದ್ದ ಭಾಷಣ ಮಾಡುವ ಮೂಲಕ ರಾಜ್ಯದಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದು, ಇದು ನಡೆಯಲ್ಲ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದ ಅಧ್ಯಕ್ಷರು, ಕಾರ್ಯಾಧ್ಯಕ್ಷರು ಮತ್ತು ಪದಾಧಿಕಾರಿಗಳ ಪದಗ್ರಹಣ ಹಾಗೂ ಸವಲತ್ತು ಕಿಟ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕರಸೇವಕ ಶ್ರೀಕಾಂತ್ ಪೂಜಾರಿಯನ್ನು ಕ್ರಿಮಿನಲ್ ಪ್ರಕರಣದ ಹಿನ್ನೆಲೆಯಲ್ಲಿ ಪೊಲೀಸರು ಬಂಧಿಸಿದ್ದಾರೆ. ಇದನ್ನು ಬಿಜೆಪಿಯವರು ಕಾಂಗ್ರೆಸ್ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ರಾಜ್ಯದಲ್ಲಿ ಬಿಜೆಪಿ ಬೇಳೆಬೇಯಲ್ಲ. ಆದರೂ ಜಾತಿ ಜಾತಿ, ಧರ್ಮ ಧರ್ಮಗಳ ನಡುವೆ ಎತ್ತಿಕಟ್ಟುವ ಕೆಲಸ ಮಾಡುತ್ತಿದೆ. ಅದು ಚಾಮರಾಜನಗರದಲ್ಲಿ ನಡೆಯಲ್ಲ. ನಡೆಯಲು ಬಿಡುವುದಿಲ್ಲ ಎಂದರು.

ಕಾಂಗ್ರೆಸ್ ಕಾರ್ಮಿಕ ವಿಭಾಗ ಪಕ್ಷದ ಸಂಘಟನೆಗೆ ಬಹುಮುಖ್ಯವಾಗಿದೆ. ಜಿಲ್ಲೆಯಲ್ಲಿ ಶೇ.70ರಷ್ಟು ಕಾರ್ಮಿಕರು ಇದ್ದಾರೆ. ಆದ್ದರಿಂದ ಕಾರ್ಮಿಕ ವಿಭಾಗದ ಜಿಲ್ಲಾ ಪದಾಧಿಕಾರಿಗಳು ಹೆಚ್ಚು ಸದಸ್ಯರನ್ನಾಗಿ ಮಾಡಿ ಪಕ್ಷವನ್ನು ಸದೃಢಗೊಳಿಸುವ ಮೂಲಕ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ನರೇಂದ್ರ ಮೋದಿ ಸುಳ್ಳು: ದೇಶದಲ್ಲಿ 70 ವರ್ಷ ಆಡಳಿತ ನಡೆಸಿ ಕಾಂಗ್ರೆಸ್ ಏನೂ ಮಾಡಿಲ್ಲ ಎಂದು ವಿಮಾನದಲ್ಲಿ ಓಡಾಡಿ ಕೊಂಡು ಪ್ರಧಾನಿ ನರೇಂದ್ರ ಮೋದಿ ಜನರಿಗೆ ಸುಳ್ಳು ಹೇಳಿದ್ದರು ಯಾರೂ ಕೇಳಲಿಲ್ಲ. ಕಾಂಗ್ರೆಸ್‌ನವರು ಲೂಟಿ ಹೊಡೆದು ಸ್ವಿಸ್ ಬ್ಯಾಂಕ್‌ನಲ್ಲಿ ಹಣವಿಟ್ಟಿದ್ದಾರೆ ಅದನ್ನು ತಂದು ಪ್ರತಿಯೊಬ್ಬರ ಖಾತೆ 15 ಲಕ್ಷರೂ. ಹಾಕುವುದಾಗಿ ಹೇಳಿ 9 ವರ್ಷಗಳೇ ಕಳೆದಿವೆ. ಇನ್ನೂ ಯಾರ ಖಾತೆಗೂ ಒಂದು ರೂಪಾಯಿ ಹಾಕಿಲ್ಲ ಎಂದು ಕಾಂಗ್ರೆಸ್ ಕಾರ್ಮಿಕ ವಿಭಾಗದ ರಾಜ್ಯಾಧ್ಯಕ್ಷ ಪುಟ್ಟಸ್ವಾಮಿಗೌಡ ಆರೋಪಿಸಿದರು.

ಕಾಂಗ್ರೆಸ್ ಸರ್ಕಾರ ಲಕ್ಷಾಂತರ ಫ್ಯಾಕ್ಟರಿ ತಂದು ದೇಶದ ಜನತೆಗೆ ಉದ್ಯೋಗ ಕಲ್ಪಿಸಿಕೊಟ್ಟಿದೆ ಇಂದಿರಾ ಗಾಂಧಿಯವರು ಉಳುವವನೇ ಭೂಮಿಯ ಒಡೆಯ ಜಾರಿಗೆ ತಂದರು. ರಾಜೀವ್ ಗಾಂಧಿ ಯವರು ಹೊಸ ಆಯಾಮ ತಂದು, ತಂತ್ರಜ್ಞಾನ ತಂದಿದ್ದು ಮೋದಿ ಅವರಾ? ಎಂದು ಪ್ರಶ್ನಿಸಿದರು.

ಮಾಜಿ ಸಚಿವ ಸೋಮಶೇಖರ್, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಚೂಡಾ ಮಾಜಿ ಅಧ್ಯಕ್ಷ ಸೈಯದ್‌ರಫೀ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಅಸ್ಗರ್ ಮಾತನಾಡಿದರು.

ಸನ್ಮಾನ: ಸರ್ಕಾರಿ ವಕೀಲರಾಗಿ ನೇಮಕವಾಗಿರುವ ಅರುಣ್‌ಕುಮಾರ್ ಅವರನ್ನು ಜಿಲ್ಲಾ ಕಾಂಗ್ರೆಸ್ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಕೆಪಿಸಿಸಿ ಸಂಯೋಜಕ ಶಿವನಾಗಣ್ಣ, ಉಪಾಧ್ಯಕ್ಷೆ ಹರಿಣಿಗೌಡ, ಜಿಲ್ಲಾ ವಕ್ತಾರ ಕೆರೆಹಳ್ಳಿ ನವೀನ್, ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಎಸ್.ಮಹೇಶ್, ಕಾರ್ಯಾಧ್ಯಕ್ಷ ದೊಡ್ಡರಾಯಪೇಟೆ ಮೂರ್ತಿ, ಜಿಲ್ಲಾ ಉಪಾಧ್ಯಕ್ಷ ನಾಗೇಂದ್ರ, ರಾಜ್‌ಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಕೆಂಪರಾಜು, ಆನಂದ್, ಕೆಬ್ಬೆಪುರಮಧು, ಸಿದ್ದರಾಜನಾಯಕ, ಶಂಕರ್, ಯುವ, ಕಾಂಗ್ರೆಸ್ ಕಾರ್ಯಾಧ್ಯಕ್ಷ ಹೊಸಹಳ್ಳಿ ಮಧುಸೂದನ್, ಪ್ರಧಾನ ಕಾರ್ಯದರ್ಶಿ ನಾಗೇಂದ್ರ, ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಮೋಹನ್ ನಗು, ಮಹಿಳಾ ಜಿಲ್ಲಾಧ್ಯಕ್ಷೆ ಲತಾಜತ್ತಿ, ಮುಖಂಡರಾದ ಪು.ಶ್ರೀನಿವಾಸನಾಯಕ, ಸಿ.ಎ.ಮಹದೇವಶೆಟ್ಟಿ, ಎಎಚ್‌ಎನ್ ಖಾನ್, ಡಿ.ಎನ್.ನಟರಾಜು, ಬ್ಲಾಕ್ ಅಧ್ಯಕ್ಷರಾದ ಹೊಂಗನೂರು ಚಂದ್ರು, ತೋಟೇಶ್, ಸೇವಾದಳ ಜಿಲ್ಲಾಧ್ಯಕ್ಷ ಜಯರಾಜ್, ನಗರಸಭಾ ಸದಸ್ಯರಾದ ಚಿನ್ನಮ್ಮ, ಆರ್.ಪಿ.ನಂಜುಂಡಸ್ವಾಮಿ ಇತರರು ಹಾಜರಿದ್ದರು.

ಚಾಮರಾಜನಗರದಲ್ಲಿ ವಿದ್ಯಾರ್ಥಿ ಮಿತ್ರ ತರಬೇತಿ ಶಿಬಿರ



ಚಾಮರಾಜನಗರ, ಜ.7–ನಗರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ಶಾಲಾ ಶಿಕ್ಷಣ ಇಲಾಖೆ ಹಾಗೂ ಪದವಿಪೂರ್ವ ವಿಭಾಗ ವತಿಯಿಂದ ಸಿಇಟಿ–2024 ವಿದ್ಯಾರ್ಥಿ ಮಿತ್ರ ತರಬೇತಿ ಶಿಬಿರ ಆಯೋಜಿಸಲಾಗಿತ್ತು.

ಪದವಿಪೂರ್ವ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಮಂಜುನಾಥ ಪ್ರಸನ್ನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಶೈಕ್ಷಣಿಕ ವರ್ಷದ ಆರಂಭದಲ್ಲೇ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ವಿದ್ಯಾರ್ಥಿ ಮಿತ್ರ ತರಬೇತಿ ಎಂಬ ಕಾರ್ಯಕ್ರಮವನ್ನು ರೂಪಿಸಿರುವುದು ಉತ್ತಮ ಬೆಳವಣಿಗೆ ಎಂದರು.

ನೀಟ್, ಸಿಇಟಿ ಆನ್‌ಲೈನ್ ಅರ್ಜಿಗಳನ್ನು ಭರ್ತಿ ಮಾಡುವ ವಿಧಾನಗಳನ್ನು ಬದಲಾವಣೆ ಮಾಡಲಾಗಿದ್ದು, ಇದನ್ನು ವಿದ್ಯಾರ್ಥಿಗಳು ಭರ್ತಿ ಮಾಡುವಾಗ ಸಾಕಷ್ಟು ತಪ್ಪುಗಳು ಕಂಡುಬರುತ್ತಿತ್ತು. ಇದನ್ನು ಮನಗಂಡ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಈ ವರ್ಷದಿಂದ ವಿದ್ಯಾರ್ಥಿ ಮಿತ್ರ ತರಬೇತಿ ಎಂಬ ಹೆಸರಿನಡಿ ಉಪನ್ಯಾಸಕರಿಗೆ ಉತ್ತಮ ಕಾರ್ಯಕ್ರಮ ರೂಪಿಸಿರುವುದು ಬಹುದೊಡ್ಡ ಪರಿಕಲ್ಪನೆ ಎಂದು ತಿಳಿಸಿದರು.

ಜಿಲ್ಲೆಯಿಂದ 8 ಉಪನ್ಯಾಸಕರು ಬೆಂಗಳೂರಿಗೆ ಹೋಗಿ ತರಬೇತಿ ಪಡೆದು ಬಂದಿದ್ದಾರೆ. ಇವರು ಜಿಲ್ಲೆಯ ಎಲ್ಲಾ ಉಪನ್ಯಾಸಕರಿಗೂ ತರಬೇತಿ ನೀಡಲಿದ್ದು, ಸರಿಯಾದ ತರಬೇತಿ ಪಡೆಯುವ ಮೂಲಕ ವಿದ್ಯಾರ್ಥಿಗಳಿಗೆ ಅರ್ಜಿ ಭರ್ತಿ ಸಮಯದಲ್ಲಿ ಆಗುವ ತಪ್ಪುಗಳನ್ನು ಸರಿಪಡಿಸಬೇಕು ಎಂದು ಕಿವಿಮಾತು ಹೇಳಿದರು.

ಪ್ರಾಂಶುಪಾಲರ ಸಂಘದ ಅಧ್ಯಕ್ಷ ಪ್ರಮೋದ್ ಮಾತನಾಡಿ, ಉಪನ್ಯಾಸಕರು ಸಮಯವನ್ನು ಕಾಲೇಜಿನ ಸಮಯಕ್ಕೆ ಮಿತಿಗೊಳಿಸಬೇಡಿ, ಮಕ್ಕಳ ಪ್ರಗತಿಗಾಗಿ ಸಮಯವನ್ನು ಮೀಸಲಿಡಿ. ಮಕ್ಕಳು ಶಾಲೆಗೆ ದಾಖಲಾದ ನಂತರದಲ್ಲಿ ಅವರ ಪ್ರಗತಿಯನ್ನು ನೋಡಿ ಅವರನ್ನು ಉತ್ತೇಜಿಸುವ ಮೂಲಕ ವಿಜ್ಞಾನವನ್ನು ಓದುವಂತೆ ಹುರಿದುಂಬಿಸಬೇಕು ಎಂದರು.

ಪ್ರಾಂಶುಪಾಲರ ಸಂಘದ ಖಜಾಂಚಿ ಸ್ವಾಮಿ, ಜೆಎಸ್‌ಎಸ್ ಪಪೂ ಕಾಲೇಜಿನ ಪ್ರಾಂಶುಪಾಲ ದೇವರಾಜ ಮೂರ್ತಿ ಮಾತನಾಡಿದರು. ವಿದ್ಯಾರ್ಥಿಮಿತ್ರ ಸಂಪನ್ಮೂಲ ಉಪನ್ಯಾಸಕರಾದ ಮಧು.ಟಿ, ಷಡಕ್ಷರಸ್ವಾಮಿ, ಶ್ರೀನಾಥ್, ಅಜಯ್ ಕುಮಾರ್, ಆರ್.ರೇಖಾ. ಎಸ್.ಜಯಶ್ರೀ, ಸೌಗಂಧಿನಿ, ಸವಿತಾ ಇದ್ದರು.

ಕೈಪಿಡಿ ಬಿಡುಗಡೆ: ಭೌತಶಾಸ್ತ್ರ ವಿಭಾಗದಿಂದ ಪ್ಲೇ ವಿತ್ ಫಿಜಿಕ್ಸ್ ಶೀರ್ಷಿಕೆಯಡಿಯ ಕೈಪಿಡಿಯನ್ನು ಇದೇ ಸಂದರ್ಭದಲ್ಲಿ ಪದವಿಪೂರ್ವ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಮಂಜುನಾಥ ಪ್ರಸನ್ನ ಬಿಡುಗಡೆ ಮಾಡಿದರು. ಭೌತಶಾಸ್ತ್ರ ವಿಭಾಗದ ಗೌರವ ಅಧ್ಯಕ್ಷ ಸಿದ್ದಪ್ಪ, ಉಪಾಧ್ಯಕ್ಷೆ ಸೌಗಂಧಿನಿ, ಅಧ್ಯಕ್ಷ ಟಿ.ಮಧು, ಕಾರ್ಯದರ್ಶಿ ಷಡಕ್ಷರಿಸ್ವಾಮಿ, ಖಜಾಂಚಿ ಶ್ರೀನಾಥ್ ಮತ್ತು ವಿವಿಧ ತಾಲೂಕು ಕೋ–ಆರ್‌ಡಿನೇಟರ್ ಮತ್ತು ಉಪನ್ಯಾಸಕರ ಶ್ರಮದಿಂದ ಈ ಕೈಪಿಡಿಯನ್ನು ತಯಾರು ಮಾಡಲಾಗಿದ್ದು, ಸಿಇಟಿ, ನೀಟ್, ಬೋರ್ಡ್ ಎಕ್ಸಾಂಗಳಿಗೆ ಅನುಕೂಲವಾಗುವಂತಹ ಪ್ರಶ್ನೋತ್ತರಗಳು, ಪದಬಂಧ ಹೀಗೆ ಹಲವು ವಿಷಯಗಳನ್ನು ಒಳಗೊಂಡಿದೆ. ಇದು ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.

ಮಂತ್ರಾಕ್ಷತೆ ವಿತರಣೆ ಕಾರ್ಯಕ್ಕೆ ಚಾಲನೆ

ಬೇಗೂರು(ಗುಂಡ್ಲುಪೇಟೆ), ಜ.7– ಅಯೋಧ್ಯೆಯ ಶ್ರೀರಾಮ ಮಂದಿರದ ಮಂತ್ರಾಕ್ಷತೆ ವಿತರಣೆ ಕಾರ್ಯಕ್ಕೆ ಬೇಗೂರಿನಲ್ಲಿ ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್ ಚಾಲನೆ ನೀಡಿದರು.

ನಂತರ ಸಿ.ಎಸ್.ನಿರಂಜನ್, ಮನೆ ಮನೆಗೆ ತೆರಳಿ ಮಂತ್ರಾಕ್ಷತೆ, ಆಹ್ವಾನ ಪತ್ರಿಕೆ ನೀಡಿ ರಾಮನ ಭಾವಚಿತ್ರ ವಿತರಿಸಿದರು. ರಾಮಮಂದಿರ ಉದ್ಘಾಟನೆ ಅಂಗವಾಗಿ ಜ.22ರಂದು ಮನೆ ಮನೆಯಲ್ಲಿ ದೀಪ ಬೆಳಗಿಸಲು ತಿಳಿಸಿದರು. ರಾಮನ ಆದರ್ಶ, ತತ್ವ ಕುರಿತು ತಿಳಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಡಿ.ಪಿ.ಜಗದೀಶ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷ ಕಮರಹಳ್ಳಿ ರವಿ, ಹಾಪ್‌ಕ್ಯಾಮ್ಸ್ ಅಧ್ಯಕ್ಷ ಕುರುಬರಹುಂಡಿ ಲೋಕೇಶ್, ಕೃಷ್ಣ, ನಂಜುಂಡಸ್ವಾಮಿ, ನಾಗಶೆಟ್ಟರು, ರಾಜಶೆಟ್ಟರೂ, ಮಹೇಶ್, ಅಣ್ಣಯ್ಯ, ಬಿಜೆಪಿ ಕಾರ್ಯಕರ್ತರು ಇದ್ದರು.

ಉದ್ಯಮಶೀಲ ಅಭಿವೃದ್ಧಿ: ಜಾಗೃತಿ, ಉತ್ತೇಜನ, ಕೌಶಲ್ಯ ವಿಶ್ಲೇಷಣೆ ಕುರಿತು ಕಾರ್ಯಾಗಾರ



ಮೈಸೂರು,ಜ.7–ಪ್ರಸ್ತುತ ದಿನಮಾನಗಳಲ್ಲಿ ಸರ್ಕಾರಿ ಉದ್ಯೋಗ ಬಹುತೇಕರಿಗೆ ದೊರೆಯದಿರುವುದರಿಂದ ಹಲವು ಸ್ಟಾರ್ಟ್‌ಅಪ್‌ಗಳ ಸ್ಥಾಪನೆಯಿಂದ ಉದ್ಯೋಗ ಸೃಷ್ಟಿಯಾಗುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ ಎಂದು ಮೈಸೂರು ಜಿಲ್ಲಾ ಉದ್ಯೋಗ ಕೇಂದ್ರ, ಸೆಡಾಕ್‌ನ ಜಂಟಿನಿರ್ದೇಶಕ ಎಂ.ಮಂಜುನಾಥ ಸ್ವಾಮಿ ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ ಕೇಂದ್ರದಲ್ಲಿ "ಉದ್ಯಮಶೀಲ ಅಭಿವೃದ್ಧಿ: ಜಾಗೃತಿ, ಉತ್ತೇಜನ ಹಾಗೂ ಕೌಶಲ್ಯ ವಿಶ್ಲೇಷಣೆ" ವಿಷಯ ಕುರಿತು ಆಯೋಜಿಸಿದ್ದ ಒಂದು ದಿನದ ರಾಜ್ಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಕಾರ್ಮಿಕರ ಜೀವನ ಮಟ್ಟ ತುಂಬಾ ಕೆಳ ಮಟ್ಟದಲ್ಲಿದ್ದು ವ್ಯಾಪಾರಸ್ಥರ ಜೀವನವು ಉತ್ತಮ ಸ್ಥಿತಿಯಲ್ಲಿರುತ್ತದೆ. ಇದಕ್ಕೆ ಕಾರಣ ಉದ್ಯೋಗದ ಬಗ್ಗೆ ಕಾರ್ಮಿಕರಲ್ಲಿರುವ ಅರಿವಿನ ಕೊರತೆಯಾಗಿದೆ ಎಂದ ಅವರು ಇಂತಹ ಹಲವು ತರಬೇತಿ ಕಾರ್ಯಕ್ರಮಗಳ ಮೂಲಕ ಉದ್ಯೋಗಸ್ಥರಿಗೆ ಉದ್ಯೋಗದ ಮಾಹಿತಿಯನ್ನು ನೀಡುವುದರಿಂದ ಅವರ ಜೀವನ ಮಟ್ಟವನ್ನು ಸುಧಾರಿಸಬಹುದಾಗಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ಮರೀಗೌಡ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಗುಂಡಪ್ಪಗೌಡ ವಹಿಸಿದ್ದರು. ಕು.ಶಿಲ್ಪಶ್ರೀ ಪ್ರಾರ್ಥಿಸಿ, ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥೆ ಡಾ.ಪೂರ್ಣಿಮ ಸ್ವಾಗತಿಸಿದರೆ, ಪ್ರೊ.ಅನುಷ ವಂದಿಸಿ, ಪ್ರೊ.ಸುನೀಲ್ ನಿರೂಪಿಸಿದರು.

ಒಂದನೇ ಪುಟದಿಂದ

ಹಾರ್ವೆಸ್ಟರ್ ಹಬ್ ಸ್ಥಾಪನೆ

ಈ ಸಮಯದಲ್ಲಿ ಕಾರ್ಮಿಕರ ಸಮಸ್ಯೆ ಎದುರಾಗಲಿದೆ. ಇದರಿಂದ ಹಾರ್ವೆಸ್ಟರ್ ಯಂತ್ರಗಳಿಗೆ ಬಾರೀ ಬೇಡಿಕೆ ಬರಲಿದೆ. ಈ ವೇಳೆ ಆಂಧ್ರಪ್ರದೇಶ, ತಮಿಳುನಾಡು ಸೇರಿದಂತೆ ಇತರೆ ರಾಜ್ಯಗಳಿಂದ ಅನಿವಾರ್ಯವಾಗಿ ದುಬಾರಿ ಬಾಡಿಗೆ ಕೊಟ್ಟು ರೈತರು ಹಾರ್ವೆಸ್ಟರ್ ಯಂತ್ರದ ಮೂಲಕ ಒಕ್ಕಣೆ ಮಾಡಿಸುತ್ತಾರೆ. ಇದರ ಹಿನ್ನೆಲೆ ಕರ್ನಾಟಕ ಸರ್ಕಾರವೇ ಹಾರ್ವೆಸ್ಟರ್ ಯಂತ್ರಗಳನ್ನು ಖರೀದಿ ಮಾಡುತ್ತಿದೆ. ಹೀಗೆ ಖರೀದಿ ಮಾಡುವ ಹಾರ್ವೆಸ್ಟರ್ ಯಂತ್ರಗಳನ್ನು ನೋಂದಾಯಿತ ರೈತ ಸಂಘಟನೆಗಳಿಗೆ ಶೇಕಡ 40ರಿಂದ 70ರಷ್ಟು ಸಬ್ಸಿಡಿಯಲ್ಲಿ ನೀಡಲಾಗುತ್ತದೆ. ಹಾರ್ವೆಸ್ಟರ್ ಯಂತ್ರಗಳ ಬಳಕೆಗಾಗಿ ಸರ್ಕಾರ ರಿಯಾಯಿತಿ ದರ ನಿಗದಿ ಮಾಡಲಿದೆ. ಇದರಿಂದ ರೈತರು ಕಡಿಮೆ ದರದಲ್ಲಿ ಹಾರ್ವೆಸ್ಟರ್ ಯಂತ್ರಗಳ ಮೂಲಕ ಕೊಯ್ಲು ಹಾಗೂ ಒಕ್ಕಣೆ ಮಾಡಿಸಬಹುದು. ಇದರಿಂದ ರೈತರಿಗೆ ಕೃಷಿ ಮೇಲಿನ ಬಂಡವಾಳ ಹೂಡಿಕೆ ಕಡಿಮೆಯಾಗಲಿದ್ದು, ಹೆಚ್ಚು ಇಳುವರಿ ಬರಲಿದೆ. ಜೊತೆಗೆ ಸಮಯ ಕೂಡ ಉಳಿತಾಯವಾಗಲಿದೆ. ಮೈಸೂರು ಜಿಲ್ಲೆಗೆ 2 ಹಾರ್ವೆಸ್ಟರ್ ಹೈಟೆಕ್ ಯಂತ್ರಗಳನ್ನು ನೀಡಲಾಗುತ್ತಿದೆ. ಈ ಯಂತ್ರಗಳ ಬಳಕೆ ಒಂದು ಜಿಲ್ಲೆ ಹಾಗೂ ಹೋಬಳಿಗೆ ಮಾತ್ರ ಸೀಮಿತ ವಾಗಿರುವುದಿಲ್ಲ. ಅವಶ್ಯಕತೆ ಇದ್ದಾಗ ಬೇರೆ ಜಿಲ್ಲೆ ಹಾಗೂ ಹೋಬಳಿಗಳಲ್ಲಿ ಕೂಡ ಬಳಕೆ ಮಾಡಿಕೊಳ್ಳಬಹುದು. ಸದ್ಯಕ್ಕೆ ಪ್ರತಿ ಜಿಲ್ಲೆಗೆ ಎರಡು ಹಾರ್ವೆಸ್ಟರ್ ಯಂತ್ರಗಳು ದೊರೆಯಲಿದೆ. ಇನ್ನೆರಡು ಹಂತಗಳಲ್ಲಿ 200 ಯಂತ್ರಗಳನ್ನು ಹೆಚ್ಚುವರಿಯಾಗಿ ಖರೀದಿ ಮಾಡುತ್ತಿರುವ ಕಾರಣ ಮುಂದೆ ಪ್ರತಿ ಜಿಲ್ಲೆಗೆ 10 ಹಾರ್ವೆಸ್ಟರ್ ಯಂತ್ರಗಳು ದೊರೆಯಲಿದೆ.

ಮೂವರ ವಿರುದ್ಧ ಎಫ್‌ಐಆರ್

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮತ್ತು ಉತ್ತರ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತಗಳಲ್ಲಿ 2013ರ ಡಿಸೆಂಬರ್ 7ರಿಂದ 2017ರ ಮಾರ್ಚ್ 31ರವರೆಗೆ ಹಂತ ಹಂತವಾಗಿ 232 ಕೋಟಿ 88 ಲಕ್ಷ ರೂ.ಸಾಲ ಪಡೆದಿದ್ದಾರೆ. ಆದರೆ, ಸಾಲ ಮರುಪಾವತಿಸದೆ ಒಟ್ಟು 439 ಕೋಟಿ 7 ಲಕ್ಷ ರೂ. ಬಾಕಿ ಉಳಿಸಿ ಕೊಂಡಿದ್ದಾರೆ. ಅಷ್ಟೇ ಅಲ್ಲದೇ ಸಾಲ ಪಡೆಯುವ ಸಮಯ ದಲ್ಲಿ ಸೌಭಾಗ್ಯ ಲಕ್ಷ್ಮೀ ಶುಗರ್ಸ್ ಲಿಮಿಟೆಡ್ ಕಂಪೆನಿಯ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕ ಮತ್ತು ನಿರ್ದೇಶಕ ರಾಗಿದ್ದ ಆರೋಪಿತರು ನಂತರ, ಬ್ಯಾಂಕ್‌ನ ಗಮನಕ್ಕೆ ತರದೇ ಕಂಪೆನಿಯಲ್ಲಿ ತಮ್ಮ ಸ್ಥಾನಗಳಿಂದ ಹೊರಬಂದು, ಬೇರೆಯವರನ್ನು ಆ ಸ್ಥಾನಗಳಿಗೆ ನೇಮಿಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಈ ದೂರಿನನ್ವಯ ರಮೇಶ್ ಜಾರಕಿಹೊಳಿ, ವಸಂತ್ ವಿ.ಪಾಟೀಲ್ ಹಾಗೂ ಶಂಕರ್ ಪಾವಡೆ ವಿರುದ್ಧ ವಿ.ವಿ.ಪುರಂ ಠಾಣೆಯಲ್ಲಿ ಐಪಿಸಿ ಸೆಕ್ಷನ್ 420 (ವಂಚನೆ), 406 (ಕ್ರಿಮಿನಲ್ ನಂಬಿಕೆ ದ್ರೋಹ), 34 (ಸಾಮೂಹಿಕ ಕ್ರಿಮಿನಲ್ ಉದ್ದೇಶ) ಆರೋಪದಡಿ ಎಫ್‌ಐಆರ್ ದಾಖಲಾಗಿರುವುದಾಗಿ ಗೊತ್ತಾಗಿದೆ.

ಪಾಂಡವರ ಕಾಲದ ಶಿವಲಿಂಗ ಪತ್ತೆ

ಸ್ವಲ್ಪ ಅಂತರದಲ್ಲಿ ಈ ಶಿವಲಿಂಗ ಪತ್ತೆಯಾಗಿದೆ. ಪಾಂಡವರು ಈ ಭಾಗದಲ್ಲಿ ಸಂಚರಿಸುವ ವೇಳೆ ಶಿವನ ಪೂಜೆಗಾಗಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದ್ದರು ಎಂದು ಕಾರ್ಕಳದ ಶಿಲ್ಪಿಗಳಾದ ಶಿವಕುಮಾರ್ ಮಾಹಿತಿ ಹಂಚಿಕೊಂಡಿದ್ದಾರೆ.

ಮಣ್ಣಿನ ಅಡಿಯಲ್ಲಿ ಲಭಿಸಿರುವ ಶಿವಲಿಂಗದ 2 ಭಾಗದಲ್ಲಿ ಸಣ್ಣ ಪ್ರಮಾಣದಲ್ಲಿ ಹಾನಿಯಾಗಿದೆ. ಆಗಿನ ಕಾಲದ ಬಿಳಿಕಲ್ಲಿನಿಂದ ಹಾಗೂ ಕಾಡು ಸವಕಲ್ಲಿನಿಂದ ಈ ಶಿವಲಿಂಗ ಮಾಡಲಾಗಿದೆ. ಶಿವಲಿಂಗ ಪತ್ತೆಯಾದ ಸ್ಥಳದಿಂದ ಅನತಿ ದೂರದ ಎತ್ತರದ ಕುಂದಬೆಟ್ಟದಲ್ಲಿ ಇಂದಿಗೂ ಶಿವನು ನೆಲೆಸಿರುವ, ಒಂದೇ ರಾತ್ರಿಯಲ್ಲಿ ಕಟ್ಟಿರುವ ಬಾಗಿಲು ಇಲ್ಲದಿರುವ ಕಲ್ಲಿನ ದೇವಸ್ಥಾನವು ಪ್ರಸಿದ್ಧಿಯನ್ನು ಪಡೆದಿದೆ.

ಮಣ್ಣಿನಡಿಯಲ್ಲಿದ್ದ ಶಿವಲಿಂಗವನ್ನು ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿ, ಕಲ್ಯಾಟಂಡ ಅಜ್ಜಪ್ಪನವರ ಮಾರ್ಗದರ್ಶನದಲ್ಲಿ ಶಿವಲಿಂಗ ಹೊರಗೆ ತೆಗೆಯಲಾಗಿದೆ. ಈ ವೇಳೆ ಶಿವಲಿಂಗವನ್ನು ಎಳೆಯಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಅಜ್ಜಪ್ಪನವರ ನುಡಿಯಂತೆ ಕರುವಿನ ಸಹಾಯದಿಂದ ಶಿವಲಿಂಗಕ್ಕೆ ಹಗ್ಗ ಕಟ್ಟಿ ಮೇಲೆ ಎತ್ತಲಾಗಿದೆ. ಇದರೊಂದಿಗೆ ಭೂಮಿ ಅಡಿಯಲ್ಲಿ ಸಿಕ್ಕಿರುವ ಹಲವು ವಸ್ತುಗಳನ್ನು ಜೋಡಿಸಿ ಸ್ಥಳದಲ್ಲಿ ಶೇಖರಿಸಿ ಇಡಲಾಗಿದೆ.

10 ರೂ. ನಾಣ್ಯ ತೆಗೆದುಕೊಳ್ಳಲೇಬೇಕು

ವಾರ್ನಿಂಗ್ ಮಾಡಿದ್ದಾರೆ. ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ವಾಯುವ್ಯ ಸಾರಿಗೆ ಹಾಗೂ ಈಶಾನ್ಯ ಸಾರಿಗೆ ನಿಗಮಕ್ಕೆ ಸಾರಿಗೆ ಇಲಾಖೆಯಿಂದ ಪತ್ರ ಬರೆಯಲಾಗಿದ್ದು, ಅದರಲ್ಲಿ ರಾಜ್ಯದ ಎಲ್ಲಾ ಸಾರಿಗೆ ಬಸ್ ಗಳಲ್ಲೂ 10 ರೂ. ನಾಣ್ಯ ಪಡೆಯುವಂತೆ ಆದೇಶಿಸಲಾಗಿದೆ. ಬಸ್ ಪ್ರಯಾಣದ ವೇಳೆ ಪ್ರಯಾಣಿಕರು 10 ರೂ. ನಾಣ್ಯ ನೀಡಿದರೆ ಪಡೆಯಬೇಕು. ಒಂದು ವೇಳೆ 10 ರೂ. ನಾಣ್ಯ ಪಡೆಯದೇ ಇದ್ದರೆ, ಈ ಬಗ್ಗೆ ಪ್ರಯಾಣಿಕರಿಂದ ದೂರು ಬಂದರೆ ಆ ಬಸ್ಸಿನ ನಿರ್ವಾಹಕರ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳುವುದಾಗಿ ಇಲಾಖೆ ಎಚ್ಚರಿಕೆ ರವಾನಿಸಿದೆ.

ಮಾಲ್ಡೀವ್ಸ್ ಸಚಿವರು ಅಮಾನತು

ತೀವ್ರ ದುಷ್ಪರಿಣಾಮ ಬೀರಲಿದೆ. ಪ್ರವಾಸೋದ್ಯಮವನ್ನೇ ನೆಚ್ಚಿಕೊಂಡಿರುವ ದೇಶವಾಗಿರುವುದರಿಂದ ಯಾರೇ ಆದರೂ ಹೇಳಿಕೆ ಕೊಡುವ ಮುನ್ನ ಎಚ್ಚರಿಕೆ ವಹಿಸಬೇಕು ಎಂಬ ಖಡಕ್ ಸಂದೇಶವನ್ನು ಸರ್ಕಾರ ಸಚಿವರಿಗೆ ರವಾನಿಸಿದೆ ಎಂದು ತಿಳಿದು ಬಂದಿದೆ. ಪ್ರಧಾನಿ ಮೋದಿ ಲಕ್ಷದ್ವೀಪಕ್ಕೆ ಭೇಟಿ ನೀಡಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿದ್ದರು. ಇದು ಪುಟ್ಟ ದ್ವೀಪ ರಾಷ್ಟ್ರ ಮಾಲ್ಡೀವ್ಸ್ ಕೆಂಗಣ್ಣಿಗೆ ಗುರಿಯಾಗಿತ್ತು. ಆ ದೇಶದ ಸಚಿವರು ಭಾರತ ಎಂದಿಗೂ ಮಾಲ್ಡೀವ್ಸ್ ಬೀಚ್ ಪ್ರವಾಸೋದ್ಯಮಕ್ಕೆ ಸ್ಪರ್ಧೆ ನೀಡಲು ಸಾಧ್ಯವಿಲ್ಲ. ಭಾರತಕ್ಕೆ ಆತಿಥ್ಯ ನೀಡಲು ಸಾಧ್ಯವೇ ಇಲ್ಲ. ಭಾರತೀಯರ ರೂಂಗಳು ಗಬ್ಬು ವಾಸನೆಯಿಂದ ಕೂಡಿರುತ್ತವೆ. ಎಲ್ಲೆಲ್ಲೂ ಮೂತ್ರ ವಿಸರ್ಜನೆ ಮಾಡುತ್ತಾರೆ ಎಂದು ನಿಂದನೆ ಮಾಡಿದ್ದರು. ಭಾರತೀಯರ ನಿಂದನೆ, ಪ್ರಧಾನಿ ಮೋದಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಬೆನ್ನಲ್ಲೇ ಭಾರತದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿತ್ತು.

ಇಬ್ಬರು ಶಿಕ್ಷಕಿಯರ ಸಾವು

ಅಪಘಾತದಲ್ಲಿ ಮೃತಪಟ್ಟವರು. ನಾಗರತ್ನ ಸ್ಥಳದಲ್ಲೇ ಮೃತಪಟ್ಟಿದ್ದು, ಮಂಜುಳಾ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಗರತ್ನ ಮತ್ತು ಮಂಜುಳಾ ಪಟ್ಟಣದಲ್ಲಿ ನಡೆದ ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆಯ ಕರ್ತವ್ಯ ಮುಗಿಸಿ ಆಕ್ಟಿವ್ ಹೋಂಡಾ ಸ್ಕೂಟರ್‌ನಲ್ಲಿ ಮೈಸೂರು ಕಡೆಗೆ ತೆರಳುತ್ತಿದ್ದಾಗ ಪಾಲಹಳ್ಳಿ ಕಡೆಯಿಂದ ಪಟ್ಟಣದ ಕಡೆ ಬರುತ್ತಿದ್ದ ಬ್ರೆಜ್ಜಾ ಕಾರು ಇವರ ಸ್ಕೂಟರ್‌ಗೆ ಮುಖಾಮುಖಿ ಡಿಕ್ಕಿ ಹೊಡೆದಿದೆ. ಬಸ್ತಿಪುರ ಶಾಲೆಯ ಶಿಕ್ಷಕಿ ನಾಗರತ್ನ ಮೂಲತಃ ಕೆ.ಆರ್.ನಗರದವರಾಗಿದ್ದು, ಬಸ್ತಿಪುರದಲ್ಲೇ ವಾಸವಾಗಿದ್ದರು. ಪಿ.ಹೊಸಹಳ್ಳಿ ಶಾಲೆಯ ಶಿಕ್ಷಕಿ ಮಂಜುಳಾ ಪಾಂಡವಪುರ ತಾಲೂಕಿನ ಹಿರೀಮರಳಿ ಗ್ರಾಮದವರಾಗಿದ್ದು, ಕುಟುಂಬದ ಜತೆ ಮೈಸೂರಿನ ಮೇಟಗಳ್ಳಿಯಲ್ಲಿ ವಾಸವಾಗಿದ್ದರು. ಈ ಸಂಬಂಧ ಶ್ರೀರಂಗಪಟ್ಟಣ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಟಲ್‌ಜೀ ಜನಸ್ನೇಹಿ ಕೇಂದ್ರ ಕಚೇರಿಯ ಕಾಗದ ರಹಿತ ಸೇವೆ ಆರಂಭ


●ಅರ್ಜಿದಾರರಿಗೆ ಮೊಬೈಲ್ ಮೂಲಕ ವಿವಿಧ ಪ್ರಮಾಣ ಪತ್ರ ●ಗ್ರಾಮೀಣ ಪ್ರದೇಶದ ಜನರಿಗೆ ಹೊರೆ ●ಓಟಿಪಿ ಬರದೆ ಪ್ರಮಾಣ ಪತ್ರ ಪಡೆಯಲು ಪರದಾಟ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜ.7– ನಗರಪಾಲಿಕೆ, ತಾಲೂಕು ಹಾಗೂ ನಾಡಕಚೇರಿಯಲ್ಲಿರುವ ಅಟಲ್‌ಜೀ ಜನಸ್ನೇಹಿ ಕಚೇರಿಯಲ್ಲಿ ಕಾಗದ ರಹಿತ ಸೇವೆ ಆರಂಭಿಸಲಾಗಿದ್ದು ಇದರಿಂದ ವಿವಿಧ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿರುವವರು ಪರದಾಡುವಂತಾಗಿದೆ.

ಬೆಂಗಳೂರಿನ ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯವು ಡಿ.13ರಂದು ಸುತ್ತೋಲೆ ಹೊರಡಿಸಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿರುವ ಅಟಲ್‌ಜೀ ಜನಸ್ನೇಹಿ ಕೇಂದ್ರದಲ್ಲಿ ಕಾಗದ ರಹಿತ ಸೇವೆ ಆರಂಭಿಸುವಂತೆ ನಿರ್ದೇಶನ ನೀಡಲಾಗಿದೆ ಇದರಿಂದ ಈಗಾಗಲೇ ಮೈಸೂರಿನ ಎಲ್ಲಾ ವಲಯ ಕಚೇರಿ, ತಾಲೂಕು ಹಾಗೂ ನಾಡಕಚೇರಿಯಲ್ಲಿರುವ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಕಾಗದ ರಹಿತ ಸೇವೆ ಆರಂಭಿಸಲಾಗಿದೆ. ಈ ನೂತನ ವ್ಯವಸ್ಥೆಯಿಂದ ಕೆಲವರಿಗೆ ಅನುಕೂಲವಾದರೆ, ಮತ್ತೆ ಕೆಲವರಿಗೆ ಅನಾನುಕೂಲವಾಗಿ ಪರಿಣಮಿಸಿದೆ. ಆರಂಭದಲ್ಲಿಯೇ ಕಾಗದ ರಹಿತ ಸೇವೆ ಗ್ರಾಮೀಣ ಪ್ರದೇಶ ಜನರಿಗೆ ಕಂಟಕವಾಗಿದ್ದು, ಹಳೆ ಪದ್ಧತಿಯೇ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ: ವಿವಿಧ ಸೇವೆಗಳಿಗಾಗಿ ಈ ಹಿಂದೆ ಸಾರ್ವಜನಿಕರು ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ 40 ರೂ. ಪಾವತಿಸಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುತ್ತಿದ್ದರು. ಅರ್ಜಿದಾರರ ಬೇಡಿಕೆಯ ಪ್ರಮಾಣ ಪತ್ರ ಸಿದ್ಧಗೊಂಡ ನಂತರ ದೃಢೀಕರಿಸಿದ ಮುದ್ರಿತ ಪ್ರಮಾಣ ಪತ್ರವನ್ನು ನೀಡಲಾಗುತ್ತಿತ್ತು.



ಸಾಂದರ್ಭಿಕ ಚಿತ್ರ

ಆದರೆ, ಇದೀಗ ಆನ್‌ಲೈನ್‌ನಲ್ಲಿ 40 ರೂ. ಹಣ ಪಾವತಿಸಿ ಅರ್ಜಿ ಸಲ್ಲಿಸಿದರೆ, ನಿಗದಿತ ಮೊಬೈಲ್ ಸಂಖ್ಯೆಗೆ ಓಟಿಪಿ ರವಾನಿಸಲಾಗುತ್ತದೆ. ಪ್ರಮಾಣ ಪತ್ರ ಸಿದ್ಧಗೊಂಡ ಬಳಿಕ ಅರ್ಜಿದಾರರ ಮೊಬೈಲ್ ಅಥವಾ ಇ–ಮೇಲ್‌ಗೆ ಲಿಂಕ್‌ವುಳ್ಳ ಸಂದೇಶ ರವಾನೆಯಾಗುತ್ತದೆ. ಆ ಲಿಂಕ್ ಒತ್ತಿದರೆ ಮತ್ತೆ ಓಟಿಪಿ ಬರುತ್ತದೆ. ನಿಗದಿತ ಸಮಯದೊಳಗೆ ಓಟಿಪಿ ಹಾಕಿದ ನಂತರ ಪ್ರಮಾಣ ಪತ್ರದ ಪಿಡಿಎಫ್ ಪ್ರತಿ ಓಪನ್ ಆಗುತ್ತದೆ. ಆದರೆ, ಅದನ್ನು ಸೈಬರ್ ಸೆಂಟರ್‌ಗಳಲ್ಲಿ ಪ್ರಿಂಟ್ ತೆಗೆಸಿಕೊಳ್ಳಲು ಅರ್ಜಿದಾರರು ಮತ್ತೇ ಹಣ ಪಾವತಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ

ಯಾವ ಯಾವ ಸೇವೆಗೆ ಅನ್ವಯ: ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಜನ ಹಲವು ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸುತ್ತಾರೆ. ಜಾತಿ ಮತ್ತು ಆದಾಯ, ಭೂ ಹಿಡುವಳಿ, ಗೇಣಿ ಅರ್ಜಿ, ವಂಶವೃಕ್ಷ, ಕುಟುಂಬ ದೃಢೀಕರಣ ಪತ್ರ, ನಿರುದ್ಯೋಗಿ ದೃಢೀಕರಣ ಪತ್ರ, ವಾಸಸ್ಥಳ, ನಿವಾಸಿ ದೃಢೀಕರಣ ಪತ್ರ, ವ್ಯವಸಾಯಗಾರರ ದೃಢೀಕರಣ, ವ್ಯವಸಾಯಗಾರರ ಕುಟುಂಬ ದೃಢೀಕರಣ, ಸರ್ಕಾರಿ ನೌಕರಿಯಲ್ಲಿಲ್ಲದಿರುವ ಪ್ರಮಾಣ ಪತ್ರ, ಮರು ವಿವಾಹವಾಗಿಲ್ಲ ಘೋಷಣಾ ಪತ್ರ, ಅನುಕಂಪದ ಮೇರೆಗೆ ಆದಾಯ, ಸಾಮಾಜಿಕ ಭದ್ರತೆಗಳು, ವಿಧವಾ ವೇತನ, ಸಂಧ್ಯಾ ಸುರಕ್ಷಾ, ಇಂದಿರಾಗಾಂಧಿ ವೃದ್ಧಾಪ್ಯ ವೇತನ, ವಿಕಲಚೇತನರ ಪಿಂಚಣಿ, ಮನಸ್ವಿನಿ, ರಾಷ್ಟ್ರೀಯ ಭದ್ರತಾ ಯೋಜನೆ ಸೇರಿದಂತೆ ವಿವಿಧ ಬಗೆಯ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುತ್ತಾರೆ. ಅದರಲ್ಲೂ ಜಾತಿ ಮತ್ತು ಆದಾಯ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುವವರ ಸಂಖ್ಯೆ ಹೆಚ್ಚಾಗಿದೆ. ಇದೀಗ ಎಲ್ಲಾ ಪ್ರಮಾಣ ಪತ್ರಗಳು ಪಿಡಿಎಫ್ ರೂಪದಲ್ಲಿ ನೀಡಲಾಗುತ್ತಿರುವುದು ಬಹುತೇಕರಿಗೆ ತೊಂದರೆಯಾಗಿದೆ.

ಗ್ರಾಮೀಣ ಜನರಿಗೆ ತೊಂದರೆ: ವಿವಿಧ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ನಂತರ ಲಿಂಕ್‌ವುಳ್ಳ ಸಂದೇಶ ಮೊಬೈಲ್‌ಗೆ ಕಳುಹಿಸಲಾಗುತ್ತದೆ. ಗ್ರಾಮೀಣ ಪ್ರದೇಶ ಜನರು ಹಾಗೂ ಹಿರಿಯ ನಾಗರಿಕರು ಬಹುತೇಕ ಮಂದಿ ಬೇಸಿಕ್ ಮೊಬೈಲ್ ಬಳಸುವುದರಿಂದ ಲಿಂಕ್ ಓಪನ್ ಮಾಡುವ ಪ್ರಕ್ರಿಯೆ ಅಸಾಧ್ಯ. ಅಲ್ಲದೆ, ಲಿಂಕ್ ಮತ್ತು ಓಟಿಪಿ ಸಂದೇಶಗಳು ಅನಗತ್ಯ ಸಂದೇಶವೆಂದು ಡಿಲಿಟ್ ಮಾಡುವ ಸಾಧ್ಯತೆಯೂ ಇದೆ. ಆ ಕಾರಣದಿಂದ ಕಾಗದ ರಹಿತ ಸೇವೆ ಗ್ರಾಮೀಣ ಜನರಿಗೆ ಕಂಟಕವಾಗಿದೆ.

ಸೈಬರ್ ಸೆಂಟರ್‌ಗೆ ಲಾಭ ಓಟಿಪಿಯೇ ಬರಲ್ಲ: ಜಿಯೋ ಕಂಪನಿಯ ಮೊಬೈಲ್ ಸಂಪರ್ಕ ಹೊಂದಿರುವವರಿಗೆ ಅರ್ಜಿ ಸಲ್ಲಿಸಿದ ಸಂದರ್ಭ ಹಾಗೂ ಲಿಂಕ್ ಓಪನ್ ಮಾಡಬೇಕಾದರೆ ಓಟಿಪಿಯೇ ಬರುತ್ತಿಲ್ಲ. ಇದರಿಂದ ಅರ್ಜಿ ಸಲ್ಲಿಕೆಗೆ ವಿಳಂಬವಾಗುತ್ತಿದೆ. ಅಟಲ್‌ಜೀ ಜನಸ್ನೇಹಿ ಕೇಂದ್ರದ ಮುಂದೆ ಅರ್ಜಿ ಸಲ್ಲಿಸಲು ಬರುವವರು ಜಿಯೋ ಮೊಬೈಲ್ ನಂಬರ್‌ವುಳ್ಳವರು ಪರದಾಡುವಂತಾಗಿದ್ದರೆ, ಸಿಬ್ಬಂದಿಗಳು ತಲೆ ಚಚ್ಚಿಕೊಳ್ಳುವಂತಾಗುತ್ತಿದೆ.

ಕಾಗದ ರಹಿತ ಸೇವೆಯು ಸೈಬರ್ ಸೆಂಟರ್‌ಗಳಿಗೆ ಲಾಭದಾಯಕವಾಗಿ ಪರಿಣಮಿಸಿದೆ. ಪಿಡಿಎಫ್ ತೆಗೆದುಕೊಂಡು ಹೋಗಿ ಪ್ರಿಂಟ್ ತೆಗೆಸಬೇಕಾದ ಒಂದು ಕಾಪಿಗೆ 10 ರಿಂದ 15 ರೂ. ತೆರಬೇಕಾಗಿದೆ. ಹೊಸ ವ್ಯವಸ್ಥೆಯು ಗ್ರಾಮೀಣ ಜನರಿಗೆ ಹೊರೆಯಾಗಿ ಪರಿಣಮಿಸಿದೆ.

ಮೈಸೂರು ನಗರದ ಜಯನಗರ, ಆಕಾಶವಾಣಿ, ಡಾ.ಅಂಬೇಡ್ಕರ್ ವೃತ್ತ(ಎಫ್‌ಟಿಎಸ್), ಶಾರದಾದೇವಿನಗರ, ಹೆಬ್ಬಾಳ್ ಬಸವನಗುಡಿ ಸಮೀಪದ ಅಂಬೇಡ್ಕರ್ ಸಮುದಾಯ ಭವನ, ರಾಮಕೃಷ್ಣನಗರ ವೃತ್ತದ ಬಳಿಯಿರುವ ವಲಯ ಕಚೇರಿಯಲ್ಲಿನ ಅಟಲ್‌ಜೀ ಜನಸ್ನೇಹಿ ಕೇಂದ್ರ, ಮಿನಿ ವಿಧಾನಸೌಧದಲ್ಲಿನ ಕಸಬಾ ಹೋಬಳಿ ಜನಸ್ನೇಹಿ ಕೇಂದ್ರ, ಜಯಪುರ, ವರುಣ, ಇಲವಾಲ ನಾಡಕಚೇರಿ ಹಾಗೂ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿರುವ ನಾಡಕಚೇರಿಯ ಅಟಲ್‌ಜೀ ಜನಸ್ನೇಹಿ ಕೇಂದ್ರದಲ್ಲೂ ಏಕಕಾಲಕ್ಕೆ ಕಾಗದ ರಹಿತ ಸೇವೆ ಆರಂಭವಾಗಿದ್ದು, ಎಲ್ಲೆಡೆ ಜನರಿಗೆ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗುತ್ತಿದೆ.

ಪಿಡಿಎಫ್‌ನೊಂದಿಗೆ ಪ್ರಿಂಟ್ ನೀಡಿ: ಪಿಡಿಎಫ್ ಪ್ರತಿಯೊಂದಿಗೆ ಪ್ರಿಂಟ್ ನೀಡುವ ಪದ್ಧತಿಯನ್ನು ಅನುಸರಿಸಬೇಕು. ಈ ಹಿಂದೆ ಪಡೆಯುತ್ತಿದ್ದಂತೆಯೇ 40 ರೂ. ಶುಲ್ಕ ಪಡೆದ ಮುದ್ರಿತ ಪ್ರತಿ ನೀಡುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ರೈತರಿಗೆ ನೆರವಾಗುವಂತಿರಬೇಕು

ಸರ್ಕಾರ ನಾಡಕಚೇರಿಯಲ್ಲಿರುವ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಕಾಗದ ರಹಿತ ಸೇವೆ ಹೆಸರಿನಲ್ಲಿ ರೈತರು ಹಾಗೂ ಸಾರ್ವಜನಿಕರಿಗೆ ಹೊರೆಯಾಗುವ ಕಾರ್ಯಕ್ರಮ ರೂಪಿಸಿರುವುದು ಖಂಡನೀಯ. ಕಾಗದ ರಹಿತ ಸೇವೆಯಿಂದ ವಿವಿಧ ಪ್ರಮಾಣ ಪತ್ರಗಳನ್ನು ಪಿಡಿಎಫ್ ರೂಪದಲ್ಲಿ ನೀಡುವುದು ಸ್ವಾಗತಾರ್ಹ. ಈ ವ್ಯವಸ್ಥೆ ಗ್ರಾಮೀಣ ಜನರಿಗೆ ವರದಾನವಾಗುತ್ತದೆಯೇ ಎಂದು ಚಿಂತಿಸಬೇಕಾಗಿದೆ. ಈ ನಿಟ್ಟಿನಲ್ಲಿ ಪಿಡಿಎಫ್ ಪ್ರತಿಯೊಂದಿಗೆ ಯಾವುದೇ ಹೆಚ್ಚುವರಿ ಶುಲ್ಕ ಪಡೆಯದೇ ಮುದ್ರಿತ ಪ್ರತಿಯನ್ನು ನೀಡಲು ಕ್ರಮ ಕೈಗೊಳ್ಳಬೇಕು.

– ಕೆ.ಆರ್.ಸೌಮ್ಯ

ಜಯ ಕರ್ನಾಟಕ ಸಂಘಟನೆ ಗೌರವಾಧ್ಯಕ್ಷ ಗುರುಪ್ರಸಾದ್ ಹುಟ್ಟುಹಬ್ಬ ಆಚರಣೆ



ಜಯ ಕರ್ನಾಟಕ ಸಂಘಟನೆಯ ಮೈಸೂರು ಜಿಲ್ಲೆಯ ಗೌರವಾಧ್ಯಕ್ಷ ಗುರುಪ್ರಸಾದ್ ಹುಟ್ಟುಹಬ್ಬ ಆಚರಿಸಲಾಯಿತು.

ಮೈಸೂರು, ಜ. 7– ಜಯ ಕರ್ನಾಟಕ ಸಂಘಟನೆಯ ಮೈಸೂರು ಜಿಲ್ಲೆಯ ಗೌರವಾಧ್ಯಕ್ಷ ಗುರುಪ್ರಸಾದ್‌ಗೌಡರ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಸಂಘಟನೆಯ ನಗರಾಧ್ಯಕ್ಷ ಹರ್ಷಗೌಡರ ನೇತೃತ್ವದಲ್ಲಿ ಶ್ರೀ ಸಾಯಿ ಶಾಲೆ ಮಕ್ಕಳಿಗೆ ಪುಸ್ತಕ ವಿತರಣೆ ಹಾಗೂ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು.

ನಂತರ ಮೈಸೂರು ಜಿಲ್ಲೆ ಕಾರ್ಯಾಧ್ಯಕ್ಷ ಲಾರಿ ಶ್ರೀನಿವಾಸ್ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಘಟನೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ವಿಜಯ ಗೌಡ, ಮೈಸೂರು ಜಿಲ್ಲಾಧ್ಯಕ್ಷ ಶ್ರೀಧರ ನಾಯಕ್, ಉಪಾಧ್ಯಕ್ಷ ಕಾಂತರಾಜು, ಪ್ರಧಾನ ಕಾರ್ಯದರ್ಶಿ ಲಿಂಗರಾಜು, ಸಂಘಟನಾ ಕಾರ್ಯದರ್ಶಿ ವಿಶ್ವ, ಕಾರ್ಯದರ್ಶಿಗಳಾದ ವಿನೋದ್, ಮಂಜುನಾಥ್, ಪವರ್ ಮಂಜುನಾಥ್, ಸತೀಶ, ಸ್ವಾಮಿ, ಸುಬ್ರಮಣ್ಯ ಕ್ಷೇತ್ರದ ಅಧ್ಯಕ್ಷರುಗಳಾದ ಸುರೇಶ್, ರವಿಕುಮಾರ್, ನಗರ ಉಪಾಧ್ಯಕ್ಷ ಸಂದೇಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಶ್ರೀ ಚೇತನ್, ರಾಜು, ಸಂಜಯ್, ಹರ್ಷಿತ್, ಫಣೀಶ್ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ, ಮೈಸೂರಿನ ಪುರಭವನದ ಮುಂಭಾಗ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಡೆಯುತ್ತಿರುವ ಧರಣಿ ಭಾನುವಾರ 62ನೇ ದಿನ ಪೂರೈಸಿತು. ಈ ವೇಳೆ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್(ಜೆಪಿ), ಉಪಾಧ್ಯಕ್ಷ ಸುರೇಶ್ ಗೌಡ, ಮೂಗೂರು ನಂಜುಂಡಸ್ವಾಮಿ, ಮೆಲ್ಲಹಳ್ಳಿ ಮಹಾದೇವಸ್ವಾಮಿ, ಮಂಜುಳಾ, ಪುಷ್ಪ, ಕೃಷ್ಣೇಗೌಡ, ಶಿವಕುಮಾರ್, ಬಾಲಕೃಷ್ಣ ನಾಗರಾಜು, ಕೃಷ್ಣಪ್ಪ, ಹನುಮಂತಯ್ಯ, ರಮೇಶ್, ಆಟೋ ಮಹದೇವ, ವಿಷ್ಣು, ದಾರಿಪುರ ಡಿ.ಚಂದ್ರಶೇಖರ್, ಸಿಂಧುವಳ್ಳಿ ಶಿವಕುಮಾರ್, ಸಿ.ಕೃಷ್ಣ ಕೆ.ಮಹೇಶ್,ರಾಜಶೇಖರ್, ಬಸವರಾಜು, ಅಶೋಕ್, ಹೊನ್ನೇಗೌಡ, ವರಕೊಡು ಕೃಷ್ಣೆಗೌಡ, ಸೋಮಶೇಖರ್, ಎಂ.ರಾಜು, ಆರ್.ಶ್ರೀನಿವಾಸ್, ಜಿ.ನಾಗರಾಜು, ಶ್ರೀನಿವಾಸ್, ಸಂಜಯ, ಯೋಗರಾಜ್, ಕರ್ನಾಟಕ ಸೇನಾಪಡೆಯ ಜಿಲ್ಲಾಧ್ಯಕ್ಷ ತೇಜಸ್ ಲೋಕೇಶ್ ಗೌಡ, ಕರ್ನಾಟಕ ಜನಪರ ವೇದಿಕೆಯ ಗೌರವಾಧ್ಯಕ್ಷರಾದ ಹೊನ್ನೇಗೌಡ, ರಾಜ್ಯಾಧ್ಯಕ್ಷ ಸೋಮೇಗೌಡ, ಪ್ರಜಾ ಪಾರ್ಟಿಯ ನಗರ ಅಧ್ಯಕ್ಷ ಆರ್.ಶ್ರೀನಿವಾಸ್, ಕರ್ನಾಟಕ ಕನ್ನಡಾಂಬೆಯ ವೇದಿಕೆಯ ರಾಜ್ಯಾಧ್ಯಕ್ಷ ಬಿ.ಬಿ .ರಾಜಶೇಖರ್, ಪೈಲ್ವಾನ್ ಬಾಲರಾಮ್, ಎಲ್.ರೇವಣ್ಣ, ಪೈಲ್ವಾನ್ ಬಾಲಾಜಿಪಾಲ್ಗೊಂಡಿದರು.

ನಾಳೆ ಸರ್ವ ಸದಸ್ಯರ ಸಭೆ

ಮೈಸೂರು, ಜ.7–ಮೈಸೂರಿನ ರಾಮಕೃಷ್ಣನಗರ 'ಜಿ', 'ಹೆಚ್' ಬ್ಲಾಕ್ ಮತ್ತು ಆರೋಗ್ಯನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸರ್ವ ಸದಸ್ಯರ ವಾರ್ಷಿಕ ಸಭೆ ಜ.9ರಂದು ಸಂಜೆ 5 ಗಂಟೆಗೆ ರಾಮಕೃಷ್ಣನಗರ 'ಹೆಚ್' ಬ್ಲಾಕ್‌ನಲ್ಲಿರುವ ಪುನೀತ್ ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಲಿದೆ. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಎಂ.ಡಿ.ಕಿಣಿ ವಹಿಸಲಿದ್ದಾರೆ.

ಸಂದಿಗೊಂದಿಯಲ್ಲಿ ಪ್ಲಾಸ್ಟಿಕ್ ಸೇರಿ ತರಾವರಿ ತ್ಯಾಜ್ಯ; ಕಣ್ಣಿಗೆ ಕಾಣುವುದಿಲ್ಲ ಎಂಬುದಷ್ಟೇ ಸಮಾಧಾನ!

ಮೈಸೂರು,ಜ.7(ಪಿಎಂ)– ಅದು ಮೈಸೂರು ನಗರದ ಹೃದಯಭಾಗ. ಅಲ್ಲಿ ಪ್ಲಾಸ್ಟಿಕ್ ಸೇರಿದಂತೆ ಬಗೆಬಗೆಯ ತ್ಯಾಜ್ಯ ಗುಡ್ಡೆ ಹಿಡಿದಿದೆ. ಅದೆಷ್ಟು ದಿನಗಳಿಂದ ಅಲ್ಲಿ ಕಸ ಶೇಖರಣೆಯಾಗಿದೆಯೋ ಗೊತ್ತಿಲ್ಲ. ಕಣ್ಣಿಗೆ ಥಟ್ಟೆಂದು ಕಾಣೋದಿಲ್ಲ ಎಂಬುದಷ್ಟೇ ಸಮಾಧಾನ.


ಹೌದು, ಸಂದಿಗೊಂದಿಯಲ್ಲಿ ಸಿಲುಕಿದ ತ್ಯಾಜ್ಯ ಹಾಗೇ ಬಿಡುವುದು ತರವೇ? ಎಂಬ ಪ್ರಶ್ನೆ ಕಾಡುವಂತೆ ಮಾಡಲಿದೆ ಇಂತಹ ದುಸ್ಥಿತಿಯ ಚಿತ್ರಣ. ಮೈಸೂರು ಅರಮನೆ ಉತ್ತರ ದ್ವಾರದ (ಕೋಟೆ ಆಂಜನೇಯಸ್ವಾಮಿ ದೇವಸ್ಥಾನವಿರುವ ದ್ವಾರ) ಕರ್ಜನ್ ಪಾರ್ಕ್ ಆವರಣದಲ್ಲಿ ಪ್ಲಾಸ್ಟಿಕ್ ಕವರ್‌ನ ತ್ಯಾಜ್ಯ ಮಾತ್ರವಲ್ಲ, ಪ್ಲಾಸ್ಟಿಕ್ ಬಾಟಲಿಗಳೂ ಸೇರಿದಂತೆ ತರಾವರಿ ತ್ಯಾಜ್ಯ ಕಣ್ಣಿಗೆ ರಾಚುತ್ತಿದೆ.

ಪಾರ್ಕ್ ಆವರಣದಲ್ಲಿರುವ ಡಾ.ಎಂ.ಹೆಚ್.ಮರೀಗೌಡ ಅವರ ಪ್ರತಿ ಎದುರು ಪಾರ್ಕ್‌ನ ಮೆಶ್ ಮಾದರಿಯ ಕಾಂಪೌಂಡ್ (ತಡೆಗೋಡೆ) ಮತ್ತು ಇಲ್ಲಿನ ಫುಟ್‌ಪಾತ್‌ಗೆ ಹೊಂದಿಕೊಂಡಂತೆ ಇರುವ ಕಂಬಗಳ ಶೈಲಿಯ ಕಾಂಪೌಂಡ್ ನಡುವೆ ಈ ತ್ಯಾಜ್ಯದ ರಾಶಿ ಸಿಲುಕಿದೆ. ತತ್‌ಕ್ಷಣಕ್ಕೆ ಈ ಕಸದ ರಾಶಿ ಕಾಣಿಸುವುದಿಲ್ಲ. ಒಮ್ಮೆ ಸೂಕ್ಷ್ಮವಾಗಿ ನೋಡಿದರೆ ತ್ಯಾಜ್ಯದ ಗುಡ್ಡೆ ಎದ್ದು ಕಾಣುತ್ತದೆ.

ಚಹ ಕುಡಿದ ಲೋಟಗಳು, ನೀರು ಕುಡಿದು ಬಿಸಾಡಿದ ಪ್ಲಾಸ್ಟಿಕ್ ಬಾಟಲಿಗಳು, ಬಗೆಬಗೆಯ ತಿಂಡಿ ತಿನಿಸು ತಿಂದು ಎಸೆದ ಪ್ಲಾಸ್ಟಿಕ್ ಕವರ್‌ನ ಪೊಟ್ಟಣಗಳು, ಒಂದೇ ಎರಡೇ ಹೇಳುತ್ತಾ ಹೊರಟರೆ ಪಟ್ಟಿ ಬೆಳೆಯುತ್ತಲೇ ಸಾಗುತ್ತದೆ. ಹುಡುಕುತ್ತಾ ಹೊರಟರೆ ಇನ್ನೆಷ್ಟು ಕಸದ ರಾಶಿ ಕಣ್ಣಿಗೆ ರಾಚುವುದೋ ಗೊತ್ತಿಲ್ಲ. ಇನ್ನಾದರೂ ಇಂತಹ ದುಸ್ಥಿತಿ ದೂರವಾಗುವುದೇ? ಇಲ್ಲಿಯೂ ಸ್ವಚ್ಛತೆಗೆ ಸ್ಥಾನ ಸಿಗುವುದೇ? ಕಾದು ನೋಡಬೇಕಿದೆ.



ಕಸದ ರಾಶಿ ಬಿದ್ದಿರುವುದು



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಪ್ರದರ್ಶನವಾಗಲಿರುವ 'ಕುರುಕ್ಷೇತ್ರ' ನಾಟಕದ ಪೋಸ್ಟರ್ ಅನ್ನು ಮೈಸೂರಿನ ಜಯಮ್ಮ ಗೋವಿಂದೇಗೌಡ ಕಲ್ಯಾಣಮಂಟಪದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬಿಡುಗಡೆ ಮಾಡಿದರು. ಈ ವೇಳೆ ಶಾಸಕ ಟಿ.ಎಸ್. ಶ್ರೀವತ್ಸ ಜಿಪಂ ಮಾಜಿ ಅಧ್ಯಕ್ಷ ಕಾ.ಪು. ವೀರಪ್ಪ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಎನ್.ಆರ್. ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಡಿ. ಲೋಕೇಶ್, ರಂಗಭೂಮಿ ಕಲಾವಿದರಾದ ಹೊಸಕೋಟೆ ಪ್ರಭುಸ್ವಾಮಿ, ಹೂಟಗಳ್ಳಿ ಮನೋಹರ್, ಎಂ.ಎಸ್. ಗಜೇಂದ್ರ, ರಾಘವೇಂದ್ರ ಇನ್ನಿತರರಿದ್ದರು.

ಸಹಿ ಹಾಕಲು ಹಾಜರ್; ಕರ್ತವ್ಯಕ್ಕೆ ಚಕ್ಕರ್!

ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ಸಿಬ್ಬಂದಿಯ ಹಾಜರಾತಿ ಸುಧಾರಣೆಗೆ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್.ಚಂದ್ರಶೇಖರ್ ಸಲಹೆ

ಮೈಸೂರು, ಜ.7– ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಹಾಜರಾತಿ ಬಗ್ಗೆ ನಿಗಾ ವಹಿಸುವ ಸಂಬಂಧ ಇತ್ತೀಚೆಗೆ ನಡೆದ ಸಿಂಡಿಕೇಟ್ ತುರ್ತು ವಿಶೇಷ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ.

ಈ ಬಗ್ಗೆ ಸಿಂಡಿಕೇಟ್ ಸದಸ್ಯ ಡಾ.ಟಿ. ಆರ್.ಚಂದ್ರಶೇಖರ್ ಮಾಹಿತಿ ನೀಡಿದ್ದು, ರಾಜಕೀಯ ಪ್ರಭಾವವುಳ್ಳ ಅನೇಕ ನೌಕರರು ಸಹಿ ಹಾಕಿ ಹೊರ ಹೋದರೆ ಮತ್ತೆ ಮರುದಿನ ಹಾಜರಾಗುತ್ತಾರೆ. ಕೆಲ ವಿಭಾಗಗಳ ಮುಖ್ಯಸ್ಥರೂ ನಾಲ್ಕೈದು ದಿನಕ್ಕೊಮ್ಮೆ ಹಾಜರಾತಿಗೆ ಸಹಿ ಹಾಕುತ್ತಿದ್ದಾರೆ ಎಂಬ ದೂರುಗಳು ಕೇಳಿಬಂದಿವೆ. ಹಾಗಾಗಿ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಬಯೋಮೆಟ್ರಿಕ್ ಹಾಜರಾತಿ, ಸಿಸಿ ಕ್ಯಾಮರಾ ವ್ಯವಸ್ಥೆ, ದಿನಕ್ಕೆ ನಾಲ್ಕು ಬಾರಿ ಹಾಜರಾತಿ ಕಡ್ಡಾಯಗೊಳಿಸುವುದರ ಜೊತೆಗೆ ಪ್ರತ್ಯೇಕ ತಂಡ ನಿಯೋಜಿಸಿ ನಿಗಾ ವಹಿಸಿದರೆ ಈ ರೀತಿಯ ಅವ್ಯವಸ್ಥೆ ತಡೆಯಬಹುದು ಎಂದು ಸಭೆಯಲ್ಲಿ ಸಲಹೆ ನೀಡಿದ್ದಾರೆ.

ಅತಂತ್ರ ಸ್ಥಿತಿಯಲ್ಲಿದ್ದಾರೆ: ಮಂಡ್ಯ, ಚಾಮರಾಜನಗರ ಹಾಗೂ ಹಾಸನದಲ್ಲಿನ ಸ್ನಾತಕೋತ್ತರ ಕೇಂದ್ರಗಳು ವಿಭಜನೆಯಾಗಿ ಆಯಾ ಜಿಲ್ಲೆಗಳ ವಿವಿ ವ್ಯಾಪ್ತಿಗೆ ಸೇರಿವೆ. ಮೊದಲ ವರ್ಷದ ವಿದ್ಯಾರ್ಥಿಗಳನ್ನು ಆಯಾ ವಿವಿಗಳೇ ದಾಖಲಾತಿ ಮಾಡಿಕೊಂಡಿವೆ. ಆದರೆ 2ನೇ ವರ್ಷದ ವಿದ್ಯಾರ್ಥಿಗಳು ಮೈಸೂರು ವಿವಿಗೆ ಶುಲ್ಕ ಪಾವತಿಸಿರುವ ಕಾರಣ ಅವರ ಬಗ್ಗೆ ನಿಗಾ ವಹಿಸುತ್ತಿಲ್ಲ. ಹಾಗಾಗಿ ಆ ಕೇಂದ್ರಗಳಿಗೆ ಬೋಧಕ ಸಿಬ್ಬಂದಿ ಒದಗಿಸಲಾಗಿದೆ. ಆದರೆ ಅಲ್ಲಿನ ಬೋಧಕೇತರ ಸಿಬ್ಬಂದಿ ಅತಂತ್ರರಾಗಿದ್ದಾರೆ. ನಾಲ್ಕೈದು ತಿಂಗಳಿಂದ ವೇತನವಿಲ್ಲದೆ ಪರದಾಡುತ್ತಿದ್ದಾರೆ. ಆದರೂ ಕಾರ್ಯ ನಿರ್ವಹಿಸುತ್ತಿರುವ ಅವರು ಮುಷ್ಕರಕ್ಕೆ ಮುಂದಾದರೆ ನಿರ್ವಹಣೆ ಹೇಗೆ ಸಾಧ್ಯ, ವಿದ್ಯಾರ್ಥಿಗಳಿಗೆ ಯಾವ ರೀತಿ ಸೇವೆ ಕಲ್ಪಿಸುತ್ತೀರಿ ಎಂಬ ವಿಚಾರವನ್ನು ಸಭೆಯ ಗಮನಕ್ಕೆ ತರುವುದರ ಜೊತೆಗೆ ಸದ್ಯಕ್ಕೆ ಉಭಯ ವಿವಿಗಳ ಸಹಯೋಗದಲ್ಲಿ ಬೋಧಕೇತರ ಸಿಬ್ಬಂದಿಗೆ ವೇತನ ನೀಡಿ, ಸೇವೆ ಪಡೆಯಲು ಕ್ರಮ ವಹಿಸುವಂತೆ ಮನವಿ ಮಾಡಲಾಗಿದೆ ಎಂದರು.



ಡಾ.ಚಂದ್ರಶೇಖರ್

1138 ಮಂದಿ ಭವಿಷ್ಯದ ಪ್ರಶ್ನೆ: ಜಿಲ್ಲಾವಾರು ವಿಶ್ವವಿದ್ಯಾಲಯಗಳ ಸ್ಥಾಪನೆಯೊಂದಿಗೆ ಮೈಸೂರು ವಿವಿ ವಿಭಜನೆಯಾದ ಸಂದರ್ಭದಲ್ಲಿ 1138 ಅಧ್ಯಾಪಕೇತರ ತಾತ್ಕಾಲಿಕ ಸಿಬ್ಬಂದಿ ನಮ್ಮಲ್ಲಿ ಉಳಿದುಕೊಂಡಿದ್ದಾರೆ. ಇವರನ್ನು ಪ್ರತಿವರ್ಷ ಬಿಡುಗಡೆ ಮಾಡಿ ಮರು ನೇಮಕ ಮಾಡಿಕೊಂಡು ಬರಲಾಗಿದೆ. ಆದರೆ 2023ರ ಆಗಸ್ಟ್ 8ರಂದು ಸರ್ಕಾರದ ಸುತ್ತೋಲೆ ಬಂದಿದ್ದು, ಯಾವುದೇ ಕಾರಣಕ್ಕೂ ತಾತ್ಕಾಲಿಕ ನೌಕರರ ನೇಮಕ ಮಾಡಬಾರದು. ಅವರ ವಜಾ ಮಾಡಿ. ನಿಯಮ ಮೀರಿದರೆ ಕುಲಪತಿ, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿ ಹೊಣೆಗಾರರಾಗುತ್ತಾರೆ ಎಂದು ಅದರಲ್ಲಿ ತಿಳಿಸಲಾಗಿದೆ. ಪರಿಣಾಮ ಈ ಬಾರಿ ತಾತ್ಕಾಲಿಕ ಸಿಬ್ಬಂದಿ ಮರು ನೇಮಕ ಸಾಧ್ಯವಿಲ್ಲ ಎಂದು ಸದಸ್ಯ ಕಾರ್ಯದರ್ಶಿಗಳೂ ಆದ ವಿವಿ ಕುಲಸಚಿವರು ಸಭೆಯ ಗಮನಕ್ಕೆ ತಂದರು. ಅಲ್ಲದೆ ಈ ಹಿಂದೆಯೂ ಹಲವು ಬಾರಿ ಸರ್ಕಾರದಿಂದ ಸುತ್ತೋಲೆಗಳು ಬಂದಿವೆ ಎಂದರು. ಆದರೆ ಈ ರೀತಿ ಸುತ್ತೋಲೆಗಳು ಬಂದ ಸಂದರ್ಭದಲ್ಲಿ ಯಾವ ರೀತಿಯ ಕ್ರಮ ವಹಿಸಲಾಗಿದೆ ಎಂಬುದಕ್ಕೆ ಸ್ಪಷ್ಟತೆ ಸಿಗಲಿಲ್ಲ ಎಂದು ಹೇಳಿದ್ದಾರೆ.

ಸಭೆಯಲ್ಲಿ ನೀಡಿದ್ದ 1138 ಸಿಬ್ಬಂದಿ ವಿವರದಲ್ಲಿ ಉದ್ಯೋಗಿ ಹೆಸರು, ಕಾರ್ಯ ನಿರ್ವಹಿಸುತ್ತಿರುವ ವಿಭಾಗ ಹಾಗೂ ವೇತನವನ್ನಷ್ಟೇ ನಮೂದಿಸಲಾಗಿತ್ತು. ಅವರು ಯಾವ ಹುದ್ದೆಯಲ್ಲಿದ್ದಾರೆ, ಅವರ ವಿದ್ಯಾರ್ಹತೆ ಹಾಗೂ ನೇಮಕದ ದಿನಾಂಕವೂ ಇರಲಿಲ್ಲ. ಹಾಗಾದರೆ ನಿವೃತ್ತಿ ಅಂಚಿನಲ್ಲಿರುವವರು ಹಾಗೂ ಕಳೆದ ವರ್ಷ ನೇಮಕವಾದವರೂ ಒಂದೇನಾ ಎಂದು ಪ್ರಶ್ನಿಸಿದಾಗ ನಂತರದಲ್ಲಿ ಸಮಗ್ರ ಮಾಹಿತಿ ನೀಡುವುದಾಗಿ ತಿಳಿಸಿದರು.

ಈ ಎಲ್ಲಾ ಗೋಜಲುಗಳ ನಡುವೆ ತಾತ್ಕಾಲಿಕ ಸಿಬ್ಬಂದಿಯನ್ನು ಏಕಾಏಕಿ ತೆಗೆದುಹಾಕಲು ಸಾಧ್ಯವಿಲ್ಲ. ಹಾಗೆಯೇ ಸರ್ಕಾರಿ ಸುತ್ತೋಲೆಯನ್ನೂ ಉಲ್ಲಂಘನೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಕಾನೂನು, ಹಣಕಾಸು ತಜ್ಞರು, ನೌಕರರ ಪ್ರತಿನಿಧಿ, ಸಿಂಡಿಕೇಟ್ ಸದಸ್ಯರು, ಇದಕ್ಕೆ ಆಕ್ಷೇಪಣೆ ಮಾಡಬಹುದಾದ ಇಲಾಖೆಯ ಅಧಿಕಾರಿ ಸೇರಿದಂತೆ ಅತ್ಯುನ್ನತ ತಜ್ಞರ ಸಮಿತಿ ರಚಿಸಿ, ಆ ಮೂಲಕ ಪರಿಶೀಲನೆ ನಡೆಸಿದ ನಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸೋಣ. ನೌಕರರ ಭವಿಷ್ಯದ ಪ್ರಶ್ನೆಯಾಗಿರುವುದರಿಂದ ಸೂಕ್ಷ್ಮವಾಗಿ ನಿಭಾಯಿಸಬೇಕೆಂಬ ಸಲಹೆಯನ್ನು ಸಭೆ ಮನ್ನಿಸಿತು.

ಗದ್ದಿಗೆಯಲ್ಲಿ ವೈಭವದ ಹನುಮ ಜಯಂತಿ ಮೆರವಣಿಗೆ

ಇಡೀ ಮೆರವಣಿಗೆ ಕೇಸರಿಮಯ, ಕುಣಿದು ಕುಪ್ಪಳಿಸಿದ ಯುವ ಪಡೆ

ಹುಣಸೂರು, ಜ.7– ತಾಲೂಕಿನ ಬಿಳಿಕೆರೆ ಹೋಬಳಿಯ ಶ್ರೀ ಕ್ಷೇತ್ರ ಗದ್ದಿಗೆಯ ಕೆಂಡಗಣ್ಣೇಶ್ವರ ಸ್ವಾಮಿ ಸನ್ನಿಧಿ ಬಳಿ ಎರಡನೇ ವರ್ಷದ ಹನುಮ ಜಯಂತಿ ಮೆರವಣಿಗೆ ಶಾಂತಿಯುತವಾಗಿ ವೈಭವದಿಂದ ನಡೆಯಿತು.

ಹನುಮ ಜಯಂತಿ ಪ್ರಯುಕ್ತ ಮಧ್ಯಾಹ್ನ 2ಕ್ಕೆ ಕರಿಮುದ್ದನಹಳ್ಳಿ ರಾಮಮಂದಿರದಲ್ಲಿ ಕೆಂಡಗಣ್ಣಸ್ವಾಮಿ ಅರ್ಚಕರಾದ ಶ್ರೀಹರಿ, ಮಹೇಶ್ ನೇತೃತ್ವದಲ್ಲಿ ವಿಶೇಷ ಹೋಮ, ಹವನ ನಡೆಸಿ ನಂತರ ಪ್ರಸಾದ ವಿತರಿಸಲಾಯಿತು.

ಮಧ್ಯಾಹ್ನ 2ಕ್ಕೆ ಹೊರಟ ಹನುಮ ಭಕ್ತರ ಶೋಭಾಯಾತ್ರೆಯು ಕರಿಮುದ್ದನಹಳ್ಳಿ ರಾಮಮಂದಿರದ ಬಳಿ ಬೆಳ್ಳಿ ರಥದಲ್ಲಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪ್ರಾರಂಭಗೊಂಡು ಮೆರವಣಿಗೆಯಲ್ಲಿ ಬೃಹತ್ ಆಂಜನೇಯ ವಿಗ್ರಹಗಳು, ರಾಮ–ಸೀತಾ–ಲಕ್ಷ್ಮಣ, ಹನುಮ ಗದೆ ಹನುಮ ಭಕ್ತರನ್ನು ಆಕರ್ಷಿಸಿತು. ಕೆಂಡಗಣ್ಣಸ್ವಾಮಿ ಗದ್ದುಗೆ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ವೀರಗಾಸೆ, ಡೊಳ್ಳು ಕುಣಿತ, ಮಂಗಳವಾದ್ಯ, ನಗಾರಿಯೊಂದಿಗೆ ಮೆರವಣಿಗೆ ನಡೆಸಲಾಯಿತು. ನಗಾರಿ ಸದ್ದಿಗೆ ಯುವ ಪಡೆ ಕುಣಿದು ಕುಪ್ಪಳಿಸಿತು.

ಮೆರವಣಿಗೆಗೆ ದೇವಸ್ಥಾನದ ಪ್ರಧಾನ ಅರ್ಚಕ ಕೆಂಡಗಣ್ಣಪ್ಪ ಪೂಜೆ ನೆರವೇರಿಸಿದರು. ನಂತರ ರೈತ ಕಲ್ಯಾಣ ಸಂಘದ ರಾಜ್ಯ ಅಧ್ಯಕ್ಷ ಚಂದನ್‌ಗೌಡ, ವರ್ತಕರ ಸಂಘದ ಅಧ್ಯಕ್ಷ ಸೂರ್ಯಕುಮಾರ್, ಹುಣಸೂರು ಹನುಮಂತೋತ್ಸವ ಸಮಿತಿ ಅಧ್ಯಕ್ಷ ವಿ.ಎನ್.ದಾಸ್, ಸ್ಥಳೀಯ ಜನಪ್ರತಿನಿಧಿಗಳು ಸೇರಿದಂತೆ ಗಣ್ಯರು ಸನ್ನಿಧಿಯ ಮುಂಭಾಗ ಪುಷ್ಪಾರ್ಚನೆಗೈಯುವ ಮೂಲಕ ಚಾಲನೆ ನೀಡಿದರು.

ಕೇಸರಿಮಯವಾದ ಗದ್ದಿಗೆ; ಮೆರವಣಿಗೆ ಯುದ್ದಕ್ಕೂ ಕೇಸರಿ ರುಮಾಲು, ಜುಬ್ಬಾ ಧರಿಸಿದ್ದ, ಶಾಲು ಹೊದ್ದಿದ್ದ, ಕೈಯಲ್ಲಿ ಕೇಸರಿ ಬಾವುಟ ಹಿಡಿದ ಹನುಮ ಭಕ್ತರು ಕೇಸರಿಮಯಗೊಳಿಸಿ ಇಡೀ ಮೆರವಣಿಗೆ ಕೇಸರಿಯ ರಂಗೇರಿಸಿದ್ದರಿಂದ ಶ್ರೀ ಕ್ಷೇತ್ರವೇ ಕೇಸರಿಮಯವಾಗಿತ್ತು, ಹನುಮಭಕ್ತರು ಶ್ರೀರಾಂಕೀ ಜೈ, ಹನುಮಾನ್ ಕೀ ಜೈ ಎಂದು ಘೋಷಣೆ ಕೂಗುತ್ತಾ, ವಾದ್ಯ, ತಮಟೆ, ನಗಾರಿ ಹಾಗೂ ಡಿ.ಜೆ. ಸದ್ದಿಗೆ ಯುವಪಡೆ ಕುಣಿದು ಕುಪ್ಪಳಿಸಿತು.

ಉತ್ಸವ ಮೂರ್ತಿಗೆ ಪೂಜೆ: ಮೆರವಣಿಗೆ ಆರಂಭವಾಗುತ್ತಿದ್ದಂತೆ ಕರಿಮುದ್ದನಹಳ್ಳಿ, ಕುಟ್ಟವಾಡಿ, ಬಸವನಹಳ್ಳಿ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ ಭಕ್ತರು ತಂಡೋಪ ತಂಡವಾಗಿ ಆಗಮಿಸಿ ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿದ್ದರು, ರಸ್ತೆಯ ಇಕ್ಕೆಲಗಳಲ್ಲಿ ಹಾಗೂ ಮನೆಯಮಹಡಿ, ತಾರಸಿಗಳ ಮೇಲೆ ನಿಂತು ಮೆರವಣಿಗೆ ವೀಕ್ಷಿಸಿದರು. ಅಲ್ಲಲ್ಲಿ ಹನುಮನಿಗೆ ಪೂಜೆ ಸಹ ಮಾಡಿಸಿದರು.

ಯುವಪಡೆ ಕುಣಿದು ಕುಪ್ಪಳಿಸಿತು. ಮೆರವಣಿಗೆ ಸಾಗುವ ದಾರಿಯುದ್ದಕ್ಕೂ ಸೇರಿದ ಜನರಿಗೆ, ಬಾಳೆಮಂಡಿ ಸಂತೋಷ್, ನಾಗೇಂದ್ರ, ದೇವಸ್ಥಾನದ ಆಡಳಿತ ಮಂಡಳಿ ನೇತೃತ್ವದ ತಂಡ ಮೂರು, ನಾಲ್ಕು ಕಡೆ ಬಾತ್, ಮೊಸರನ್ನ, ಮಜ್ಜಿಗೆ, ಪಾನಕಗಳನ್ನು ನೀಡಿ ಬಿಸಿಲಿನ ಝಳಕ್ಕೆ ಬಳಲಿದ್ದ ಹನುಮಭಕ್ತರಿಗೆ ವಿತರಿಸಿದರು.

ಮೆರವಣಿಗೆಯಲ್ಲಿ ಕಲಾಸಂಘ, ಪಟಕುಣಿತ, ಮಕ್ಕಳ ಕುಣಿತ ಕಳೆಗಟ್ಟಿತ್ತು. ಮೆರವಣಿಗೆಯಲ್ಲಿ ಕೇಸರಿ ಪೇಟ ತೊಟ್ಟಿದ್ದ ಹನುಮ ಭಕ್ತರು ಸಾಕಷ್ಟಿದ್ದರು. ಹನುಮ ಸಮಿತಿಯ ಮಧು, ಚೇತನ್, ಕುಂಟೇಗೌಡ, ಶ್ರೀನಿವಾಸ್, ಕಾರ್ತಿಕ್, ಅನಂತು, ಚಂದ್ರವೌಳಿ ಸೇರಿದಂತೆ ಅನೇಕ ಮುಖಂಡರು ಹಾಜರಿದ್ದರು.



ಶ್ರೀ ಕ್ಷೇತ್ರ ಗದ್ದಿಗೆಯ ಕೆಂಡಗಣ್ಣೇಶ್ವರ ಸ್ವಾಮಿ ಸನ್ನಿಧಿ ಬಳಿ ನಡೆದ ಹನುಮ ಜಯಂತಿ ಮೆರವಣಿಗೆ.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ಡೆವಿಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಲಾರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಟೇರ (ಕ)	4 ಪ್ರದರ್ಶನಗಳು
ಸಂಗಂ	
ಸಲಾರ್ (ಕ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್–3 (ಹಿಂ)	4 ಪ್ರದರ್ಶನಗಳು
ಪ್ರಭಾ	
on line ಮದುವೆ off line ಶೋಭನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪ್ರೇಮ ಕಥ (ತೆ): ಬೆ.10.20ಕ್ಕೆ, ಮಾಥಿಮಾರನ್ (ತ): ಮ.1.05ಕ್ಕೆ, ಸಲಾರ್–1 (ತೆ): ಮ.3.40ಕ್ಕೆ, ಕಾಟೇರ (ಕ): ರಾ.7.05ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಮ.12.05ಕ್ಕೆ, ಕಾಟೇರ (ಕ): ಮ.3.50ಕ್ಕೆ, ರಾ.10ಕ್ಕೆ, ಪ್ರೇಮ ಕಥ (ತೆ): ರಾ.7.15ಕ್ಕೆ.
ಸ್ಕ್ರೀನ್ 3	ಒಂಟಿ ಬಂಟಿ ಲವ್ ಸ್ಟೋರಿ (ಕ): ಬೆ.10.20ಕ್ಕೆ, ಡಂಕಿ (ಹಿಂ): ಮ.1.20ಕ್ಕೆ, ರಾ.7.10ಕ್ಕೆ, ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಸಂ.4.30ಕ್ಕೆ, ಆಟಂ (ಮ): ರಾ.10.15ಕ್ಕೆ.
ಸ್ಕ್ರೀನ್ 4	ಕಾಟೇರ (ಕ): ಬೆ.9.50ಕ್ಕೆ, ಮ.1.15ಕ್ಕೆ, ಸಂ.4.45ಕ್ಕೆ, ರಾ.8.30ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕಾಟೇರ (ಕ): ಬೆ.11.30ಕ್ಕೆ, ಮ.3.10ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಾಟೇರ (ಕ): ಬೆ.10.30ಕ್ಕೆ, ಮ.2.10ಕ್ಕೆ, ಸಂ.5.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಸಲಾರ್–1 (ಕ): ಬೆ.11ಕ್ಕೆ, ಸಂ.6.10ಕ್ಕೆ, ರಾ.9.45ಕ್ಕೆ, ಸಲಾರ್ –1 (ಹಿಂ): ಮ.2.35ಕ್ಕೆ,
ಸ್ಕ್ರೀನ್ 4	ಮೈಗ್ರೇಷನ್ (3ಡಿ)(ಇಂ): ಬೆ.10.30ಕ್ಕೆ, ರಾ.7.55ಕ್ಕೆ, ಡಂಕಿ (ಹಿಂ): ಮ.12.35ಕ್ಕೆ, ಸಂ.4.35ಕ್ಕೆ, ಸಲಾರ್–1 (ಹಿಂ): ರಾ.10ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬೆಟ್ಟಳ್ಳಿ ಹಾಲು ಉತ್ಪಾದಕ ಸಹಕಾರ ಸಂಘ ಜೆಡಿಎಸ್ ಪಾಲು



ಬನ್ನೂರು, ಜ.7– ಪಟ್ಟಣದ ಸಮೀಪದ ಬೆಟ್ಟಳ್ಳಿ ಗ್ರಾಮದಲ್ಲಿ ನಡೆದ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ, ಮುಖಂಡ ನಾಗೇಶ್ ಅವರ ಜೆಡಿಎಸ್ ಬಣ ಜಯಭೇರಿ ಬಾರಿಸಿದ್ದು, ಡೈರಿಯ ಚುಕ್ಕಾಣಿಯನ್ನು ಹಿಡಿದಿದೆ.

ಅದರಂತೆ ಜೆಡಿಎಸ್ ಮತ್ತು ಕಾಂಗ್ರೆಸ್ ಬೆಂಬಲಿತ ಬಣಗಳು ಅರ್ಜಿ ಸಲ್ಲಿಸಿ, ಚುನಾವಣೆಯಲ್ಲಿ ಭಾಗವಹಿಸಿದ್ದರು. ಬಿಗಿ ಬಂದೋಬಸ್ತ್‌ನಲ್ಲಿ ನಡೆದ ಚುನಾವಣೆಯಲ್ಲಿ ಮುಖಂಡ ನಾಗೇಶ್ ಅವರ ಜೆಡಿಎಸ್ ಬಣ ಜಯಭೇರಿ ಬಾರಿಸಿದ್ದು, ಎಂಟು ಜನ ನಿರ್ದೇಶಕರು ಆಯ್ಕೆಯಾದರು. ನಾಗೇಶ್, ಜೋಗಿಸಿದ್ದೇಗೌಡ, ರಂಗಸ್ವಾಮಿ, ಜವನೇಗೌಡ, ರಾಮಚಂದ್ರು, ಕುಮಾರ, ನಾಗರಾಜು, ಪ್ರೇಮ ಅವರುಗಳು ಜಯಭೇರಿ ಬಾರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜೆಡಿಎಸ್ ಮುಖಂಡ ನಾಗೇಶ್, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಹಾಗೂ ಮಾಜಿ ಶಾಸಕ ಎಂ.ಅಶ್ವಿನ್‌ಕುಮಾರ್‌ರವರ ಉತ್ತಮ ಆಡಳಿತ ಜನರ ಮನದಲ್ಲಿ ಹಸಿರಾಗಿದ್ದು, ಇಂದಿನ ಚುನಾವಣೆಯ ಯಶಸ್ಸು ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಮುಂದಿನ ದಿನದಲ್ಲಿ ಜೆಡಿಎಸ್ ರಾಜ್ಯದಲ್ಲಿ ಗೆಲುವಿನ ಬಾವುಟ ಹಾರಿಸಲಿದೆ ಎಂದು ತಿಳಿಸಿದರು. ಡೈರಿಯ ಚುನಾವಣೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗು ವಂದಿಸುವುದಾಗಿ ತಿಳಿಸಿದರು.

ನಾಗೇಶ್, ಜೋಗಿಸಿದ್ದೇಗೌಡ, ರಂಗಸ್ವಾಮಿ, ಪ್ರೇಮ, ರಾಮಚಂದ್ರು, ಕುಮಾರ್, ಜವನೇಗೌಡ, ನಾಗರಾಜು ಸೇರಿದಂತೆ ಗ್ರಾಮದ ಎಲ್ಲಾ ಮುಖಂಡರು, ಯುವ ಜೆಡಿಎಸ್ ಪಡೆ ಸದಸ್ಯರು, ಹಲವರು ಉಪಸ್ಥಿತರಿದ್ದರು.

ತಿ.ನರಸೀಪುರದಲ್ಲಿ ಟೈಲರ್‌ಗಳಿಗೆ ಗುರುತಿನ ಚೀಟಿ ವಿತರಣೆ



ತಿ.ನರಸೀಪುರದಲ್ಲಿ ತಾಲೂಕು ಟೈಲರ್ ಸಂಘ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಟೈಲರ್ ಸಂಘದ ಸದಸ್ಯರಿಗೆ ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು ಗುರುತಿನ ಚೀಟಿ ವಿತರಿಸಿದರು.

ತಿ.ನರಸೀಪುರ: ಮನುಷ್ಯನಿಗೆ ಮಾನಸಿಕ ರೂಪದಷ್ಟೇ ದೈಹಿಕ ರೂಪವೂ ಮುಖ್ಯ, ಮಾನವನ ಬಾಹ್ಯ ಸೌಂದರ್ಯಕ್ಕೆ ರೂಪ ಕೊಡುವ ಶಕ್ತಿ ಟೈಲರ್‌ಗಳಿಗೆ ಇದೆ ಎಂದು ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು ಹೇಳಿದರು.

ಪಟ್ಟಣದ ತಾಲೂಕು ಟೈಲರ್ ಸಂಘದ ಕಚೇರಿಯಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಟೈಲರ್‌ಗಳಿಗೆ ಗುರುತಿನ ಚೀಟಿ ವಿತರಿಸಿ ಅವರು ಮಾತನಾಡಿದರು.

ಜನರು ಹೊಸ ವಿನ್ಯಾಸದ ಉಡುಪು ಧರಿಸಿದರೂ ಕೂಡ ಹಳೆಯ ಕಾಲದ ಉಡುಪುಗಳಿಗೆ ಮಾರುಹೋಗುತ್ತಿದ್ದಾರೆ. ಬಟ್ಟೆ ಹೊಲಿಯುವ ವಿನ್ಯಾಸದಲ್ಲಿ ಹೊಸ ಹೊಸ ಅನ್ವೇಷಣೆ ಆಗುತ್ತಿವೆ. ಟೈಲರ್ ವೃತ್ತಿ ಮಾಡುವವರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದುವರಿಯಬೇಕು. ವಿಶ್ವಾಸ, ನಂಬಿಕೆ ಹೆಚ್ಚು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಅಸಂಘಟಿತ ಕಾರ್ಮಿಕರು ಮುಖ್ಯವಾಹಿನಿಗೆ ಬಂದು ಸರ್ಕಾರದಿಂದ ದೊರೆಯುವ ಪ್ರತಿಯೊಂದು ಸೌಲಭ್ಯಗಳನ್ನು ಪಡೆದುಕೊಳ್ಳಬೇಕು, ಮನುಷ್ಯನಿಗೆ ಅವಶ್ಯಕವಾಗಿ ಅಗತ್ಯವಿರುವ ವಸ್ತ್ರವನ್ನು ತಯಾರು ಮಾಡುವ ವೃತ್ತಿಯನ್ನು ಹೊಂದಿರುವ ಟೈಲರ್‌ಗಳು ಸಂಘಟಿತರಾಗಿ ಸಂಘಗಳನ್ನು ರಚನೆ ಮಾಡಿಕೊಂಡು ತಮಗೆ ದೊರೆಯಬೇಕಾದ ನ್ಯಾಯ ಕೇಳಲು ಮುಂದಾಗಿರುವುದು ಉತ್ತಮ ಬೆಳವಣಿಗೆ. ಸರ್ಕಾರದಿಂದ ಸಿಗುವ ಪ್ರತಿಯೊಂದು ಸೌಲಭ್ಯಗಳನ್ನು ಟೈಲರ್ ಸಮುದಾಯಕ್ಕೆ ಕ್ಷೇತ್ರದ ಶಾಸಕರು ಹಾಗೂ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರಿಂದ ಕೊಡಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಸೋಮು ಭರವಸೆ ನೀಡಿದರು.

ಸಂಘದ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, ಸರ್ಕಾರ ಅಸಂಘಟಿತ ಕಾರ್ಮಿಕರಾಗಿರುವ ಟೈಲರ್ ಸಂಘಕ್ಕೆ ಅನೇಕ ಉಪಯುಕ್ತ ಯೋಜನೆಗಳನ್ನು ಜಾರಿಗೆ ತಂದಿದೆ. ಒಗ್ಗಟ್ಟಿನ ಕೊರತೆಯಿಂದ ನಾವದನ್ನು ಪಡೆಯಲು ವಿಫಲರಾಗಿದ್ದೇವೆ ಎಂದರು.

ಸಚಿವರ ಆಪ್ತ ಕಾರ್ಯದರ್ಶಿ ಬಸವರಾಜು, ಸಂಘದ ಉಪಾಧ್ಯಕ್ಷ ಕಾರ್ತಿಕ್ ಮಹದೇವಸ್ವಾಮಿ, ಎಂ.ಮಹದೇವ, ಸಂಘಟನಾ ಕಾರ್ಯದರ್ಶಿ ಹೆಮ್ಮಿಗೆ ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ರಾಜಾ ಬುದ್ಧಿ,ಯಶಸ್ವಿನಿ ನಾಗರಾಜ್, ಹರೀಶ್, ಬಸವರಾಜು, ನಾಗರಾಜು, ಗುರು, ನಜೀರ್, ಶ್ರೀರಾಂಪುರ ಸುರೇಶ್, ಶೈಲಜಾ, ವಿಮಲ, ಸ್ಪೂರ್ತಿ ಮತ್ತಿತರರಿದ್ದರು.

ಜ.30 ರಂದು ಟೈಲರ್ ಸಂಘದ ಬೆಳ್ಳಿ ಮಹೋತ್ಸವ!

ಟೈಲರ್ ಸಂಘದ ಬೆಳ್ಳಿ ಮಹೋತ್ಸವ ಕಾರ್ಯಕ್ರಮ ಇದೇ ತಿಂಗಳು 30 ರಂದು ಬೆಂಗಳೂರಿನಲ್ಲಿ ನಡೆಯುತ್ತಿದ್ದು ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಟೈಲರ್‌ಗಳು ಭಾಗವಹಿಸಬೇಕು ಎಂದು ಮಹದೇವಸ್ವಾಮಿ ಮನವಿ ಮಾಡಿದರು.

ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಕಾರ್ಯ ಶ್ಲಾಘನೀಯ



ನಂಜನಗೂಡು, ಜ.7–ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯು ಸಮಾಜದ ಬಡವರಿಗೆ ಆರ್ಥಿಕ ನೆರವನ್ನು ಒದಗಿಸುವ ಮೂಲಕ ಸೇವೆ ಸಲ್ಲಿಸುತ್ತಿರುವುದು ಸಂತೋಷದಾಯಕವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ನಗರದ ಬೈಪಾಸ್ ರಸ್ತೆಯಲ್ಲಿರುವ ಬಸವೇಶ್ವರ ದೇವಾಲಯದಲ್ಲಿ ವೀರಶೈವ ಕೋ ಆಪರೇಟಿವ್ ಸೊಸೈಟಿಯ ನೂತನ ವರ್ಷದ ಕ್ಯಾಲೆಂಡರ್‌ನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸೊಸೈಟಿಯ ಮೂಲಕ ಸಮಾಜದ ಬಂಧುಗಳಿಗೆ ಆರೋಗ್ಯ, ವಿದ್ಯಾಭ್ಯಾಸ, ಗೃಹ ನಿರ್ಮಾಣದಂತಹ ಉದ್ದೇಶಗಳಿಗೆ ಸಾಲ ಸೌಲಭ್ಯ ನೀಡಿ ಆರ್ಥಿಕ ನೆರವು ನೀಡುವ ಜೊತೆಗೆ ಸಾಮಾಜಿಕ ಚಟುವಟಿಕೆಯಲ್ಲೂ ಸಹ ತೊಡಗಿಸಿಕೊಂಡಿರುವುದು ಉತ್ತಮ ಬೆಳವಣಿಗೆ. ಈ ಸೊಸೈಟಿಯನ್ನು ಸಹಕಾರಿ ತತ್ವದಂತೆ ಮುನ್ನಡೆಸುವ ಮೂಲಕ ಉನ್ನತಮಟ್ಟಕ್ಕೆ ಕೊಂಡೊಯ್ಯಿರಿ, ಬಡವರಿಗೆ ಸೇವೆ ಒದಗಿಸಿ ಎಂದು ಸಲಹೆ ನೀಡಿದರು.

ವೀರಶೈವ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಸಿ.ಬಸವಣ್ಣ, ಎಂ.ವಿ. ಶಿವಕುಮಾರ್, ಡಿಎಸ್. ಕೆಂಡಗಣ್ಣಸ್ವಾಮಿ, ಎನ್.ವಿ.ವಿನಯ್ ಕುಮಾರ್, ರಮೇಶ್, ಶಾಂತಕುಮಾರಿ, ಬದನವಾಳು ಮಂಜುನಾಥ್, ರಾಜಶೇಖರ್, ಪ್ರಕಾಶ್, ಮಾಜಿ ನಗರಸಭಾಧ್ಯಕ್ಷ ಮಹದೇವಸ್ವಾಮಿ, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಜಾತಿ ನಿಂದನೆ ಮಾಡಿದ ವ್ಯಕ್ತಿ ಗಡಿಪಾರಿಗೆ ಆಗ್ರಹ



ತಿ.ನರಸೀಪುರ ಪಟ್ಟಣದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಡಾ.ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ ಮಾತನಾಡಿದರು.

ತಿ.ನರಸೀಪುರ: ಚಿಕ್ಕಮಗಳೂರು ಜಿಲ್ಲೆ ಕೇರಿ ಮರಳ್ಳಿ ಗ್ರಾಮದಲ್ಲಿ ಮಾದಿಗ ಸಮುದಾಯದ ವ್ಯಕ್ತಿಗೆ ಜಾತಿ ನಿಂದನೆ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಗೊಲ್ಲಹಳ್ಳಿ ಗ್ರಾಮದ ವ್ಯಕ್ತಿಯನ್ನು ಗಡಿಪಾರು ಮಾಡುವಂತೆ ತಾಲೂಕು ಡಾ.ಬಾಬು ಜಗಜೀವನರಾಂ ಸಂಘ ಒತ್ತಾಯಿಸಿದೆ.

ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ, ಕೇರಿ ಮರಳ್ಳಿ ಗ್ರಾಮದಲ್ಲಿ ಎಡಗೈ ಜನಾಂಗದ ವ್ಯಕ್ತಿಗೆ ಗೊಲ್ಲಹಳ್ಳಿ ಗ್ರಾಮದ ವ್ಯಕ್ತಿಯೊಬ್ಬ ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸುವ ಜೊತೆಗೆ ಅವರ ಕುಟುಂಬದವರನ್ನು ನಿಂದಿಸಿ ಜಾತಿನಿಂದನೆ ಮಾಡಿದ ಘಟನೆ ಖಂಡನೀಯವಾಗಿದ್ದು, ಕೂಡಲೇ ಆರೋಪಿಯನ್ನು ಗ್ರಾಮದಿಂದ ಗಡಿಪಾರು ಮಾಡಿ ಉಗ್ರ ಶಿಕ್ಷೆ ನೀಡಬೇಕು. ಇಲ್ಲವಾದಲ್ಲಿ ತಾಲೂಕಿನ ಮಾದಿಗ ಸಮುದಾಯ ಉಗ್ರ ಹೋರಾಟ ಮಾಡಲಿದೆ ಎಂದು ಎಚ್ಚರಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಡಿ. ವೆಂಕಟೇಶ್ ಮಾತನಾಡಿ, ಗೊಲ್ಲರಹಟ್ಟಿ ಗ್ರಾಮದ ವ್ಯಕ್ತಿಯೊಬ್ಬರು ಮಾದಿಗ ಸಮುದಾಯದ ಮಾರುತಿ ಎಂಬುವರ ಮೈಮೇಲೆ ಮೂತ್ರ ಸುರಿದು ಹಲ್ಲೆ ನಡೆಸಿದ್ದು, ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ ಅವರಿಗೆ ಗಡಿಪಾರಿನ ಶಿಕ್ಷೆ ವಿಧಿಸುವ ಜೊತೆಗೆ ಆ ಕುಟುಂಬಕ್ಕೆ ರಕ್ಷಣೆ ನೀಡಿ ಉದ್ಯೋಗ ದೊರಕಿಸಿಕೊಡಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಶಿವಶಂಕರ್, ಖಜಾಂಚಿ ಬಿ.ಎಲ್. ಮಹದೇವ್, ನಿರ್ದೇಶಕ ನಾರಾಯಣ, ವಿಜಾಪುರ ನಿಂಗರಾಜು, ಪುಟ್ಟಶಂಭಯ್ಯ, ಕುಪ್ಯ ಶಂಭಯ್ಯ ಹಾಜರಿದ್ದರು.

ಹಲ್ಲರೆ ಡೈರಿ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಮಲ್ಕುಂಡಿ: ಸಮೀಪದ ಹಲ್ಲರೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಪಿ.ಸಿದ್ದಪ್ಪ, ಉಪಾಧ್ಯಕ್ಷರಾಗಿ ನಂಜುಂಡಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಪಿ.ಸಿದ್ದಪ್ಪ, ಉಪಾಧ್ಯಕ್ಷ ಸ್ಥಾನಕ್ಕೆ ನಂಜುಂಡಪ್ಪ ಇವರಿಬ್ಬರೇ ನಾಮಪತ್ರ ಸಲ್ಲಿಸಿದ್ದು ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾದರು. ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಮಂಜು ಘೋಷಣೆ ಮಾಡಿದರು.

ನಿರ್ದೇಶಕರಾದ ಹೆಚ್.ಎಂ.ಸ್ವಾಮಿ, ಲಿಂಗರಾಜು, ನಟರಾಜ್, ಚನ್ನಬಸಪ್ಪಚಾರ್, ಸ್ವಾಮಿ, ಹೆಚ್.ಡಿ.ನಾಗರಾಜು, ಮಾದನಾಯಕ, ಪುಟ್ಟ ಹನುಮಂತಯ್ಯ, ಮಹದೇವಮ್ಮ, ಲತಾ, ಕಾರ್ಯದರ್ಶಿ ಹೆಚ್.ಎಸ್.ಜಗದೀಶ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಿವಬುದ್ಧಿ, ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಕಾಂಗ್ರೆಸ್ ಮುಖಂಡ ಮಹೇಶ್, ಮುಖಂಡರುಗಳಾದ ಸ್ವಾಮಿನಾಯಕ, ರಾಮಕೃಷ್ಣಯ್ಯ, ಶಿವಮಲ್ಲಪ್ಪ, ಜಾಫರ್ ಪ್ರಮುಖರು ಹಾಜರಿದ್ದರು.



ತಿ.ನರಸೀಪುರ ಪಟ್ಟಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಮಿಕರ ವಿಭಾಗದ ಉಪಾಧ್ಯಕ್ಷರನ್ನಾಗಿ ಎಂ.ಮಂಜುನಾಥ್ ಅವರನ್ನು ನೇಮಕ ಮಾಡಿ ನೇಮಕಾತಿ ಪತ್ರವನ್ನು ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯ ವಿತರಿಸಿದರು.

ಹೆಚ್.ಡಿ.ಕೋಟೆ ಅಥವಾ ಮೈಸೂರಲ್ಲಿ ಅರ್ಜುನನ ಸ್ಮಾರಕ

ಅರ್ಜುನ ಆನೆ ಸಮಾಧಿಗೆ ನಮನ ಸಲ್ಲಿಸಿದ ಶಾಸಕ ಅನಿಲ್ ಚಿಕ್ಕಮಾದು



ಅರ್ಜುನ ಆನೆ ಸಮಾಧಿಗೆ ಪೂಜೆ ಸಲ್ಲಿಸುತ್ತಿರುವ ಶಾಸಕ ಅನಿಲ್ ಚಿಕ್ಕಮಾದು.

ಹೆಚ್.ಡಿ.ಕೋಟೆ, ಜ.7– ಕಾಡಾನೆ ಸೆರೆ ಹಿಡಿಯುವ ಕಾರ್ಯಾಚರಣೆ ವೇಳೆ ಸಾವನ್ನಪ್ಪಿದ ಅರ್ಜುನ ಆನೆಯ ಸ್ಮಾರಕವನ್ನು ಹೆಚ್.ಡಿ.ಕೋಟೆ ಅಥವಾ ಮೈಸೂರಿನಲ್ಲಿ ನಿರ್ಮಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಹಾಸನ ಜಿಲ್ಲೆಯ ಯಸಳೂರು ಗ್ರಾಮದ ಸಮೀಪದ ಅರಣ್ಯ ಪ್ರದೇಶದಲ್ಲಿ ಅರ್ಜುನ ಆನೆಯ ಸಮಾಧಿಗೆ ತೆರಳಿ ನಮನ ಸಲ್ಲಿಸಿ ಮಾತನಾಡಿದ ಅವರು, 9 ಬಾರಿ ಅಂಬಾರಿ ಹೊತ್ತು ನಮ್ಮ ನಾಡು, ನುಡಿ, ಸಂಸ್ಕೃತಿ ಹಾಗೂ ತಾಲ್ಲೂಕಿನ ಕೀರ್ತಿಯನ್ನು ಪ್ರಪಂಚಕ್ಕೇ ಸಾರಿದ ಅರ್ಜುನ ಆನೆ ಸಾವಿನಿಂದ ತಾಲೂಕು ಮತ್ತು ರಾಜ್ಯಕ್ಕೆ ತುಂಬಲಾರದ ನಷ್ಟ ಮತ್ತು ನೋವು ಉಂಟಾಗಿದೆ ಎಂದರು.

ಕೋಟೆ ತಾಲೂಕಿನಲ್ಲಿ ಬಳ್ಳೆ ಆನೆ ಕ್ಯಾಂಪಿನಲ್ಲಿದ್ದ ಈ ಆನೆ ಪ್ರವಾಸಿಗರಿಗೆ, ರಾಜಕಾರಣಿ ಗಳಿಗೆ, ಜನರಿಗೆ ಅಚ್ಚುಮೆಚ್ಚಿನದ್ದಾಗಿತ್ತು. ಜತೆಗೆ ರಾಜ್ಯದ ಬಹುತೇಕ ಪ್ರದೇಶಗಳಲ್ಲಿ ಹುಲಿ, ಚಿರತೆ, ಕಾಡಾನೆ ಸೆರೆ ಕಾರ್ಯಾಚರಣೆಗಳಲ್ಲಿ ಪಾಲ್ಗೊಳ್ಳುತ್ತಿತ್ತು. ಆನೆ ಸಾವಿನ ಬಗ್ಗೆ ತನಿಖೆ ನಡೆಸುವಂತೆ ಸರ್ಕಾರಕ್ಕೆ ಒತ್ತಾಯ ಮಾಡಿದ್ದು, ತನಿಖೆ ಪ್ರಾರಂಭಗೊಂಡಿದೆ ಎಂದರು.

ಅರ್ಜುನ ಆನೆಯ ಸಾವಿನ ಸಂದರ್ಭದಲ್ಲಿ ನಾನು ಬೆಳಗಾವಿ ಅಧಿವೇಶನದಲ್ಲಿ ಭಾಗಿಯಾಗಿದ್ದರಿಂದ ಇದರ ಅಂತ್ಯಸಂಸ್ಕಾರಕ್ಕೆ ಹಾಗೂ ಇನ್ನಿತರ ಕಾರ್ಯ ಚಟುವಟಿಕೆಗಳಲ್ಲಿ ಭಾಗಿಯಾಗಲು ಸಾಧ್ಯವಾಗಿರಲಿಲ್ಲ. ಇಂದು ತಾಲೂಕಿನ ಕ್ಷೇತ್ರದ ಜನತೆ ಪರ ವಾಗಿ ಕಾರ್ಯಕರ್ತರು, ಮುಖಂಡರ ಜೊತೆಗೂಡಿ ಸಮಾಧಿ ಸ್ಥಳಕ್ಕೆ ಬಂದು ಅರ್ಜುನ ಆನೆಗೆ ನಮನ ಸಲ್ಲಿಸುತ್ತಿದ್ದೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜೈ ಕರ್ನಾಟಕ ರಾಜ್ಯ ಉಪಾಧ್ಯಕ್ಷ ಸತೀಶ್‌ಗೌಡ, ಮೈಮುಲ್ ನಿರ್ದೇಶಕ ಹಿರೇಗೌಡ, ಮುಖಂಡರಾದ ನರಸೀಪುರ ರವಿ, ಜಯರಾಮ್, ನಾಗನಹಳ್ಳಿ ಪ್ರದೀಪ, ಗಣೇಶಾಚಾರ್, ಪರಶಿವಮೂರ್ತಿ, ಛಾಯಾಗ್ರಹಕ ಸಂಘದ ಅಧ್ಯಕ್ಷ ಬಾಲು, ವನಸಿರಿ ಶಂಕರ, ಮನೋಜ್, ರಘುರಾಮ, ಉಮೇಶ, ವೆಂಕಿ, ಅರಣ್ಯ ಅಧಿಕಾರಿ ಮಧುಕುಮಾರ್, ಭರತ್, ಸುದರ್ಶನ್, ಕೃಷ್ಣ, ರವಿ, ಮಾದೇವಸ್ವಾಮಿ, ಕುಮಾರ್, ಮುರಳಿ, ಚಿಕ್ಕ, ಇನ್ನು ಮುಂತಾದವರು ಹಾಜರಿದ್ದರು.

> ದಮ್ಮನಕಟ್ಟೆ ಮತ್ತು ಬಳ್ಳೆ ಕೇಂದ್ರ ವ್ಯಾಪ್ತಿಯಲ್ಲಿ ಅರ್ಜುನ ಆನೆಯ ನೆನಪಿನಾರ್ಥವಾಗಿ ಗ್ರಂಥಾಲಯ ತೆರೆಯಲಾಗುವುದು. ಬಳ್ಳೆ ಅಥವಾ ದಮ್ಮನಕಟ್ಟೆಯಲ್ಲಿ ಒಂದು ಕೋಟಿ ರೂ. ವೆಚ್ಚದಲ್ಲಿ ಸ್ಥಾರಕವನ್ನು ಸ್ಥಾಪಿಸುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಭರವಸೆ ನೀಡಿದ್ದಾರೆ.
>
> –ಅನಿಲ್ ಚಿಕ್ಕಮಾದು, ಶಾಸಕ

ಟಿಪ್ಪರ್ ಲಾರಿ ಹರಿದು ಬೈಕ್ ಸವಾರ ಸಾವು

ನಂಜನಗೂಡು, ಮಲ್ಕುಂಡಿ, ಜ.7– ಟಿಪ್ಪರ್ ಲಾರಿ ಹರಿದ ಪರಿಣಾಮ ಬೈಕ್ ಸವಾರನೋರ್ವ ಸಾವನ್ನಪ್ಪಿರುವ ಘಟನೆ ತಾಲೂಕಿನ ಕಸುವಿನಹಳ್ಳಿ ಸಮೀಪ ಸಂಭವಿಸಿದೆ. ಹಲ್ಲರೆ ಗ್ರಾಮದ ಅಬ್ದುಲ್ ಸಲಾಂ (55) ಮೃತ ದುರ್ದೈವಿ.



ಜಮೀನಿನಲ್ಲಿ ಕೆಲಸ ಮುಗಿಸಿ, ಮಧ್ಯಾಹ್ನದ ಊಟಕ್ಕೆಂದು ತನ್ನ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಟಿಪ್ಪರ್ ಲಾರಿ ಹರಿದು ಸಾವನ್ನಪ್ಪಿದ್ದರು. ಸ್ಥಳದಲ್ಲಿ ಮೃತ ರೈತನ ಕುಟುಂಬಸ್ಥರು ಮತ್ತು ಹಲ್ಲರೆ ಗ್ರಾಮಸ್ಥರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ದಿನನಿತ್ಯ ಗ್ರಾಮದ ಮುಂಭಾಗದಲ್ಲಿ ಭಾರಿ ಗಾತ್ರದ ಟಿಪ್ಪರ್ ಮತ್ತು ಲಾರಿಗಳು ಜಲ್ಲಿಕಲ್ಲು ತುಂಬಿಕೊಂಡು ವೇಗವಾಗಿ ಸಂಚರಿಸುತ್ತಿವೆ. ಸಾಕಷ್ಟು ಬಾರಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ಈ ವಿಚಾರವಾಗಿ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರು ದೂರಿದರು. ಘಟನೆಯ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನೆಗೆ ಕಾರಣವಾದ ಲಾರಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಧರ್ಮಗುರುಗಳ ನಡೆ, ನುಡಿ ಸಾತ್ವಿಕತನದಿಂದ ಇರಬೇಕು

ಹಿರಿಯ ಸಾಹಿತಿ ಗೊ.ರು.ಚನ್ನಬಸಪ್ಪ



ಚಾಮುಂಡಿಬೆಟ್ಟ ಪಾದದ ರಸ್ತೆಯ ಶ್ರೀಕುಂದೂರುಮಠದ ಗದ್ದಿಗೆಯಲ್ಲಿ ಭಾನುವಾರ ಆಯೋಜಿಸಿದ್ದ ಡಾ.ಇಮ್ಮಡಿ ಶಿವಬಸವ ಸ್ವಾಮಿಗಳ 85ನೇ ಜಯಂತಿ ಸಂಸ್ಮರಣೋತ್ಸವ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಗೊ.ರು.ಚನ್ನಬಸಪ್ಪ ಉದ್ಘಾಟಿಸಿದರು. ಈ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕುಂದೂರು ಮಠದ ಡಾ.ಶರತ್‌ಚಂದ್ರ ಸ್ವಾಮಿ, ಗದಗದ ತೋಂಟದಾರ್ಯ ಮಹಾಸಂಸ್ಥಾನ ಮಠದ ಡಾ.ತೋಂಟದ ಸಿದ್ಧರಾಮಸ್ವಾಮೀಜಿ, ಕನಕಪುರ ದೇಗುಲ ಮಠದ ಡಾ.ಮುಮ್ಮಡಿ ನಿರ್ವಾಣ ಸ್ವಾಮೀಜಿ, ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಕೇಂದ್ರೀಯ ಸಂಸ್ಕೃತ ವಿವಿಯ ಕುಲಪತಿ ಪ್ರೊ.ಶ್ರೀನಿವಾಸ ವರಖೇಡಿ ಸೇರಿದಂತೆ ಮತ್ತಿತರರನ್ನು ಕಾಣಬಹುದು.

ಮೈಸೂರು, ಜ.7(ಜಿಎ)–ಧರ್ಮಗುರುಗಳಾಗುವುದು ಸಾಮಾನ್ಯವಲ್ಲ. ಅದು ಪೂರ್ಣ ಅಧ್ಯಯನ ಮತ್ತು ಆಧ್ಯಾತ್ಮ ಸಾಧನೆಯಿಂದ ದೊರೆಯುವ ಒಂದು ಸೇವಾವಕಾಶವಾಗಿದೆ. ಈ ಹಿನ್ನೆಲೆಯಲ್ಲಿ ಧರ್ಮಗುರುಗಳಾದವರ ನಡೆನುಡಿಗಳು ಸಾತ್ವಿಕತನದಿಂದ ಕೂಡಿರಬೇಕು ಎಂದು ಹಿರಿಯ ಸಾಹಿತಿ ಗೊ.ರು.ಚನ್ನಬಸಪ್ಪ ತಿಳಿಸಿದರು.

ಚಾಮುಂಡಿಬೆಟ್ಟ ಪಾದದ ರಸ್ತೆಯ ಶ್ರೀಕುಂದೂರು ಮಠದ ಗದ್ದಿಗೆಯಲ್ಲಿ ಭಾನುವಾರ ಆಯೋಜಿಸಿದ್ದ ಡಾ.ಇಮ್ಮಡಿ ಶಿವಬಸವ ಸ್ವಾಮಿಗಳ 85ನೇ ಜಯಂತಿ ಸಂಸ್ಮರಣೋತ್ಸವ, ಡಾ.ಶರತ್‌ಚಂದ್ರ ಸ್ವಾಮಿಗಳ ಪಟ್ಟಾಧಿಕಾರ ರಜತ ಮಹೋತ್ಸವ ಹಾಗೂ ವಿದ್ಯಾರ್ಥಿನಿಲಯ, ಗ್ರಂಥಾಲಯ ಕಟ್ಟಡದ ಭೂಮಿಪೂಜೆ ಹಾಗೂ ಗ್ರಂಥಗಳ ಲೋಕಾರ್ಪಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಧರ್ಮಗುರುಗಳಾಗುವುದು ಅರ್ಜಿ ಹಾಕಿ ಗಳಿಸುವ ಉದ್ಯೋಗವಲ್ಲ. ಬಂಡವಾಳ ವಿನಿಯೋಗಿಸಿ ಲಾಭಗಳಿಸುವ ಉದ್ಯಮವಲ್ಲ. ಅದೃಷ್ಟಚೀಟಿಯಿಂದ ಆಕಸ್ಮಿಕವಾಗಿ ಬರುವ ಬಹುಮಾನವಲ್ಲ. ವಂಶ ಪರಂಪರೆಯಿಂದ ಬರುವ ಪ್ರಾಪ್ತಿಯಲ್ಲ. ಸ್ವಾನುಬಲದಿಂದ ಪಡೆಯುವ ಮನ್ನಣೆಯಲ್ಲ. ಅದು ಪೂರ್ಣ ಅಧ್ಯಯನ ಮತ್ತು ಆಧ್ಯಾತ್ಮ ಸಾಧನೆಯಿಂದ ದೊರೆಯುವ ಒಂದು ಸೇವಾವಕಾಶವಾಗಿದೆ. ಈ ಹಿನ್ನೆಲೆಯಲ್ಲಿ ಧರ್ಮಗುರುಗಳಾದವರ ನಡೆನುಡಿಗಳು ಸಾತ್ವಿಕತನದಿಂದ ಇರಬೇಕು. ಹಾಗಾದರೆ ಸೇವೆಯಲ್ಲೂ ಬದ್ಧತೆಯಿಂದ ಇರುತ್ತದೆ ಎಂದರು.

ಡಾ.ಇಮ್ಮಡಿ ಶಿವಬಸವ ಸ್ವಾಮೀಜಿ ಅವರು ಅಂತಹ ಮಾದರಿ ಗುರುಗಳಾಗಿದ್ದರು. ಅವರು ಕುಂದೂರು ಮಠಾಧಿಪತಿಯಾಗಿದ್ದರೂ, ಎಂದಿಗೂ ಅದನ್ನು ತೋರಿಸಿಕೊಳ್ಳದೆ ಎಲ್ಲರೊಡನೊಂದಾಗಿ ಕೇವಲ ಸಾಹಿತ್ಯಾಧ್ಯಯನ, ಸಾಹಿತ್ಯ, ಸಂಶೋಧನೆ, ಸಾಹಿತ್ಯ ಸೃಷ್ಟಿ ಮತ್ತು ಪ್ರಸಾರ ಕಾರ್ಯಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದ ಸರಳ ಜೀವನ ಅವರದ್ದು ಎಂದು ಸ್ಮರಿಸಿದರು.

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರೊಡನೆ ಡಾ.ಇಮ್ಮಡಿ ಶಿವಬಸವ ಸ್ವಾಮೀಜಿ ಅವರು ಇಟ್ಟುಕೊಂಡಿದ್ದ ಅವಿನಾಭಾವ ಸಂಬಂಧ ಅನನ್ಯವಾದದ್ದು. ರಾಜೇಂದ್ರಗುರುಗಳ ಸಂಪರ್ಕದಲ್ಲಿದ್ದ ನನಗೆ, ಅವರೊಡನೆ ಸದಾ ಇರುತ್ತಿದ್ದ ಇಮ್ಮಡಿ ಶಿವಬಸವ ಸ್ವಾಮೀಜಿ ಅವರ ಸಂಪರ್ಕವೂ ದೊರಕುವಂತಾಯಿತು. ನಾನು 40 ವರ್ಷಗಳ ಕಾಲ ಸ್ವಾಮೀಜಿ ಜತೆ ಸಂಪರ್ಕದಲ್ಲಿದೆ. ನಾನು ಕಂಡಂತೆ ಅವರು ಬೇರ್ಯಾವ ಚಟುವಟಿಕೆಗಳಿಗೂ ಗಮನ ಕೊಡದೆ ಪೂರ್ಣವಾಗಿ ಸಾಹಿತ್ಯ ಚಿಂತನೆಯಲ್ಲೇ ಇದ್ದವರು. ಸನ್ಯಾಸಧರ್ಮವನ್ನು ಸ್ವೀಕರಿಸಿದರೂ ಕಾವಿ ಧರಿಸದೆ ಶ್ವೇತವಸ್ತ್ರಧಾರಿಯಾಗಿದ್ದವರು. ಶರಣ ಸಂಸ್ಕೃತಿಯಂತೆ ಅಂತರಂಗ–ಬಹಿರಂಗ ಶುದ್ಧವಾಗಿದ್ದವರು. ಲೋಕ ಪ್ರಜ್ಞಾವಿಕಾಸಕ್ಕೆ ಸಾಹಿತ್ಯ ಒಂದು ಪ್ರಭಾವ ಪೂರ್ಣಮಾಧ್ಯಮ ಎಂಬುದನ್ನು ಮನಗಂಡು ಸಾಹಿತ್ಯ ಸೇವೆಗೆ ಆದ್ಯತೆ ಕೊಟ್ಟಿದ್ದವರು. ಸಾಹಿತ್ಯ ಭವನದಲ್ಲಿ ತಮ್ಮದೇ ಆದ ಹಣತೆ ಹಚ್ಚಿಟ್ಟವರು. ಸಾಂಪ್ರದಾಯಿಕ ಧರ್ಮಗುರುಗಳ ಸಾಲಿಗಿಂತ ನಾಡಿನ ವಿದ್ವತ್ ಕ್ಷೇತ್ರದ ಖ್ಯಾತನಾಮರ ಸಾಲಿನಲ್ಲಿ ಹೆಚ್ಚು ಪರಿಚಿತರಾಗಿದ್ದರು ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ತುಮಕೂರು ಸಿದ್ಧಗಂಗಮಠದ ಡಾ.ಸಿದ್ಧಲಿಂಗ ಮಹಾಸ್ವಾಮೀಜಿ ಅವರು 'ಇಮ್ಮಡಿ ದೀಪ್ತಿ' ಚಿತ್ರ ಸಂಪುಟವನ್ನು, ಗದಗದ ತೋಂಟದಾರ್ಯ ಮಹಾ ಸಂಸ್ಥಾನ ಮಠದ ಡಾ.ತೋಂಟದ ಸಿದ್ದರಾಮ ಸ್ವಾಮೀಜಿ ಅವರು 'ದಿ ರಿಯಲ್ ಸ್ಟ್ಯಾಂಡ್' ಕೃತಿಯನ್ನು, ಶ್ರೀಮಠದ ಆ್ಯಪ್‌ನ್ನು ಕನಕಪುರ ದೇಗುಲ ಮಠದ ಡಾ.ಮುಮ್ಮಡಿ ನಿರ್ವಾಣ ಸ್ವಾಮೀಜಿ, 'ಮಿಲಿಂದ ಪ್ರಶ್ನೆ' ಕೃತಿಯನ್ನು ವಿಶ್ರಾಂತ ಕುಲಪತಿ ಪ್ರೊ.ಮಲ್ಲೇ ಪುರಂ ಜಿ.ವೆಂಕಟೇಶ್, 'ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ' ಕೃತಿಯನ್ನು ನವದೆಹಲಿಯ ಕೇಂದ್ರೀಯ ಸಂಸ್ಕೃತ ವಿವಿಯ ಕುಲಪತಿ ಪ್ರೊ.ಶ್ರೀನಿವಾಸ ವರಖೇಡಿ ಬಿಡುಗಡೆ ಮಾಡಿದರು. ಶಾಸಕರಾದ ಎಚ್.ಎಂ.ಗಣೇಶಪ್ರಸಾದ್, ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಮತ್ತಿತರರು ಹಾಜರಿದ್ದರು.

ತಂದೆ ತಾಯಿಯನ್ನ ವೃದ್ಧಾಶ್ರಮಕ್ಕೆ ಸೇರಿಸಿದರೆ ಕ್ರಿಮಿನಲ್ ಕೇಸ್

ಬೆಂಗಳೂರು, ಜ.7– ತಂದೆ ತಾಯಿಯನ್ನು ಸರಿಯಾಗಿ ನೋಡಿಕೊಳ್ಳದೆ ಅವರನ್ನು ಮಕ್ಕಳು ವೃದ್ಧಾಶ್ರಮಕ್ಕೆ ಸೇರಿಸುತ್ತಿರುವ ಪ್ರಕರಣಗಳು ನಗರದಲ್ಲಿ ನಡೆಯುತ್ತಿವೆ. ಹೀಗಾಗಿ ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಅವರ ಸೂಚನೆ ಮೇರೆಗೆ ಬೆಂಗಳೂರು ಪೊಲೀಸರು ಮಹತ್ಕಾರ್ಯಕ್ಕೆ ಕೈ ಹಾಕಿದ್ದು, ಇನ್ನು ಮುಂದೆ ಪೋಷಕರನ್ನು ವೃದ್ಧಾಶ್ರಮಕ್ಕೆ ಸೇರಿಸುವ ಮಕ್ಕಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಮುಂದಾಗಿದ್ದಾರೆ.

2024 ಹೊಸ ವರ್ಷದ ಬಳಿಕ ಹೊಸ ಹೆಜ್ಜೆ ಇಟ್ಟ ನಗರ ಪೊಲೀಸರು, ನಗರದ ವೃದ್ಧಾಶ್ರಮಗಳ ಮೇಲೆ ಕಣ್ಣಿಟ್ಟಿದ್ದಾರೆ. ತಂದೆ–ತಾಯಿಯನ್ನು ಸರಿಯಾಗಿ ನೋಡಿಕೊಳ್ಳದ ಮಕ್ಕಳ ಮೇಲೆ ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಕೇಸ್ ಬುಕ್ ಮಾಡುವಂತೆ ಪೊಲೀಸ್ ಕಮಿಷನರ್ ಬಿ. ದಯಾನಂದ್ ಸೂಚನೆ ನೀಡಿದ್ದಾರೆ.

ವೃದ್ಧಾಶ್ರಮಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿರುವ ಪೊಲೀಸರು, ತಮ್ಮ ಪೋಷಕರನ್ನು ವೃದ್ಧಾಶ್ರಮಕ್ಕೆ ಸೇರಿಸಿರುವ ಆರ್ಥಿಕವಾಗಿ ಶಕ್ತರಾಗಿರುವ ಮಕ್ಕಳನ್ನು ಪತ್ತೆಹಚ್ಚಲು ಮುಂದಾಗಿದ್ದಾರೆ. ವೃದ್ಧಾಶ್ರಮಗಳಿಂದ ತಮ್ಮ ಪೋಷಕರನ್ನು ಕರೆದೊಯ್ಯುವಂತೆ ಸೂಚನೆ ನೀಡಿದ್ದಾರೆ. ಆ ಮೂಲಕ ತಂದೆ ತಾಯಿಯನ್ನು ಮನೆಗೆ ವಾಪಸ್ ಕಳುಹಿಸಿ ಇಳಿ ವಯಸ್ಸಿನಲ್ಲಿ ಮಕ್ಕಳು ಮೊಮ್ಮಕ್ಕಳೊಂದಿಗೆ ಸಂತೋಷದಿಂದ ಇರುವಂತೆ ಮಾಡಲು ಪೊಲೀಸರು ಮುಂದಾಗಿದ್ದಾರೆ.

ನ್ಯಾಯಯುತ ಬೇಡಿಕೆ ಈಡೇರಿಕೆಗೆ ಒಗ್ಗಟ್ಟು ಅತ್ಯಗತ್ಯ



ನಾಮಧಾರಿಗೌಡ ಸಂಘದ ವತಿಯಿಂದ ಮೈಸೂರಿನ ಗಂಗೋತ್ರಿ ಬಡಾವಣೆಯ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಿದ್ದ ಸಾಧಕರಿಗೆ ಸನ್ಮಾನ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಸಂಘದ ಕೇಂದ್ರ ಸಮಿತಿ ಅಧ್ಯಕ್ಷ ಪಿ.ಚನ್ನರೇವಣ್ಣ ಉದ್ಘಾಟಿಸಿದರು.

ಮೈಸೂರು, ಜ.7– ಜನಸಂಖ್ಯೆಯಲ್ಲಿ ಅತೀಸಣ್ಣ ನಾಮಧಾರಿಗೌಡ ಸಮಾಜವಾದವರು ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಒಗ್ಗಟ್ಟಿನಿಂದ ಮುಂದುವರೆಯಬೇಕು ಎಂದು ಕರ್ನಾಟಕ ರಾಜ್ಯ ಬೀಜ ಸಂಸ್ಕರಣಾ ನಿಗಮದ ಮಾಜಿ ಅಧ್ಯಕ್ಷ ಡಿ.ಸುಂದರದಾಸ್ ಹೇಳಿದರು.

ನಾಮಧಾರಿಗೌಡ ಸಂಘದ ಮೈಸೂರು ನಗರ ವಲಯದ ವತಿಯಿಂದ ಗಂಗೋತ್ರಿ ಬಡಾವಣೆಯ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ಹಾಗೂ ವಧು–ವರರ ಸಮಾವೇಶ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೂರ್ನಾಲ್ಕು ಜಿಲ್ಲೆಗಳಿಗೆ ಸೀಮಿತವಾಗಿರುವ ಸಮಾಜ ಬಾಂಧವರು ಮಕ್ಕಳ ಶಿಕ್ಷಣದ ಕಡೆ ಹೆಚ್ಚು ಗಮನಹರಿಸಬೇಕು. ನ್ಯಾಯಯುತ ಬೇಡಿಕೆ ಈಡೇರಿಸಿಕೊಳ್ಳಲು ಒಗ್ಗಟ್ಟಿನಿಂದ ಮುಂದೆ ಸಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಭಾರತೀಯ ಸೇನೆಯ ಮೇಜರ್ ಡಾ.ಎಚ್.ಎಸ್.ಆಶಿತ್, ವಿಜ್ಞಾನಿ ಡಾ. ಎನ್.ಬಿ.ರಾಮಚಂದ್ರ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎಲ್. ಹರ್ಷಿತಾ, ಪಿಎಚ್‌ಡಿ ಪದವೀಧರರಾದ ಡಾ.ಕೆ.ಆರ್.ರಾಘವೇಂದ್ರ, ಡಾ.ಸಿ.ಎಸ್.ಹರ್ಷವರ್ಧನ್, ಡಾ.ವೈ.ಎನ್.ರಮ್ಯ, ಸಹಾಯಕ ಪ್ರಾಧ್ಯಾಪಕಿ ಕೃತಿಕಾ ಆಲನಹಳ್ಳಿ, ಸಮಾಜ ಸೇವಕ ಭಾಸ್ಕರ್, ಅಂತಾರಾಷ್ಟ್ರೀಯ ಕ್ರೀಡಾಪಟುಗಳಾದ ಬಿ.ಎನ್. ಉಷಾ, ಕೆ.ಎಸ್.ಶಿಲ್ಪಾ, ಸಾಹಿತಿ ಹೊ.ರಾ.ಪರಮೇಶ್, ರಕ್ತದಾನಿ ಬಿ.ಎಸ್.ಮಹೇಶ್, ಕೆ.ವೈ.ವೆಂಕಟೇಶ್, ಚಿರಾಗ್ ಎಚ್.ಗೌಡ, ಆರ್.ಧನ್ಯ, ಯುವ ಲೇಖಕಿ ಸಿಂಚನಾ ಮತ್ತಿತರರನ್ನು ಅಭಿನಂದಿಸಲಾಯಿತು.

ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ಪದವಿಯಲ್ಲಿ ಹೆಚ್ಚು ಅಂಕಗಳಿಸಿರುವ ವಿದ್ಯಾರ್ಥಿಗಳನ್ನು ನಗದು ಪುರಸ್ಕಾರದೊಂದಿಗೆ ಇದೇ ವೇಳೆ ಅಭಿನಂದಿಸಲಾಯಿತು. ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಸಂಘದ ಕ್ಯಾಲೆಂಡರ್ ಅನ್ನು ಗಣ್ಯರು ಬಿಡುಗಡೆ ಮಾಡಿದರು.

ಕಾರ್ಯಕ್ರಮವನ್ನು ಸಂಘದ ಕೇಂದ್ರ ಸಮಿತಿ ಅಧ್ಯಕ್ಷ ಪಿ.ಚನ್ನರೇವಣ್ಣ ಉದ್ಘಾಟಿಸಿದರು. ಸಂಘದ ನಗರ ವಲಯದ ಅಧ್ಯಕ್ಷ ಎಂ.ಎನ್.ಸೋಮಶೇಖರ್, ಮಾಜಿ ಅಧ್ಯಕ್ಷ ಸಿ.ಜಿ.ನಾಗರಾಜು, ಕೈಗಾರಿಕೋದ್ಯಮಿ ಕೆಎನ್.ನರಸಿಂಹಮೂರ್ತಿ, ಎಚ್.ರಾಜಣ್ಣ ಯುವ ಕಾಂಗ್ರೆಸ್ ಮುಖಂಡ ಪ್ರದ್ಯುಮ್ನ ಆಲನಹಳ್ಳಿ, ಎಂ.ಸುಬ್ರಹ್ಮಣ್ಯ, ಜಗನ್ನಾಥ್, ಹೆಚ್.ಕೆಪ್ರಸನ್ನ, ಎಂ.ರಾಜಶೇಖರ್, ಎಂ.ಎನ್. ಜಯಕುಮಾರ್, ಜ್ಞಾನಾನಂದ, ಡಾ.ಎಚ್.ಆರ್.ಪ್ರಕಾಶ್, ವಕೀಲ ಎಂ.ಎಸ್.ಜಿನಚಂದ್ರನ್, ಬಿ.ಎನ್. ಹೇಮಲತಾ ಮತ್ತಿತರರು ಉಪಸ್ಥಿತರಿದ್ದರು.

ಆಫ್ಘಾನ್ ವಿರುದ್ಧದ ಟಿ20 ಸರಣಿಗೆ ಭಾರತ ತಂಡ ಪ್ರಕಟ

ಮುಂಬೈ, ಜ.7– ಆಫ್ಘಾನಿಸ್ತಾನ ವಿರುದ್ಧದ 3 ಪಂದ್ಯಗಳ ಟಿ20 ಸರಣಿಗೆ ಭಾರತ ತಂಡವನ್ನು ಬಿಸಿಸಿಐ ಭಾನುವಾರ ಪ್ರಕಟಿಸಿದೆ.


ವಿಶೇಷವೆಂದರೆ 2023ರ ಏಕದಿನ ವಿಶ್ವಕಪ್ ಬಳಿಕ ಟಿ20 ಪಂದ್ಯಗಳಿಂದ ದೂರ ಉಳಿಯುವ ನಿರ್ಧಾರ ಮಾಡಿದ್ದ ನಾಯಕ ರೋಹಿತ್ ಶರ್ಮಾ ಅವರಿಗೆ ಮತ್ತೆ ಟಿ20 ಪಂದ್ಯಗಳಿಗೆ ನಾಯಕತ್ವದ ಹೊಣೆ ನೀಡಲಾಗಿದೆ.

ರೋಹಿತ್ ಮತ್ತು ವಿರಾಟ್ ಕೊಹ್ಲಿ ಏಕದಿನ ಮತ್ತು ಟೆಸ್ಟ್ ಪಂದ್ಯಗಳಲ್ಲಿ ನಿರಂತರವಾಗಿ ಆಡುತ್ತಿದ್ದರು. ಹಲವು ತಿಂಗಳಿನಿಂದ ಟಿ20 ಪಂದ್ಯಗಳಲ್ಲಿ ಕಾಣಿಸಿಕೊಂಡಿರಲಿಲ್ಲ. ಈ ವರ್ಷದ ಜೂನ್‌ನಲ್ಲಿ ಟಿ20 ವಿಶ್ವಕಪ್ ಟೂರ್ನಿ ಆಯೋಜನೆಗೊಂಡಿರುವ ಹಿನ್ನೆಲೆಯಲ್ಲಿ ಚುಟುಕು ಸ್ವರೂಪದ ಟೂರ್ನಿಗೆ ಇಬ್ಬರು ಎಂಟ್ರಿ ಕೊಟ್ಟಿದ್ದಾರೆ.

ಚುಟುಕು ಸ್ವರೂಪಕ್ಕೆ ಇವರಿಬ್ಬರನ್ನು ಆಯ್ಕೆ ಮಾಡುವ ಕುರಿತು ಸಾಕಷ್ಟು ಊಹಾಪೋಹಗಳು ಇದ್ದವು. ಈ ನಡುವೆ ಸೂರ್ಯಕುಮಾರ್ ಯಾದವ್ ಮತ್ತು ಹಾರ್ದಿಕ್ ಪಾಂಡ್ಯ ಇಬ್ಬರೂ ಗಾಯದಿಂದಾಗಿ ಆಯ್ಕೆಗೆ ಲಭ್ಯರಿಲ್ಲ. ಹೀಗಾಗಿ ರೋಹಿತ್ ಮತ್ತು ಕೊಹ್ಲಿಯನ್ನು ತಂಡದಲ್ಲಿ ಹಿರಿಯ ಬ್ಯಾಟರ್‌ಗಳಾಗಿ ಬಿಸಿಸಿಐ ತಂಡಕ್ಕೆ ವಾಪಸ್ ಕರೆಸಿಕೊಂಡಿದೆ.

ಸಂಜುಗೆ ಮತ್ತೆ ಚಾನ್ಸ್: ಯುವ ಆರಂಭಿಕರಾದ ಶುಭಮನ್ ಗಿಲ್ ಮತ್ತು ಯಶಸ್ವಿ ಜೈಸ್ವಾಲ್ ಸಾಮರ್ಥ್ಯ ತೋರಿ ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಂಡಿದ್ದಾರೆ. ಆದರೆ ಇಶಾನ್ ಕಿಶನ್ ಅವರನ್ನು ತಂಡದಿಂದ ಹೊರಗಿಡಲಾಗಿದೆ. ಸಂಜು ಸ್ಯಾಮ್ಸನ್ ತಮ್ಮ ಸ್ಥಾನಕ್ಕೆ ಮರಳಿದ್ದು, ಕಳೆದ ತಿಂಗಳು ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಯ 3ನೇ ಏಕದಿನ ಪಂದ್ಯದಲ್ಲಿ ಶತಕ ಸಿಡಿಸಿದ್ದ ವಿಕೆಟ್ ಕೀಪರ್ ಹಾಗೂ ಬ್ಯಾಟರ್ ಚುಟುಕು ಸ್ವರೂಪದಲ್ಲೂ ಅಬ್ಬರಿಸುವ ನಿರೀಕ್ಷೆ ಇದೆ. ಮತ್ತೋರ್ವ ವಿಕೆಟ್ ಕೀಪರ್ ಆಗಿ ಜಿತೇಶ್ ಶರ್ಮಾ ಕೂಡ ತಂಡದಲ್ಲಿ ಸ್ಥಾನ ಉಳಿಸಿಕೊಂಡಿದ್ದಾರೆ.

ಭಾರತ ತಂಡ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ತಿಲಕ್ ವರ್ಮಾ, ರಿಂಕು ಸಿಂಗ್, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಶಿವಂ ದುಬೆ, ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ರವಿ ಬಿಷ್ಣೋಯಿ, ಕುಲ್ದೀಪ್ ಯಾದವ್, ಅರ್ಷದೀಪ್ ಸಿಂಗ್, ಅವೇಶ್ ಖಾನ್, ಮುಕೇಶ್ ಕುಮಾರ್.



ಮೈಸೂರು ನಗರ ಕಾನೂನು–ಸುವ್ಯವಸ್ಥೆ ವಿಭಾಗದ ಡಿಸಿಪಿ ಮುತ್ತುರಾಜ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ದಂಪತಿಯನ್ನು ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ, ಭೈರವ ಗ್ರೂಪ್ ಮಾಲೀಕ ಮಹದೇವ್, ಶ್ಯಾಮಲಾ ಗ್ರೂಪ್‌ನ ಆನಂದ್, ಅಭಿಷೇಕ್, ಶಂಕರ್, ಗಂಗಾ ಮುಂತಾದವರು ಅಭಿನಂದಿಸಿದರು.